10 May 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮಕ್ಕಳ ಬೆಳವಣಿಗೆಗೆ ತಾಯಿಯ ವಾತ್ಸಲ್ಯ ಅತ್ಯಗತ್ಯ, ಹೀಗಾಗಿ ಅಮ್ಮಾ ಎನ್ನುವ ಪದವೇ ಅಮೋಘ!

-ಸ್ನೇಹಾ ಆನಂದ್

info.varthaman@gmail.com



ಅಮ್ಮಂದಿರ ದಿನದ ಶುಭಾಶಯಗಳು

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 89 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಇಂದು ವಿಜಯ್ 'ಸರ್ಕಾರ್'

### ಕೊನೆಗೂ 120 ಶಾಸಕರ ಬೆಂಬಲ । ಪ್ರಮಾಣ ವಚನಕ್ಕೆ ಸಿದ್ಧತೆ


**ಚೆನ್ನೈ:** ತಮಿಳುನಾಡಿನಲ್ಲಿ ಕಳೆದ ಐದು ದಿನಗಳಿಂದ ನಡೆಯುತ್ತಿದ್ದ ರಾಜಕೀಯ ಕಣ್ಣಾ ಮುಚ್ಚಾಲೆಗೆ ಕೊನೆಗೂ ತೆರೆಬಿದ್ದಿದೆ. ಶತಪ್ರಯತ್ನಗಳ ಬಳಿಕ ವಿಜಯ್ ನೇತೃತ್ವದ ಟಿವಿಕೆಗೆ 120 ಶಾಸಕರ ಬಲ ಸಿಕ್ಕಿದೆ. ಬಳಿಕ ವಿಜಯ್ ಅವರು ಲೋಕಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ವಿಜಯ್ ಅವರಿಗೆ ಕೊನೆಗೂ ಸರ್ಕಾರ ರಚನೆಗೆ ರಾಜ್ಯಪಾಲರು ಅವಕಾಶ ನೀಡಿದ್ದಾರೆ. ಭಾನುವಾರ ಮಧ್ಯಾಹ್ನ 3 ಗಂಟೆಗೆ ವಿಜಯ್ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ವಿಜಯ್ ಪ್ರಮಾಣ ವಚನಕ್ಕೆ ಸಕಲ ಸಿದ್ಧತೆ ನಡೆಯುತ್ತಿದೆ.

ವಿಸಿಕೆಯ ಬೆಂಬಲದಿಂದ ಟಿವಿಕೆಗೆ ಅತ್ಯಂತ ಮಹತ್ವದ ಎರಡು ಸ್ಥಾನಗಳು ಸೇರ್ಪಡೆಯಾಗುತ್ತವೆ. ವಿಜಯ್ ನೇತೃತ್ವದ ಮೈತ್ರಿಗೆ ಈಗಾಗಲೇ 116 ಶಾಸಕರ ಬೆಂಬಲವಿತ್ತು. ಇದರಲ್ಲಿ ಕಾಂಗ್ರೆಸ್‌ನ ಐದು ಶಾಸಕರು ಹಾಗೂ ಎಡಪಂಥೀಯ ಪಕ್ಷಗಳ ನಾಲ್ವರು ಶಾಸಕರೂ ಸೇರಿದ್ದಾರೆ. ವಿಸಿಕೆಯ ಇಬ್ಬರು ಶಾಸಕರ ಬೆಂಬಲ ಸಿಕ್ಕಿದ್ದರಿಂದ ಮೈತ್ರಿಯ ಬಲ 118ಕ್ಕೆ ಏರಿತ್ತು. ಇದೀಗ ಐಯುಎಂಎಲ್ ನ ಇಬ್ಬರು ಶಾಸಕರು ಸಹ ಬೆಂಬಲ ಸೂಚಿಸಿದ್ದರಿಂದ ಟಿವಿಕೆ ಬಲ 120ಕ್ಕೆ ತಲುಪಿದೆ.

ಇನ್ನು ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು ಎರಡು ದಿನಗಳ ಕೇರಳ ಪ್ರವಾಸ ಕೈಗೊಳ್ಳಬೇಕಿತ್ತು. ಆದರೆ ಇದೀಗ ವಿಜಯ್ ಗೆ ಸರ್ಕಾರ ರಚಿಸಲು ಬೇಕಿರುವಷ್ಟು ಶಾಸಕರ ಬಲ ಸಿಕ್ಕಿದ್ದರಿಂದ ರಾಜ್ಯಪಾಲರು ತಮ್ಮ ಕೇರಳ ಪ್ರವಾಸವನ್ನು ರದ್ದು ಪಡಿಸಿದರು. ಸಂಜೆ ಲೋಕಭವನಕ್ಕೆ ತೆರಳಿದ ವಿಜಯ್ 120 ಶಾಸಕರ ಬೆಂಬಲದ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸುವ ಮೂಲಕ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ಅತಿ ದೊಡ್ಡ ಪಕ್ಷವಾಗಿ ಟಿವಿಕೆ ಹೊರಹೊಮ್ಮಿದ ಬಳಿಕ ವಿಜಯ್ ನಾಲ್ಕು ದಿನದಲ್ಲಿ ನಾಲ್ಕು ಬಾರಿ ರಾಜ್ಯಪಾಲರನ್ನು ಭೇಟಿ ಮಾಡಿದ್ದರು. ಆದರೆ ಪ್ರಯತ್ನಗಳು ವಿಫಲವಾಗಿದ್ದವು. ಆದರೆ ಇಂದು 5ನೇ ಬಾರಿಗೆ ರಾಜ್ಯಪಾಲರನ್ನು ವಿಜಯ್ ಭೇಟಿಯಾದರು.



### ವಿಜಯ್‌ಗೆ ವಿಸಿಕೆ ಬೆಂಬಲ

**ಚೆನ್ನೈ: ತಮಿಳುನಾಡಿನಲ್ಲಿ ಸರ್ಕಾರ ರಚನೆ ಗಾಗಿ ಬಹುಮತಕ್ಕೆ ನಡೆಯುತ್ತಿದ್ದ ಕಸರತ್ತಿಗೆ ಕೊನೆಗೂ ತೆರೆ ಬಿದ್ದಿದೆ. ಟಿವಿಕೆಗೆ ವಿಸಿಕೆ ಬೇಷರತ್ ಬೆಂಬಲ ಘೋಷಿಸಿದೆ. ಈ ಮೂಲಕ ವಿಜಯ್‌ಗೆ 120 ಶಾಸಕರ ಬೆಂಬಲ ಸಿಕ್ಕಿದೆ. ವಿಸಿಕೆ ಇಬ್ಬರು ಶಾಸಕರು ಟಿವಿಕೆಗೆ ಬೆಂಬಲ ಪತ್ರ ನೀಡಿದ್ದಾರೆ ಎನ್ನಲಾಗಿದೆ. ಆದರೆ, ಬೆಂಬಲದ ಕುರಿತು ವಿಸಿಕೆ ಇನ್ನೂ ಅಧಿಕೃತವಾಗಿ ಹೇಳಿಲ್ಲ. ವಿಸಿಕೆ ಬೆಂಬಲವು ಟಿವಿಕೆ ಬಹುಮತಕ್ಕೆ ನಿರ್ಣಾಯಕವಾಗಿದೆ. ವಿಸಿಕೆಯ ಎರಡು ಸ್ಥಾನಗಳನ್ನು ಸೇರಿಸಿದರೆ 120ಕ್ಕೆ ಏರುತ್ತದೆ.**

## ರಾಜ್ಯಕ್ಕೆ ತ.ನಾಡು ಶಾಸಕರು ಆಗಮಿಸಿಲ್ಲ: ಡಿ.ಕೆ.ಶಿವಕುಮಾರ್

**ಬೆಂಗಳೂರು:** ತಮಿಳುನಾಡಿನ ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ ಬಂದಿದ್ದಾರೆ ಎಂಬುದು ಸುಳ್ಳು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ಸುದ್ದಿಗಾರರ ಪ್ರಶ್ನೆಗಳಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, ನಾನು ಪಕ್ಷ ಹೇಳಿದಂತೆ ಕೇಳುವೆ, ತಮಿಳುನಾಡು ವಿಚಾರ ನನಗೆ ಗೊತ್ತಿಲ್ಲ ಎಂದರು.

ತಮಿಳುನಾಡಿನ ಶಾಸಕರು ಈಗಲ್ ಟನ್ ರೆಸಾರ್ಟ್‌ಗೆ ಬಂದಿದ್ದಾರೆಯೇ ಎಂಬ ಪ್ರಶ್ನೆಗೆ, ಯಾವ ಶಾಸಕರೂ ಈಗಲ್ ಟನ್ ರೆಸಾರ್ಟ್‌ಗೆ ಬಂದಿಲ್ಲ. ನವೀಕರಣ ಹಿನ್ನೆಲೆಯಲ್ಲಿ ಈಗಲ್ ಟನ್ ರೆಸಾರ್ಟ್ ಮುಚ್ಚಲಾಗಿದೆ ಎಂದರು. ತಮಿಳುನಾಡಿನಲ್ಲಿ ಕ್ಷಣ ಕ್ಷಣಕ್ಕೂ ಪರಿಸ್ಥಿತಿ ಬದಲಾಗುತ್ತಿದೆಯಲ್ಲ ಎಂದಾಗ, ನನಗೆ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರು.

ಪುದುಚೆರಿ ಪ್ರವಾಸದ ಬಗ್ಗೆ ಕೇಳಿದಾಗ, ನಾನು ಬಹಳ ದಿನಗಳಿಂದ ದೇವಾಲಯಕ್ಕೆ ಹೋಗಿರಲಿಲ್ಲ. ಹೀಗಾಗಿ ಶನೇಶ್ವರ ದೇವಾಲಯಕ್ಕೆ ಹೋಗುತ್ತಿದ್ದೇನೆ ಎಂದರು.

## ಕೆರೆಯಲ್ಲಿ ಈಜಲು ತೆರಳಿದ್ದ ಅಣ್ಣ-ತಮ್ಮ ನೀರುಪಾಲು

**ಕೋಲಾರ:** ಕೆರೆಯಲ್ಲಿ ಈಜಲು ಹೋಗಿದ್ದ ಅಣ್ಣ-ತಮ್ಮ ಇಬ್ಬರೂ ನೀರುಪಾಲಾಗಿರುವ ಘಟನೆ ಕೋಲಾರದಲ್ಲಿ ನಡೆದಿದೆ. ಶ್ರೀನಿವಾಸಪುರ ತಾಲೂಕಿನ ಪಚ್ಚರಮಾಕಲಹಳ್ಳಿ ಬಳಿ ದುರ್ಘಟನೆ ಸಂಭವಿಸಿದೆ.

ಮೃತಪಟ್ಟ ಯುವಕರನ್ನು ರೋಣೂರು ಹೋಬಳಿ ವ್ಯಾಪ್ತಿಯ ಚಾಂಪಲ್ಲಿ ಪುಟ 2ಕ್ಕೆ

## ಭೀಕರ ಅಪಘಾತ: 6 ಮಂದಿ ಸಾವು

### ತುಮಕೂರು ಮತ್ತು ಮಂಡ್ಯ ಸಮೀಪ ಪ್ರತ್ಯೇಕ ಅಪಘಾತದಲ್ಲಿ ದುರಂತ

**ಮಂಡ್ಯ/ತುಮಕೂರು:** ಮಂಡ್ಯ ಮತ್ತು ತುಮಕೂರು ಜಿಲ್ಲೆಯ ಕುಣಿಗಲ್ ಸಮೀಪ ನಡೆದ ಪ್ರತ್ಯೇಕ ಎರಡು ಅಪಘಾತದಲ್ಲಿ 6 ಮಂದಿ ಸಾವನ್ನಪ್ಪಿದ್ದಾರೆ. ಕುಣಿಗಲ್ ಬಳಿ ನಡೆದ ಅಪಘಾತದಲ್ಲಿ ಗಂಡ-ಹೆಂಡತಿ ಸೇರಿ ನಾಲ್ವರು ಸಾವನ್ನಪ್ಪಿದ್ದಾರೆ. ಮಂಡ್ಯ ಸಮೀಪದ ನಡೆದ ಅಪಘಾತದಲ್ಲಿ ತಂದೆ-ಮಗ ಜೀವ ಬಿಟ್ಟಿದ್ದಾರೆ.

**ತುಮಕೂರು ವರದಿ:** ಕುಣಿಗಲ್ ತಾಲೂಕಿನ ಹೊನ್ನೇನಹಳ್ಳಿ ಬಳಿ ಶನಿವಾರ ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಲಾರಿ ಹಾಗೂ ಕಾರಿನ ನಡುವೆ ಭೀಕರ ಅಪಘಾತ ಸಂಭವಿಸಿದೆ.

ಶನಿವಾರ ಮಧ್ಯಾಹ್ನ ಗೊಬ್ಬರ ತುಂಬಿದ್ದ ಲಾರಿಗೆ ಆಲ್ಟೋ ಕಾರು ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಛಿದ್ರ ಛಿದ್ರವಾಗಿದೆ. ಭೀಕರ ಅಪಘಾತದಲ್ಲಿ ಕಾರು ಚಾಲಕ ಸೇರಿದಂತೆ ಮಂಡ್ಯ ಮೂಲದ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಂಡ್ಯ ಜಿಲ್ಲೆಯ ಸ್ವರ್ಣಸಂದ್ರದ ಗಾಯತ್ರಿ (63) ಮತ್ತು ಪತಿ ಕುಮಾರ ನರಸಿಂಹಸ್ವಾಮಿ (65) ಮೃತಪಟ್ಟವರು. ಮತ್ತೊಬ್ಬರ ಹೆಸರು ಸಹ ಗಾಯತ್ರಿ ಎಂದು ಗುರುತಿಸಲಾಗಿದೆ. ಇನ್ನೊಬ್ಬರ ಗುರುತು ಪತ್ತೆಯಾಗಿಲ್ಲ. ಮಂಡ್ಯ ನಿವಾಸಿ ಕುಮಾರ್ ಅವರು ಕುಟುಂಬದೊಂದಿಗೆ ತುಮಕೂರು ಜಿಲ್ಲೆಯ ದೇವರಾಯನದುರ್ಗ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆದು ವಾಪಸ್ ಬರುತ್ತಿದ್ದಾಗ ಪುಟ 2ಕ್ಕೆ





### ಕಾರು ಪಲ್ಟಿ: ತಂದೆ-ಮಗ ಸಾವು

**ಮಂಡ್ಯ:** ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಶನಿವಾರ ಭೀಕರ ಅಪಘಾತ ಸಂಭವಿಸಿದೆ. ಕಾರು ಪಲ್ಟಿಯಾಗಿ ತಂದೆ ಮತ್ತು ಮಗ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಾಲಕಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರನ್ನು ಕಿರಣ್ ಪುಟ 2ಕ್ಕೆ

## ಲೋಕಭವನ ಬಿಜೆಪಿ, ಆರ್‌ಎಸ್‌ಎಸ್ ಕಚೇರಿ

### ಬಿಜೆಪಿಯೇತರ ಪಕ್ಷಗಳು ಸರ್ಕಾರ ರಚಿಸದಂತೆ ತಡೆ: ಸಚಿವ ಪ್ರಿಯಾಂಕ್ ಖರ್ಗೆ

**ಕಲಬುರಗಿ:** ರಾಜ್ಯಪಾಲರ ಕಚೇರಿಗಳಾದ ಲೋಕಭವನಗಳು ಬಿಜೆಪಿ, ಆರ್‌ಎಸ್‌ಎಸ್ ಕಚೇರಿಗಳಾಗಿವೆ. ಬಿಜೆಪಿಯೇತರ ಪಕ್ಷಗಳು ಸರ್ಕಾರ ರಚಿಸದಂತೆ ಕೇಂದ್ರ ಸರ್ಕಾರ ರಾಜ್ಯಪಾಲರನ್ನು ಬಳಸಿಕೊಂಡು ಪ್ರಯತ್ನ ನಡೆಸುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬಹುಮತ ಇಲ್ಲದಿದ್ದರೂ ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ, ಮಹಾರಾಷ್ಟ್ರದಲ್ಲಿ ದೇವೇಂದ್ರ ಫಡಣವೀಸ್ ಅವರಿಗೆ ಅವಕಾಶ ಕೊಟ್ಟಿದ್ದು ಏಕೆ? ಅವರಿಗೊಂದು ನ್ಯಾಯ, ಬೇರೆ ಪಕ್ಷದವರೊಂದಿಗೆ ನ್ಯಾಯವೇ ಎಂದು ಪ್ರಶ್ನಿಸಿದರು. ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಗೆದ್ದ ಪಕ್ಷವನ್ನು ಸರ್ಕಾರ ರಚನೆಗೆ ಆಹ್ವಾನಿಸುವುದು ರಾಜ್ಯಪಾಲರ ಕರ್ತವ್ಯ. ಆದರೆ, ಉದ್ದೇಶಪೂರ್ವಕವಾಗಿ ತಮಿಳುನಾಡಿನಲ್ಲಿ ಟಿವಿಕೆ ಪಕ್ಷದ ಅಧ್ಯಕ್ಷ ವಿಜಯ್ ಅವರನ್ನು ಬಹುಮತ ಸಾಬೀತು ಮಾಡುವಂತೆ ತಿಳಿಸಿ ವಾಪಸ್ ಕಳುಹಿಸಿದ್ದಾರೆ. ಬಹುಮತ ಸಾಬೀತು ಪಡಿಸಬೇಕಿರುವುದು ವಿಧಾನಸಭೆಯಲ್ಲಿಯೇ ಹೊರತು ರಾಜ್ಯಪಾಲರ ಮನೆಯಲ್ಲಿ ಅಲ್ಲ. ಇಷ್ಟೊಂದು ಸರಳ ಸತ್ಯ ರಾಜ್ಯಪಾಲರಿಗೆ ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.

ಆರ್‌ಎಸ್‌ಎಸ್ ಬೆಂಬಲವಿಲ್ಲದೇ, ಐಟಿ, ಇಡಿ, ಸಿಬಿಐಗಳನ್ನು ವಿರೋಧ ಪಕ್ಷಗಳ ಮೇಲೆ ಛೂಬಿಡದೇ, ರಾಜ್ಯಪಾಲರ ಹಸ್ತಕ್ಷೇಪವಿಲ್ಲದೇ ಬಿಜೆಪಿ ಯಾವುದೇ ರಾಜ್ಯದಲ್ಲಿ ಚುನಾವಣೆ ಎದುರಿಸಿದರೂ ಹೀನಾಯವಾಗಿ ಸೋಲು ಕಾಣಲಿದೆ ಎಂದರು. ತಮಿಳುನಾಡಿನಲ್ಲಿ ಸಂವಿಧಾನ ಉಳಿಸುವ, ಜಾತ್ಯತೀತ ಪರಂಪರೆಯನ್ನು ಮುಂದಕ್ಕೆ ಒಯ್ಯುವ ಉದ್ದೇಶದಿಂದ ಕಾಂಗ್ರೆಸ್ ಡಿಎಂಕೆ ಮಿತ್ರಪಕ್ಷವಾಗಿದ್ದರೂ ಟಿವಿಕೆಗೆ ಬೆಂಬಲ ವ್ಯಕ್ತಪಡಿಸಿದೆ. ಈ ನಿರ್ಧಾರವನ್ನು ಪಕ್ಷದ ಸ್ಥಳೀಯ ನಾಯಕರೊಂದಿಗೆ ಚರ್ಚೆ ಮಾಡಿದ ಬಳಿಕವೇ ಕೈಗೊಳ್ಳಲಾಗಿದೆ ಎಂದರು.



> **ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಅಕ್ರಮ ನೇಮಕಾತಿ ನಡೆದಿರುವ ಬಗ್ಗೆ ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆ. ವಿ.ವಿ.ಯ ಕಾರ್ಯಕಾರಿ ಮಂಡಳಿ ಸದಸ್ಯರಾದ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರು ಈಚೆಗೆ ನಡೆದ ನೇಮಕಾತಿಗಳ ಬಗ್ಗೆ ವರದಿ ತರಿಸಿಕೊಂಡಿದ್ದಾರೆ. ಸಿಯುಕೆಯು ಆರ್‌ಎಸ್‌ಎಸ್ ಕೇಂದ್ರವಾಗಿದೆ. ಅಲ್ಲಿ ಬೀದರ್ ಸಂಸದರು, ಕಲಬುರಗಿ ಸಂಸದರಿಗೂ ಒಳಗೆ ಪ್ರವೇಶ ನೀಡಲು ನಿರಾಕರಿಸಿದ್ದಾರೆ.**
>
> **ಪ್ರಿಯಾಂಕ್ ಖರ್ಗೆ** ಸಚಿವ


## ಪಶ್ಚಿಮ ಬಂಗಾಳದ ಸಿಎಂ ಪ್ರಮಾಣ ಸ್ವೀಕಾರ

**ಕೋಲ್ಕತ್ತ:** ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಶನಿವಾರ ಪ್ರಮಾಣವಚನ ಸ್ವೀಕರಿಸಿದರು. ಪಶ್ಚಿಮ ಬಂಗಾಳದ ಕೇಸರಿ ಪಕ್ಷದ ಮೊದಲ ಮುಖ್ಯಮಂತ್ರಿ ಎನಿಸಿದ್ದಾರೆ.

ರಾಜ್ಯಪಾಲ ಆರ್.ಎನ್.ರವಿ ಅವರು ಸುವೇಂದು ಅವರಿಗೆ ಪ್ರಮಾಣ ಬೋಧಿಸಿದರು. ಮುಖ್ಯಮಂತ್ರಿ ಜೊತೆ ಸಚಿವರಾಗಿ ಅಗ್ನಿಮಿತ್ರಾ ಪಾಲ್, ದಿಲೀಪ್ ಘೋಷ್, ಅಶೋಕ್ ಕಿರ್ತಾನಿಯಾ, ನಿತೀಶ್ ಪ್ರಾಮಾಣಿಕ್, ಕ್ಷುದಿರಾಮ್ ತುಡು ಪ್ರಮಾಣ ಸ್ವೀಕರಿಸಿದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರ ಸಮ್ಮುಖದಲ್ಲಿ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಪ್ರಮಾಣವಚನ ಸಮಾರಂಭ ನಡೆಯಿತು. 294 ಸದಸ್ಯ ಬಲದ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಫಲಿತಾಂಶ ಮೇ 4ರಂದು ಪ್ರಕಟವಾಗಿತ್ತು. ಬಿಜೆಪಿ 207 ಸ್ಥಾನಗಳನ್ನು ಗೆದ್ದು ಭಾರಿ ಬಹುಮತದೊಂದಿಗೆ ಅಧಿಕಾರಕ್ಕೇರಿದೆ.

ಕೇಸರಿ ಪಕ್ಷವು ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಅಧಿಕಾರಕ್ಕೇರಿದೆ. ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷ 15 ವರ್ಷಗಳ ಬಳಿಕ ಅಧಿಕಾರ ಕಳೆದುಕೊಂಡಂತಾಗಿದೆ. ಟಿಎಂಸಿ 80 ಕಡೆ ಜಯ ಸಾಧಿಸಿದೆ. ಕಾಂಗ್ರೆಸ್ ಮತ್ತು ಆಮ್ ಜನತಾ ಉನ್ನಾಯನ್ ಪಕ್ಷ ತಲಾ ಎರಡು ಕ್ಷೇತ್ರಗಳಲ್ಲಿ ಗೆದ್ದಿವೆ. ಸಿಪಿಐ(ಎಂ) ಮತ್ತು ಆಲ್ ಇಂಡಿಯಾ ಸೆಕ್ಯುಲರ್ ಫ್ರಂಟ್ ಒಂದೊಂದು ಕಡೆ ಜಯ ಸಾಧಿಸಿವೆ.




## ಬಿಟ್ ಕಾಯಿನ್ ಹಗರಣ: ಹ್ಯಾಕರ್ ಶ್ರೀಕಿ ಬಂಧನ

**ಬೆಂಗಳೂರು:** ಬಿಟ್ ಕಾಯಿನ್ ಬಹುಕೋಟಿ ಹಗರಣ ಸಂಬಂಧ ಇಡಿ ಅಧಿಕಾರಿಗಳು ಹ್ಯಾಕರ್ ಶ್ರೀಕಿ ಸೇರಿದಂತೆ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಶ್ರೀಕಿ ಅಲಿಯಾಸ್ ಶ್ರೀಕೃಷ್ಣ, ರಾಬಿನ್ ಖಂಡೇವಾಲ ಮತ್ತು ಸುನೀಶ್ ಹೆಗ್ಡೆ ಬಂಧಿತ ಆರೋಪಿಗಳು.

ಇಡಿ ಅಧಿಕಾರಿಗಳು ಶುಕ್ರವಾರ ತಡರಾತ್ರಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಶನಿವಾರ ಬೆಳಿಗ್ಗೆ ನ್ಯಾಯಾಧೀಶರ ಮನೆಗೆ ಹಾಜರುಪಡಿಸಿದ್ದಾರೆ. ಮೂವರು ಆರೋಪಿಗಳನ್ನು ಇಡಿ ಅಧಿಕಾರಿಗಳು 10 ದಿನ ಕಸ್ಟಡಿಗೆ ಪಡೆದು ತನಿಖೆ ನಡೆಸುತ್ತಿದ್ದಾರೆ. ಈ ಮೂಲಕ ಹಗರಣದ ಪ್ರಮುಖ ಆರೋಪಿಯಾದ ನಲಪಾಡ್ ಗೂ ಬಂಧನದ ಭೀತಿ ಎದುರಾಗಿದೆ.

## ಐಪಿಎಲ್ ಟಿಕೆಟ್ ಕೇಳಿದ್ದು ಅಶೋಕ್, ಶಾಸಕರು: ಡಿಕೆಶಿ

**ಬೆಂಗಳೂರು:** ನಾನು ನನಗಾಗಿ ಐಪಿಎಲ್ ಟಿಕೆಟ್ ಕೇಳಿರಲಿಲ್ಲ. ಆರ್.ಅಶೋಕ್ ಮತ್ತು ವಿಜಯಾನಂದ ಕಾಶಪ್ಪನವರ್ ಐಪಿಎಲ್ ಟಿಕೆಟ್ ಕೇಳಿದ್ದರು. ಈಗ ಅದನ್ನು ನನ್ನ ಮೇಲೆಯೇ ಹಾಕಿಕೊಂಡಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.



ಗುಜರಾತಿನವರಿಗೆ ಟಿಕೆಟ್ ಗಳು ಹೆಚ್ಚಾಗಿ ಬೇಕಾಗಿತ್ತು. ವ್ಯಾಪಾರ ಜಾಸ್ತಿ ಆಗಬೇಕಿತ್ತು. ಅದಕ್ಕೆ ಈ ರೀತಿ ರಾಜಕೀಯ ಮಾಡುತ್ತಿದ್ದಾರೆ. ಅವರಿಗೆ ನಾವು ಕೇಳಿದ್ದ 300 ಟಿಕೆಟ್ ಹೆಚ್ಚಾಯ್ತಾ? ಬೇರೆ ರಾಜ್ಯಗಳಲ್ಲಿ ಶೇ 60 ಟಿಕೆಟ್ ಅನ್ನು ರಾಜ್ಯ ಸರ್ಕಾರಗಳಿಗೆ ಕೊಡುತ್ತಿದ್ದಾರೆ ಎಂದು ಹೇಳಿದರು. ಪುಟ 2ಕ್ಕೆ

## ಜೈಲಿನ ಕೈದಿಗಳಿಗೂ ಬಯೋಮೆಟ್ರಿಕ್

### ಕೈದಿಗಳ ಮೇಲೆ ನಿಗಾವಹಿಸಲು ಎಐ ಕ್ಯಾಮೆರಾ ಅಳವಡಿಕೆ

**ಬೆಂಗಳೂರು:** ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೈದಿಗಳ ಮೇಲೆ ನಿಗಾವಹಿಸಲು ಕಾರಾಗೃಹ ಇಲಾಖೆ 2.25 ಕೋಟಿ ರೂ. ವೆಚ್ಚದಲ್ಲಿ ಬಯೋಮೆಟ್ರಿಕ್ ವ್ಯವಸ್ಥೆ ಅಳವಡಿಸಿದೆ.

ಈ ಹಿಂದೆ ಎಐ ಕ್ಯಾಮರಾ ಬಳಕೆ ಮಾಡಿ ಕೈದಿಗಳ ಮೇಲೆ ನಿಗಾವಹಿಸಿತ್ತು. ಈ ಮೂಲಕ ಸಂದರ್ಶಕರನ್ನು ಭೇಟಿಯಾಗಲು ಡಿಜಿಟಲ್ ಟೋಕನ್ ವ್ಯವಸ್ಥೆ ಹಾಗೂ ಡಿಜಿಟಲ್ ಟ್ರಾಕಿಂಗ್ ಅನ್ನು ಜಾರಿಗೊಳಿಸಿತ್ತು. ಇದೀಗ ಒಂದು ಹೆಜ್ಜೆ ಮುಂದೆ ಇಟ್ಟು ಜೈಲಿನಲ್ಲಿ ನಡೆಯುವ ಅಕ್ರಮ ತಡೆಯಲು ಬಯೋಮೆಟ್ರಿಕ್ ಅಳವಡಿಕೆ ಮಾಡಿದೆ.

ಕಾರಾಗೃಹಕ್ಕೆ ಎಸ್ಪಿ ಅನ್ಶುಕುಮಾರ್ ಮತ್ತು ಡಿಜಿಪಿ ಅಲೋಕ್ ಕುಮಾರ್ ಅವರನ್ನು ಇತ್ತೀಚೆಗೆ ನೇಮಕ ಮಾಡಲಾಗಿತ್ತು. ನಂತರ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಹಲವು ಬದಲಾವಣೆ ಜಾರಿಗೊಳಿಸಿದ್ದಾರೆ. 2.25 ಕೋಟಿ ಪುಟ 2ಕ್ಕೆ




## ಹಿರಿಯ ಕಾರ್ಯಕರ್ತರ ಆಶೀರ್ವಾದ ಪಡೆದ ಮೋದಿ!

**ಕೋಲ್ಕತ್ತಾ:** ಮುಖ್ಯಮಂತ್ರಿ ಸುವೇಂದು ಅಧಿಕಾರಿ ಪ್ರಮಾಣವಚನ ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 97 ವರ್ಷದ ಹಿರಿಯ ವ್ಯಕ್ತಿಯ ಕಾಲಿಗೆ ಬಿದ್ದು ಆಶೀರ್ವಾದ ಪಡೆದ ಘಟನೆ ನಡೆದಿದೆ.



ಗಣ್ಯ ವ್ಯಕ್ತಿಗಳಿಂದ ತುಂಬಿದ್ದ ವೇದಿಕೆಯಲ್ಲಿ ಪ್ರಧಾನಿ ಮೋದಿ ಮಖನ್‌ಲಾಲ್ ಸರ್ಕಾರ್ ಅವರನ್ನು ನೋಡಿ ಕಾಲಿಗೆರಗಿ ಆಶೀರ್ವಾದ ಪಡೆದರು. ಮಖನ್ ಲಾಲ್ ಸರ್ಕಾರ್ ಕೂಡ ಭಾವನಾತ್ಮಕವಾಗಿ ಪ್ರಧಾನಿ ಮೋದಿ ಅವರನ್ನು ಅಪ್ಪಿಕೊಂಡು ಆಶೀರ್ವಾದ ನೀಡಿದರು.

ಮಖನ್‌ಲಾಲ್ ಸರ್ಕಾರ್ ಅವರು ಸಿಲಿಗುರಿ ನಿವಾಸಿ ಹಾಗೂ ಬಿಜೆಪಿ ಆರಂಭಿಕ ದಿನಗಳ ಹಿರಿಯ ರಾಜ್ಯ ನಾಯಕರಲ್ಲಿ ಒಬ್ಬರಾಗಿದ್ದಾರೆ. 98 ವರ್ಷದ ವಯಸ್ಸಿನಲ್ಲಿಯೂ ಮಖನ್ ಲಾಲ್ ಸರ್ಕಾರ್ ಪುಟ 2ಕ್ಕೆ

## ದಕ್ಷಿಣ ಭಾರತದಲ್ಲೇ ಬಿಎಸ್‌ವೈ ಅಂತಹ ನಾಯಕರಿಲ್ಲ

### ಯಡಿಯೂರಪ್ಪ ಅಭಿಮಾನೋತ್ಸವದಲ್ಲಿ ಹಾಡಿ ಹೊಗಳಿದ ಕೇಂದ್ರ ಸಚಿವ ಅಮಿತ್ ಶಾ

**ಚಿತ್ರದುರ್ಗ:** ಬಿ.ಎಸ್.ಯಡಿಯೂರಪ್ಪ ಅವರಂತಹ ನಾಯಕ ದಕ್ಷಿಣ ಭಾರತದಲ್ಲಿ ಯಾರೂ ಇಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೊಗಳಿದ್ದಾರೆ.

ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ರೈತರ ನಾಯಕ ಯಡಿಯೂರಪ್ಪ ಅವರು 50 ವರ್ಷ ರಾಜಕೀಯ ಸೇವೆ ಮಾಡಿದ್ದಾರೆ. ಯಡಿಯೂರಪ್ಪ ವ್ಯಕ್ತಿತ್ವದ ಕಾರಣ ಎಲ್ಲಾ ಧರ್ಮದ ಸ್ವಾಮೀಜಿಗಳು ವೇದಿಕೆ ಮೇಲೆ ಇದ್ದಾರೆ. ಇದರಿಂದ ರಾಜ್ಯ ಮತ್ತು ದೇಶಕ್ಕೆ ಒಂದು ಸಂದೇಶ ರವಾನೆ ಆಗಿದೆ. ಇದು ದೊಡ್ಡ ವಿಷಯ ಎಂದು ತಿಳಿಸಿದರು.

ಕರ್ನಾಟಕ ಧರ್ಮ ಭೂಮಿ. ಇಲ್ಲಿ ಧರ್ಮದ ವಿಚಾರಗಳ ಮಾರ್ಗದರ್ಶನ ಆಗುತ್ತಿದೆ. ಶಿಕ್ಷಣ ಸೇರಿ ಹಲವು ಕ್ಷೇತ್ರದಲ್ಲಿ ಮಠ ಮಾನ್ಯಗಳು ಕೆಲಸ ಮಾಡುತ್ತಿವೆ. ಇದು ಮದಕರಿ ನಾಯಕನ ಪುಣ್ಯಭೂಮಿ. ಇಲ್ಲಿ ಒಂದು ಪ್ರತಿಮೆ ನಿರ್ಮಾಣ ಮಾಡಿಲ್ಲ. ಚಿಂತೆ ಬೇಡ ಮೋದಿ ಇದ್ದಾರೆ. ಮದಕರಿ ನಾಯಕನ ಪ್ರತಿಮೆ ನಿರ್ಮಾಣ ಮಾಡ್ತೀವಿ. ಪುಟ 2ಕ್ಕೆ





### ಸಿಎಂ ಕನಸು ಕಂಡಿರಲಿಲ್ಲ: ಬಿಎಸ್‌ವೈ

**ಚಿತ್ರದುರ್ಗ:** ನಾನು ಯಾವತ್ತೂ ಸಿಎಂ ಕನಸು ಕಂಡವನಲ್ಲ. ಜನರ ಪರವಾಗಿ ಕೆಲಸ ಮಾಡಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಚಿತ್ರದುರ್ಗದಲ್ಲಿ ನಡೆದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ಜೀವನದ ಪರಮ ದಿನ ಇಂದು. ಅಭಿಮಾನದಲ್ಲಿ ತೇಲಿಸಿದ ದಿನ. ಈ ಜನಸಾಗರ ನೋಡಿ ಮಾತು ಬರುತ್ತಿಲ್ಲ. ಅಭಿಮಾನದ ಹೊಳೆಯಲ್ಲಿ ತೇಲಿಸಿದ್ದೀರಿ. ನಿಮ್ಮ ಅಭಿಮಾನಿಕ್ಕೆ ಚಿರಋಣಿ. ಚಿತ್ರದುರ್ಗದಲ್ಲಿ ವೀರಮದಕರಿ ರೀತಿ ಅಮಿತ್ ಶಾ ಕಾಣಿಸುತ್ತಿದ್ದಾರೆ. ಮೋದಿ ಅವರಿಗೆ ಹೆಗಲು ಕೊಟ್ಟು ಅಮಿತ್ ಶಾ ಕೆಲಸ ಪುಟ 2ಕ್ಕೆ

## ಈ ವರ್ಷದೊಳಗೆ ಗ್ರಾಪಂ ಚುನಾವಣೆ

**ಕಲಬುರಗಿ:** ರಾಜ್ಯದಲ್ಲಿ ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ ಗ್ರಾಮ ಪಂಚಾಯಿತಿ ಚುನಾವಣೆ ನಡೆಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಗಡಿ ಗುರುತಿಸುವಿಕೆಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನ ಮುಗಿದಿದೆ. ಶೀಘ್ರದಲ್ಲೇ ಚುನಾವಣೆ ನಡೆಯಲಿದೆ. ಬಳಿಕ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳು ಸಹ ನಡೆಯಲಿವೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆಯ ಕುರಿತು ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪಕ್ಷದ ಹೈಕಮಾಂಡ್ ಸೂಕ್ತ ಸಮಯದಲ್ಲಿ ನಿರ್ಧರಿಸುತ್ತದೆ ಎಂದು ಹೇಳಿದರು.



ಮೊದಲ ಪುಟದಿಂದ

## ದಕ್ಷಿಣ ಭಾರತದಲ್ಲೇ ಬಿಎಸ್‌ವೈ ಅಂತಹ ನಾಯಕರಿಲ್ಲ

ವೀರ ಓಬವ್ವಗೆ ಕೈ ಮುಗಿದು ನಮಸ್ಕಾರ ಮಾಡುತ್ತೇನೆ ಎಂದು ಹೇಳಿದರು.

ಜನಸೇವೆಯೇ ಪ್ರಭು ಸೇವಾ ಎಂಬ ಮಂತ್ರದಲ್ಲಿ ಯಡಿಯೂರಪ್ಪ ಕೆಲಸ ಮಾಡಿದವರು. ರೈತರ ಕೆಲಸ ದೇಶದ ಕೆಲಸ ಅಂತ ಕೆಲಸ ಮಾಡಿದವರು. 4 ಬಾರಿ ಕರ್ನಾಟಕದ ಜನ ಅವರನ್ನು ಸಿಎಂ ಮಾಡಿದ್ದರು. ರಾಜಕೀಯದಲ್ಲಿ ಎರಡು ರೀತಿ ನಾಯಕರು ಇರುತ್ತಾರೆ. ಒಂದು ತಾನು ಮಾಡಿದ ದಾರಿಯಲ್ಲಿ ನಡೆಯೋದು. ಇನ್ನೊಂದು ಮತ್ತೊಬ್ಬರಿಗೆ ದಾರಿ ಮಾಡಿಕೊಡೋದು. ಯಡಿಯೂರಪ್ಪ ಎರಡನೇ ತರದ ನಾಯಕರು ಎಂದು ಬಣ್ಣಿಸಿದರು.

ಯಾವುದೇ ರಾಜಕೀಯ ಹಿನ್ನಲೆ ಇಲ್ಲದ ಅವರು ಶಿಕಾರಿಪುರಿಂದ ಹೋರಾಟ ಶುರು ಮಾಡಿ, ಸೈಕಲ್‌ನಲ್ಲಿ ಇಡೀ ರಾಜ್ಯ ಸುತ್ತಿ ಪಕ್ಷ ಸಂಘಟನೆ ಮಾಡಿದ್ದರು. ಬಗರಹುಕುಂ ಸೇರಿ, ರೈತರ ಪರ ಅನೇಕ ಹೋರಾಟ ಮಾಡಿದ್ದರು. ಯಡಿಯೂರಪ್ಪ ಜೊತೆ ಮೂರು ಚುನಾವಣೆ ಮಾಡಿದ್ದೇನೆ. ಅವರ ಜೇಬಿನಲ್ಲಿ ಚಿಕ್ಕ ಡೈರಿ ಇರುತ್ತದೆ. ಅದರಲ್ಲಿ ಎಲ್ಲಾ ವಿಷಯಗಳನ್ನು ಬರೆದುಕೊಳ್ತಾರೆ. ಅವರ ರೀತಿ ಯುವಕರು ಇರಬೇಕು. ದಕ್ಷಿಣ ಭಾರತದಲ್ಲಿ ಬಿಜೆಪಿ ಇರಲಿಲ್ಲ. ಬಿಜೆಪಿಯನ್ನು ದಕ್ಷಿಣ ಭಾರತದಲ್ಲಿ ಅಧಿಕಾರಕ್ಕೆ ತಂದವರು ಅವರು ಎಂದು ಶ್ಲಾಘಿಸಿದರು.

## ಕಾರು ಪಲ್ಟಿ: ತಂದೆ-ಮಗ ಸಾವು

(40) ಮತ್ತು ಅವರ ಮಗ ಕಿಶೋರ್ (15) ಎಂದು ಗುರುತಿಸಲಾಗಿದೆ. ಕಿರಣ್ ಅವರ ಪುತ್ರಿ ಕೀರ್ತನಾ (14) ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಮಂಡ್ಯ ಜಿಲ್ಲೆಯ ಕೋಣನಹಳ್ಳಿ ಬಳಿಯ ಸೇತುವೆಯ ಮೇಲೆ ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರು ಮಂಡ್ಯ ತಾಲ್ಲೂಕಿನ ಕಚಿಗೆರೆ ಗ್ರಾಮದ ನಿವಾಸಿಗಳು. ಈ ಕುಟುಂಬ ಮೈಸೂರಿನಲ್ಲಿ ಮದುವೆ ಸಮಾರಂಭದಲ್ಲಿ ಭಾಗವಹಿಸಿ ಗ್ರಾಮಕ್ಕೆ ಹಿಂತಿರುಗುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿದೆ. ಗಾಯಗೊಂಡ ಬಾಲಕಿ ಮತ್ತು ಮೃತರ ಶವಗಳನ್ನು ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ರವಾನಿಸಲಾಗಿದೆ. ಮಂಡ್ಯ ಕೇಂದ್ರ ಪೊಲೀಸ್ ಠಾಣೆಯ ಅಧಿಕಾರಿಗಳು ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಭೀಕರ ಅಪಘಾತ: 6 ಮಂದಿ ಸಾವು

ಅಪಘಾತ ಸಂಭವಿಸಿದೆ.

ತುಮಕೂರು ಕಡೆಯಿಂದ ಹೊರಟಿದ್ದ ಕಾರಿಗೆ ಎದುರುಗಡೆಯಿಂದ ಬಂದ ಲಾರಿ ಡಿಕ್ಕಿಯಾಗಿದೆ. ಪೊಲೀಸರು ಶವಗಳನ್ನು ಹೊರ ತೆಗೆಯಲು ಹರಸಾಹಸ ಪಟ್ಟರು. ಅಪಘಾತದಲ್ಲಿ ಲಾರಿ ಚಾಲಕ ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾರೆ. ನಂತರ ಅವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜೈಲಿನ ಕೈದಿಗಳಿಗೂ ಬಯೋಮೆಟ್ರಿಕ್

ರೂ. ಹಣ ಮಾಡಿ ಕಾರಾಗೃಹ ಇಲಾಖೆ ಬಯೋಮೆಟ್ರಿಕ್ ಅಳವಡಿಸಲಾಗಿತ್ತು. ಜೈಲಿನ ಪ್ರತಿ ಬ್ಯಾರಕ್, ಸಂದರ್ಶಕರ ಕೊಠಡಿ, ಆಸ್ಪತ್ರೆ, ಕ್ಯಾಂಟೀನ್, ಅಡುಗೆ ಕೋಣೆ, ಗ್ರಂಥಾಲಯ, ಮೈದಾನ, ಕರಕುಶಲ ಕಾರ್ಖಾನೆಗಳು ಸೇರಿದಂತೆ ಬೇಕರಿ ಪ್ರದೇಶ ಸೇರಿ ಎಲ್ಲೆಡೆ ಬಯೋಮೆಟ್ರಿಕ್ ಹಾಕಿಸಿದೆ. ಕೈದಿಗಳು ಮೊಬೈಲ್ ಫೋನ್, ನಿಷೇಧಿತ ವಸ್ತುಗಳ ಬಳಕೆಗೆ ಬ್ರೇಕ್ ಹಾಕಲಾಗಿದೆ.

## ಹಿರಿಯ ಕಾರ್ಯಕರ್ತರ ಆಶೀರ್ವಾದ ಪಡೆದ ಮೋದಿ!

ಸ್ವಾತಂತ್ರ ನಂತರ ಭಾರತದ ರಾಷ್ಟ್ರವಾದಿ ಚಳವಳಿಗೆ ಸಂಬಂಧಿಸಿದ ಆರಂಭಿಕ ತಳಮಟ್ಟದ ನಾಯಕರಲ್ಲಿ ಒಬ್ಬರಾಗಿದ್ದಾರೆ.

## ಐಪಿಎಲ್ ಟಿಕೆಟ್ ಕೇಳಿದ್ದು ಅಶೋಕ್, ಶಾಸಕರು: ಡಿಕೆಶಿ

ಕರ್ನಾಟಕದ ಪ್ರತಿನಿಧಿಯಾಗಿ ಶಾಸಕರು ಏನು ಹೇಳುತ್ತಾರೋ ಅದನ್ನು ಮಾಡಿದ್ದೇನೆ. ಎಲ್ಲಾ ಪಕ್ಷದವರು ಸೇರಿ ಬೇಡಿಕೆ ಇಟ್ಟರಲ್ಲವೇ? ದಳದವರಿಗೆ ಬೇಡವಾದರೆ ತಮ್ಮ ಪಕ್ಷದ ಶಾಸಕರಿಗೆ ಟಿಕೆಟ್ ಬೇಡ ಎಂದು ವಾಪಸ್ ನೀಡಲಿ. ನಾನು ನನಗಾಗಿ ಟಿಕೆಟ್ ಕೇಳಿದ್ದೀನಾ? ಈ ಹಿಂದೆ ಶಾಸಕರಿಗೆ 2 ಟಿಕೆಟ್ ನೀಡುತ್ತಿದ್ದರು. ಈಗ ಮೂರು ಟಿಕೆಟ್ ನೀಡಿ ಎಂದು ಹೇಳಿರುವೆ ಎಂದು ಸ್ಪಷ್ಟಪಡಿಸಿದರು.

## ಕೆರೆಯಲ್ಲಿ ಈಜಲು ತೆರಳಿದ್ದ ಅಣ್ಣ-ತಮ್ಮ ನೀರುಪಾಲು


ಗ್ರಾಮದ ನಿವಾಸಿಗಳಾದ ನರೇಂದ್ರ (25) ಹಾಗೂ ಚಂದನ್ (23) ಎಂದು ಗುರುತಿಸಲಾಗಿದೆ. ಪಚ್ಚರಮಾಕಲಹಳ್ಳಿಗೆ ಗಾರೆ ಕೆಲಸಕ್ಕೆ ತೆರಳಿದ್ದ ಯುವಕರು ಬಿಸಿಲಿನ ತಾಪಮಾನದಿಂದಾಗಿ ಸಮೀಪದ ಕೆರೆಯಲ್ಲಿ ಈಜಲು ಇಳಿದಿದ್ದಾರೆ. ಈ ವೇಳೆ ನೀರಿನ ಆಳ ಅಂದಾಜಿಸಲು ಸಾಧ್ಯವಾಗದೆ ಇಬ್ಬರೂ ಮುಳುಗಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

## ಸಿಎಂ ಕನಸು ಕಂಡಿರಲಿಲ್ಲ: ಬಿಎಸ್‌ವೈ

ಮಾಡುತ್ತಿದ್ದಾರೆ ಎಂದರು. ಯಡಿಯೂರಪ್ಪ ಚಿನ್ನದ ಚಮಚ ಇಟ್ಟುಕೊಂಡು ಹುಟ್ಟಿಲ್ಲ. ಸಾಮಾನ್ಯರಲ್ಲಿ ಸಾಮಾನ್ಯನಾಗಿ ಬಂದವನು. ನೊಂದವರ ಪರವಾಗಿ ಕೆಲಸ ಮಾಡಿದ್ದೇನೆ. ಭಾಗ್ಯಲಕ್ಷ್ಮಿ ಯೋಜನೆ ನನಗೆ ಸಾರ್ಥಕ ಭಾವನೆ ಮೂಡಿಸಿದೆ. ಕೃಷಿ ಬಜೆಟ್ ಮಂಡಿಸಿದ್ದು ನಾನು ಎಂದೂ ಮರೆಯಲಾರೆ. ಶಕ್ತಿ ಮೀರಿ ಕೆಲಸ ಮಾಡಿದ್ದೇನೆ ಎಂದು ನುಡಿದರು.

ಮೋದಿ ಇನ್ನೂ 10 ವರ್ಷ ದೇಶ ಮುನ್ನಡೆಸಬೇಕು. ಪಶ್ಚಿಮ ಬಂಗಾಳದಲ್ಲಿ ಇವತ್ತು ಕಮಲ ಅರಳಿದೆ. 50 ವರ್ಷಗಳಿಂದ ಯಡಿಯೂರಪ್ಪರನ್ನ ಬೆಳೆಸಿದ್ದೀರಾ. ನಿಮ್ಮ ಋಣ ಯಾವತ್ತು ಮರೆಯಲ್ಲ. ನನ್ನ ಕೊನೆ ಉಸಿರು ಇರೋವರೆಗೂ ವಿರಮಿಸೋದಿಲ್ಲ, ಪಕ್ಷಕ್ಕಾಗಿ ದುಡಿಯುತ್ತೇನೆ ಎಂದು ಹೇಳಿದರು.

# ಬಸವಣ್ಣನವರ ಶ್ರಮ ಅಪಾರ



ರಾಮನಗರ: ಧಾರ್ಮಿಕ ನೆಲೆಗಟ್ಟಿನಲ್ಲಿ ಪರಿವರ್ತನೆ ವಿಶ್ವ ಕಂಡ ಶ್ರೇಷ್ಠ ಸಂತರಾದ ಬಸವಣ್ಣನವರು ಧಾರ್ಮಿಕ ನೆಲೆಗಟ್ಟಿನಲ್ಲಿ ಸಮಾಜದ ಪರಿವರ್ತನೆಗೆ ಶ್ರಮಿಸಿದರು ಎಂದು ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರಸಭೆ ಆವರಣದಲ್ಲಿ ಶ್ರೀ ಬಸವೇಶ್ವರರ ಪುತ್ಥಳಿ ಅನಾವರಣದ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೇಲ್ವರ್ಗದಲ್ಲಿ ಜನಿಸಿದರೂ ಸಮಾಜದ ಕಟ್ಟಕಡೆಯ ಮನುಷ್ಯನ ಕಲ್ಯಾಣ ಬಯಸಿ ಕ್ರಾಂತಿ ಮಾಡಿದರು. ಅದಕ್ಕಾಗಿಯೇ ಅವರ ಕ್ರಾಂತಿ ಇಂದಿಗೂ ವಿಕಸಿತವಾಗುತ್ತಿದೆ. 20ನೇ ಶತಮಾನದಲ್ಲೂ ಕಾನೂನು ಮೂಲಕ ಜಾರಿಗೆ ತರಲು ಕಷ್ಟ ಎನಿಸುವಂತಹ ಕಾರ್ಯಕ್ರಮಗಳನ್ನು 12ನೇ ಶತಮಾನದಲ್ಲೇ ಬಸವಣ್ಣ ಜಾರಿಗೆ ತಂದು ಪ್ರಜಾಪ್ರಭುತ್ವಕ್ಕೆ ಮುನ್ನುಡಿ ಬರೆದರು.

ನಗರಸಭೆ ಆವರಣದಲ್ಲಿ ಸಂವಿಧಾನದ ಪೀಠಿಕೆ, ಅಂಬೇಡ್ಕರ್, ಬಸವಣ್ಣನವರ ಪುತ್ಥಳಿ ಸ್ಥಾಪನೆ ರಾಜ್ಯದಲ್ಲೇ ಮಾದರಿಯಾದುದು. ಸಮುದಾಯದ ಏಳಿಗೆಯ ಕುರಿತು ಸದಾ ಚಿಂತಿಸುವ ಕ್ರಿಯಾಶೀಲ ರಾಜಕಾರಣಿ ಶಶಿ ಅವರ ದೇಹವಷ್ಟೇ ಅಲ್ಲ, ವ್ಯಕ್ತಿತ್ವವೂ ಅಷ್ಟೇ ತೂಕವಾದುದು ಎಂದು ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

# ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



ಚಾಮರಾಜನಗರ: ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳನ್ನು ರೇಷ್ಮೆ, ಪಶು ಸಂಗೋಪನೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸನ್ಮಾನಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿದ್ಯಾರ್ಥಿಗಳನ್ನು ಸಚಿವ ಕೆ.ವೆಂಕಟೇಶ್ ಸನ್ಮಾನಿಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯ ಟಾಪರ್‌ಗಳಾಗಿ ಹೊರಹೊಮ್ಮಿದ ಎಂ.ರಿಷಿತಾ(623), ಎಂ.ನಿಹಾರಿಕಾ(620), ಸಂಚನಾ ಸತೀಶ್(620), ಎನ್.ದೀಪಿಕಾ(619), ಆರ್.ಪ್ರತಿಭಾ (618), ಎಸ್.ತನ್ಮಯಿ (618), ಎಸ್.ಶಬರಿ(618) ಸನ್ಮಾನ ಸ್ವೀಕರಿಸಿದರು.

ಪಿಯುಸಿ ಪರೀಕ್ಷೆಯ ಕಲಾ ವಿಭಾಗದಲ್ಲಿ ಅಧಿಕ ಅಂಕ ಪಡೆದ ಎಂ.ಚೈತ್ರಾ(586), ಅಫ್ರೀನ್(583), ಎಂ.ಗೌತಮಿ(582), ವಾಣಿಜ್ಯ ವಿಭಾಗದಲ್ಲಿ ಉಷಾ (593), ಬಿ.ಎಸ್.ಸಂಜನಾ(592), ಎಸ್.ನೇತ್ರಾ (592), ಶ್ರೀಯಾ(590), ವಿಜ್ಞಾನ ವಿಭಾಗದಲ್ಲಿ ಐ.ಭೂಮಿಕಾ (587), ನಿಶ್ಚಯ(586), ಅಶೋಕ್ ಕುಮಾರ್(586), ಎನ್.ಸಜಿನಿ(585), ಮನುಶ್ರೀ(585) ಗೌರವ ಸ್ವೀಕರಿಸಿದರು.

ಈ ವೇಳೆ ಹಾಜರಿದ್ದ ಪಾಲಕರು ಮಕ್ಕಳಿಗೆ ಸನ್ಮಾನ ಮಾಡುವುದನ್ನು ನೋಡಿ ಹೆಮ್ಮೆಯಿಂದ ಬೀಗಿದರು. ಸನ್ಮಾನದ ವಿಡಿಯೋ ಮತ್ತು ಫೋಟೋಗಳನ್ನು ತೆಗೆದುಕೊಂಡು ಸಂತಸಪಟ್ಟರು. ಈ ಸಂದರ್ಭದಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎಂ.ಆರ್. ಮಂಜುನಾಥ್, ಎಚ್.ಎಂ.ಗಣೇಶ್ ಪ್ರಸಾದ್, ಮಹಮ್ಮದ್ ಅಸ್ಗರ್ ಮುನ್ನಾ, ಎಚ್.ವಿ.ಚಂದ್ರು, ಸೈಯ್ಯದ್ ಮುಸ್ಸೆಬ್, ಶ್ರೀ ರೂಪಾ, ಮೋನಾರೋತ್, ಎಂ.ಮುತ್ತುರಾಜು ಹಾಗೂ ಇತರರು ಹಾಜರಿದ್ದರು.

# ಉತ್ತಮ ಅಂಕ: ಅತಿ ಆತ್ಮವಿಶ್ವಾಸ ಬೇಡ

## ಉಮರ್ ಇಸ್ಮೈಲ್ ಖಾನ್ ಕಿವಿಮಾತು । 60ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪುರಸ್ಕಾರ

ರಾಮನಗರ: ಪಿ.ಯೂ.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದಿದ್ದೇನೆ, ಭವಿಷ್ಯದ ಪರೀಕ್ಷೆಗಳನ್ನು ಚೆನ್ನಾಗಿ ಮಾಡುತ್ತೇನೆ ಎಂಬ ಅತಿಯಾದ ಆತ್ಮ ವಿಶ್ವಾಸ ಬೇಡ ಎಂದು ಗೌಸಿಯಾ ತಾಂತ್ರಿಕ ಮತ್ತು ಇಂಜಿನಿಯರಿಂಗ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಉಮರ್ ಇಸ್ಮೈಲ್ ಖಾನ್ ಕರೆ ನೀಡಿದರು.

2026-26ನೇ ಸಾಲಿನ ದ್ವಿತೀಯ ಪಿಯೂ ವಿಜ್ಞಾನ ವಿಭಾಗದ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಜಿಲ್ಲೆಯ ಪಿಯೂಸಿ ಕಾಲೇಜುಗಳ 60ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ನಗರದಲ್ಲಿರುವ ಗೌಸಿಯಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಗೌರವಿಸಿದ ವೇಳೆ ಅವರು ಮಾತನಾಡಿದರು. "ನೀವು ಶ್ರಮಪಟ್ಟಿರಬಹುದು, ಅದೃಷ್ಟವೂ ಇರಬಹುದು. ಆದರೆ ಅತಿಯಾದ ಆತ್ಮವಿಶ್ವಾಸ ನಿಮ್ಮನ್ನು ಹಾಳುಮಾಡುತ್ತದೆ. ಸದಾ ನಿಯಮಿತವಾಗಿರಿ, ವಿನಯದಿಂದಿರಿ" ಎಂದು ಅವರು ಹೇಳಿದರು.

ನಿರ್ಲಕ್ಷ್ಯವೂ ಅಪಾಯಕರ. ಹಿಂದೆ ಆಗಿದೆ, ಭವಿಷ್ಯದಲ್ಲಿಯೂ ಅಗುತ್ತದೆ ಎಂದುಕೊಂಡು ಯಾವುದನ್ನೂ ಲಘುವಾಗಿ ತೆಗೆದುಕೊಳ್ಳಬೇಡಿ. ನಿಮ್ಮ ಪದವಿ ಮುಗಿಯುವವರೆಗೂ ಪ್ರತಿದಿನವೂ ಓದಿನ ಮೇಲೆ ಗಮನ ಹರಿಸಬೇಕು. ನಿಮ್ಮ ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸಿ ಎಂದರು. ಅತಿಯಾದ ಆತ್ಮ ವಿಶ್ವಾಸ, ಅಹಂಕಾರ, ನಿರ್ಲಕ್ಷ ಮನೋಭಾವ ಬೇಡ ಎಂದರು.

### ದೊಡ್ಡ ಕನಸು ಕಾಣುವುದು ಪ್ರೇರಣೆ

ಜೀವನದಲ್ಲಿ ದೊಡ್ಡ ಸಾಧನೆ ಮಾಡುವ ದೊಡ್ಡ ಕನಸನ್ನು ಕಾಣುವುದು ಪ್ರೇರಣೆಯನ್ನು ಮೂಡಿಸುತ್ತದೆ. ಪಿಯೂ ಪರೀಕ್ಷೆಯಲ್ಲಿ ನಿಮ್ಮ ಸಾಮರ್ಥ್ಯ ಪ್ರಕಟವಾಗಿದೆ. ಈ ಶ್ರಮ ಜೀವನ ಪರ್ಯಂತ ಮುಂದುವರೆದರೆ ದೇಶದ ಜನರಿಗೆ ದೇಶದ ಆಡಳಿತಗಾರರಿಗೆ ನೀವು ಆಶ್ರಯವಾಗಬಹುದು



### ಶಿಕ್ಷಕರು, ಪೋಷಕರಿಗೆ ಗೌರವ ಕೊಡಿ - ಡಿಡಿಪಿಐ ಮರಿಸ್ವಾಮಿ

ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮರಿಸ್ವಾಮಿ.ಎಂ ಮಾತನಾಡಿ, ಮಾನವನ ಮೊದಲ 25 ವರ್ಷಗಳ ಸಹಜ ಬೆಳವಣಿಗೆಯ ವೇಳೆ ಕಲಿಕೆಗೆ ಪೂರಕ. ಹೀಗಾಗಿ ಶಿಕ್ಷಣಾರ್ಜನೆಯ ಜೊತೆಗೆ ಕ್ರೀಡೆಗಳು, ಸಂಗೀತ, ನೃತ್ಯ ಮುಂತಾದವುಗಳನ್ನು ಕಲಿಯಿರಿ, ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಿ, ವೈದ್ಯ, ಇಂಜಿನಿಯರ್ ವೃತ್ತಿಗಳ ಮೇಲೆ ಗಮನ ಕೇಂದ್ರೀಕರಿಸುವ ಬದಲಿಗೆ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ಅಧಿಕಾರಿ ಮುಂತಾದ ಉನ್ನತ ಹುದ್ದೆಗಳನ್ನು ಗಳಿಸುವ ಕಡೆ ಗುರಿ ಇರಲಿ.

ಆದರೆ ಇವೆಲ್ಲ ಸಾಧ್ಯವಾಗಬೇಕಾದರೆ ಕಠೀಣ ಪರಿಶ್ರಮ ಅಗತ್ಯವಿದೆ ಎಂದ ಅವರು ಅತಿಹೆಚ್ಚು ಅಂಕ ಗಳನ್ನು ಪಡೆದಿರುವ ಉತ್ಸಾಹ ಮುಂದುವರೆ ಯಲಿ, ಇದು ಮತ್ತಷ್ಟು ಸಾಧನೆಗೆ ಪೂರಕ ಆದರೆ ಅಂಕಕಾರಕ್ಕೆ ಅವಕಾಶ ಮಾಡಿಕೊಳ್ಳು ವುದು ಬೇಡ ಎಂದು ಎಚ್ಚರಿಸಿದರು.

ತಂದೆ-ತಾಯಿ, ಶಿಕ್ಷಕರು, ಶಿಕ್ಷಣ ಸಂಸ್ಥೆಗಳಿಗೆ ಗೌರವ ಕೊಡುವುದು ಭಾರತೀಯ ಸಂಸ್ಕೃತಿ, ಅಲ್ಲದೆ ಇದು ಶಿಕ್ಷಣ ರೂಢಿಸುವ ಗುಣಗಳು, ಭವಿಷ್ಯದಲ್ಲಿ ಎಷ್ಟೇ ಉನ್ನತ ಸ್ಥಾನಗಳಿಸಿದರು ಈ ಗುಣಗಳನ್ನು ಮರೆಯಬಾರದು ಎಂದರು. ಎಷ್ಟೇ ಉನ್ನತ ವಿದ್ಯಾಭ್ಯಾಸ ಮಾಡಿದರು, ವಿದೇಶಗಳಿಗಿಂತ, ಭಾರತದಲ್ಲಿ ಕರ್ತವ್ಯ, ಸೇವೆ, ವೃತ್ತ ಮಾಡಿ ಎಂದರು.

### ವಿದ್ಯಾರ್ಥಿಗಳಿಗೆ ಗೌರವ

**ಜಿಲ್ಲೆಯ ಖಾಸಗಿ, ಸರ್ಕಾರಿ ಪಿಯೂ ಕಾಲೇಜುಗಳಲ್ಲಿ ದ್ವಿತೀಯ ಪಿಯೂ ಪರೀಕ್ಷೆ ಬರೆದು ಆಯಾ ಕಾಲೇಜುಗಳ ಮಟ್ಟದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಮೊದಲ ಇಬ್ಬರು ವಿದ್ಯಾರ್ಥಿಗಳಂತೆ 60ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.**

### ಭಾರತ ಉತ್ತಮವಾಗಿ ಬೆಳೆಯುತ್ತಿದೆ

**"ಭಾರತ ಹಿಂದುಳಿಯುತ್ತಿದೆ" ಎಂಬ ರೀತಿಯ ಸುದ್ದಿಗಳನ್ನು ನೋಡಿ ಚಿಂತಿಸಬೇಡಿ. ಅಂಥದ್ದೇನೂ ನಡೆಯುತ್ತಿಲ್ಲ. ವಾಸ್ತವವಾಗಿ ಭಾರತ ತುಂಬಾ ಚೆನ್ನಾಗಿ ಅಭಿವೃದ್ಧಿ ಹೊಂದುತ್ತಿದೆ. ಹಿಂದೆ ಉದ್ಯೋಗಕ್ಕಾಗಿ ವಿದೇಶಗಳಿಗೆ ಹೋಗುತ್ತಿದ್ದವರು ಈಗ ಹಿಂದಿರುಗಿ ಭಾರತದಲ್ಲೇ ಅವಕಾಶಗಳನ್ನು ಹುಡುಕುತ್ತಿದ್ದಾರೆ, ಹೀಗಾಗಿ ವಿದ್ಯಾಭ್ಯಾಸದ ನಂತರ ಭಾರತದಲ್ಲೇ ನಿಮ್ಮ ವೃತ್ತಿ ಮುಂದುವರೆಯಲಿ ಎಂದು ಶುಭ ಹಾರೈಸಿದರು.**

ಎಂದು ನೆರೆದಿದ್ದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದ ಅವರು ದೇವರು, ಪೋಷಕರು ಮತ್ತು ಶಿಕ್ಷಕರಿಗೆ ಕೃತಜ್ಞರಾಗಿರಿ ಎಂದರು. ಸಾಧನೆಗೆ ಶ್ರಮ, ಜೀವನ ಸಾರ್ಥಕತೆಗೆ ಪ್ರಾಮಾಣಿಕತೆ, ಸಮಯಪಾಲನೆ ಮುಂತಾದ ಜೀವನದ ಮೌಲ್ಯಗಳನ್ನು ರೂಢಿಸಿಕೊಳ್ಳಿ ಎಂದು ಅವರು ಸಲಹೆ ಕೊಟ್ಟರು.

ವೇದಿಕೆಯಲ್ಲಿ ಗೌಸಿಯಾ ಪಿಯೂ ಕಾಲೇಜು ವಿಭಾಗದ ಪ್ರಾಂಶುಪಾಲರಾದ ಪ್ರೊ.ನಜ್ರುಲ್ಲಾ ಖಾನ್, ಗೌಸಿಯಾ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ಕುಮಾರ್, ಆಡಳಿತಾಧಿಕಾರಿ ಏಜಾಸ್ ಅಹಮದ್ ಉಪಸ್ಥಿತರಿದ್ದರು.

# ಜನತೆಗೆ ಸುಲಲಿತ ಮತ್ತು ತುರ್ತು ಆರೋಗ್ಯ ಸೇವೆ ದೊರೆಯಲಿ

ನಂಜನಗೂಡು: ನಗರದ ಸಾರ್ವಜನಿಕ ಆಸ್ಪತ್ರೆ ಸಭಾಂಗಣದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ತಾಯಿ-ಮಕ್ಕಳ ಆಸ್ಪತ್ರೆಯ ಅಧಿಕಾರಿಗಳೊಂದಿಗೆ ಇಂದು ತುರ್ತು ಸಭೆ ನಡೆಸಿದರು. ಈ ವೇಳೆ ಕ್ಷೇತ್ರದ ಪ್ರತಿಯೊಬ್ಬ ನಾಗರಿಕನಿಗೂ ಸಮರ್ಪಕ ವೈದ್ಯಕೀಯ ಸೇವೆ ಒದಗಿಸುವ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ಅವರು, ಆಸ್ಪತ್ರೆಗಳಲ್ಲಿನ ಮೂಲಭೂತ ಸೌಕರ್ಯಗಳ ಲಭ್ಯತೆ ಹಾಗೂ ರೋಗಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

### ಉತ್ತಮ ಆರೋಗ್ಯ ಸೇವೆ ಹಾಗೂ ಮುನ್ನೆಚ್ಚರಿಕೆ

ಕೋವಿಡ್ ಮಹಾಮಾರಿಯ ನಂತರ ಈಗ ಹಂಟಾ ಎಂಬ ಹೊಸ ವೈರಸ್ ಭೀತಿ ಮಾಧ್ಯಮಗಳಲ್ಲಿ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ, ಆರೋಗ್ಯ ಇಲಾಖೆ ಅಧಿಕಾರಿಗಳು ಅತ್ಯಂತ ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಶಾಸಕರು ತಿಳಿಸಿದರು. ಗ್ರಾಮೀಣ ಪ್ರದೇಶದ ಜನರು ತುರ್ತು ಚಿಕಿತ್ಸೆಗಾಗಿ ತಾಲೂಕು ಕೇಂದ್ರದ ಆಸ್ಪತ್ರೆಗೆ ಧಾವಿಸಿದಾಗ, ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಅವರ ಸಂಕಷ್ಟಕ್ಕೆ ತಕ್ಷಣ ಸ್ಪಂದಿಸಿ ಜೀವ ಉಳಿಸುವ ಕೆಲಸ ಮಾಡಬೇಕು. ಸಣ್ಣ ಪುಟ್ಟ ಸಮಸ್ಯೆಗಳಿಗೂ ಜಿಲ್ಲಾ ಆಸ್ಪತ್ರೆಗೆ ರೋಗಿಗಳನ್ನು ವರ್ಗಾಯಿಸುವ ಪದ್ಧತಿಯನ್ನು ಕೈಬಿಡ ಬೇಕು, ಏಕೆಂ ದರೆ ದೂರದ ಪ್ರಯಾಣದ ವೇಳೆ ರೋಗಿಯ ಸ್ಥಿತಿ ಮತ್ತಷ್ಟು ಹದಗೆಡುವ ಸಾಧ್ಯತೆ ಇರುತ್ತದೆ ಎಂದರು.



### ನಕಲಿ ವೈದ್ಯರ ವಿರುದ್ಧ ಕ್ರಮ ಮತ್ತು ಉತ್ತರದಾಯಿತ್ವ

ಕ್ಷೇತ್ರದ ಜನರಿಂದ ವೈದ್ಯಕೀಯ ಸೇವೆಯ ನಿರ್ಲಕ್ಷ್ಯದ ಬಗ್ಗೆ ವಾಟ್ಸಪ್ ಮೂಲಕ ಅನೇಕ ದೂರುಗಳು ಬರುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ ಶಾಸಕರು, ಅಧಿಕಾರಿಗಳು ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಧೋರಣೆ ತೋರಬಾರದು ಎಂದು ಸೂಚಿಸಿದರು. ಅಧಿಕಾರಿಗಳಿಗೆ ಯಾವುದೇ ತಾಂತ್ರಿಕ ತೊಂದರೆಗಳಿದ್ದರೆ ನೇರವಾಗಿ ತಮ್ಮ ಗಮನಕ್ಕೆ ತರುವಂತೆ ತಿಳಿಸಿದ ಅವರು, ತಾಲೂಕಿನಾದ್ಯಂತ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ನಕಲಿ ವೈದ್ಯರ ಕ್ಲಿನಿಕ್ಗಳನ್ನು ಕೂಡಲೇ ಮುಚ್ಚಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಆದೇಶಿಸಿದರು.

### ನಗರದ ನೈರ್ಮಲ್ಯ ಮತ್ತು ಮಾರುಕಟ್ಟೆ ಸುಧಾರಣೆ

ಆರೋಗ್ಯದ ಜೊತೆಗೆ ನೈರ್ಮಲ್ಯದ ಬಗ್ಗೆಯೂ ಹೆಚ್ಚಿನ ಗಮನ ಹರಿಸಿದ ಶಾಸಕರು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೋಡಲ್ ಅಧಿಕಾರಿಗಳು ಹಾಗೂ ಪಿಡಿಒಗಳು ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದರು. ನಂಜನಗೂಡು ನಗರದ ಮಟನ್ ಮಾರ್ಕೆಟ್ ಬಳಿ ಮಾಂಸಹಾರದ ತ್ಯಾಜ್ಯವನ್ನು ಹೂಲಹಳ್ಳಿ ನಾಲೆಗೆ ಬಿಡುತ್ತಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅವರು, ಆರೋಗ್ಯ ಅಧಿಕಾರಿಗಳ ಅನುಮತಿ ಇಲ್ಲದೆ ನಡೆಯುತ್ತಿರುವ ಅವೈಜ್ಞಾನಿಕ ಚಟುವಟಿಕೆಗಳ ಮೇಲೆ ಶಿಸ್ತು ಕ್ರಮ ಜರುಗಿಸಲು ನಗರಸಭೆ ಪೌರಾಯುಕ್ತ ಬಸವರಾಜ್ ಅವರಿಗೆ ಸೂಚಿಸಿದರು. ಮೈಸೂರು ಮಹಾನಗರ ಪಾಲಿಕೆಯ ಮಾದರಿಯಲ್ಲೇ ನಗರದ ಮಾರುಕಟ್ಟೆಗಳಲ್ಲಿ ಶಿಸ್ತುಬದ್ಧ ನೈರ್ಮಲ್ಯ ಪಾಲನೆಯಾಗಬೇಕು ಎಂದು ಅವರು ಸ್ಪಷ್ಟಪಡಿಸಿದರು. ಈ ತುರ್ತು ಸಭೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಸೀಲ್ದಾರ್ ಸ್ಮಿತಾ ರಾಮ್, ಇಒ ಜೆರಾಲ್ಡ್ ರಾಜೇಶ್, ನಗರಸಭೆ ಪೌರಾಯುಕ್ತ ಬಸವರಾಜ್, ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ. ಈಶ್ವರ್, ಡಾ. ಶಿವಪ್ರಸಾದ್ ಹಾಗೂ ಡಿವೈಎಸ್ಪಿ ರಘು ಸೇರಿದಂತೆ ಹಲವು ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಡಾ. ಕೃಷ್ಣಮೂರ್ತಿ । ಅಂಬೇಡ್ಕರ್ ಅವರ 135ನೇ ಜಯಂತಿ

# ಮತದಾನ ಮಹತ್ವ ಅರಿಯದಿದ್ದರೆ ಅಸ್ಪೃಶ್ಯತೆ ನಿವಾರಣೆ ಅಸಾಧ್ಯ

ಮೈಸೂರು: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು 18 ವರ್ಷ ತುಂಬಿದ ಪ್ರತಿಯೊಬ್ಬರಿಗೂ ನೀಡಿರುವ ಮತದಾನದ ಹಕ್ಕಿನ ಶಕ್ತಿಯನ್ನು ಅರ್ಥಮಾಡಿಕೊಳ್ಳದಿದ್ದರೆ ಸಮಾಜದಲ್ಲಿ ಅಸ್ಪೃಶ್ಯತೆಯನ್ನು ತೊಲಗಿಸಲು ಸಾಧ್ಯವಿಲ್ಲ ಎಂದು ಬಿಎಸ್ಪಿ ಮುಖಂಡ ಡಾ. ಕೃಷ್ಣಮೂರ್ತಿ ತಿಳಿಸಿದ್ದಾರೆ. ನಗರದ ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡ ಶಾಂತವೇರಿ ನಗರ ಹಾಗೂ ಸಹೃದಯ ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಈ ಆಶಯ ವ್ಯಕ್ತಪಡಿಸಿದರು.

### ವಿಮೋಚನಾ ರಥದ ನಾಲ್ಕು ಚಕ್ರಗಳ ಆಶಯ

ಡಾ. ಅಂಬೇಡ್ಕರ್ ಅವರ ಹೋರಾಟ ಮತ್ತು ಚಿಂತನೆಗಳನ್ನು ಮೈಗೂಡಿಸಿಕೊಳ್ಳದಿ



ದ್ದರೆ ಮತ್ತೆ ಶೋಷಣೆಯ ಬದುಕಿಗೆ ಮರಳಬೇಕಾಗುತ್ತದೆ ಎಂದು ಎಚ್ಚರಿಸಿದ ಡಾ. ಕೃಷ್ಣಮೂರ್ತಿ, ಅಂಬೇಡ್ಕರ್ ಅವರು ಪ್ರತಿಪಾದಿಸಿದ ವಿಮೋಚನಾ ರಥದ ನಾಲ್ಕು ಪ್ರಮುಖ ಆಯಾಮಗಳನ್ನು ವಿವರಿಸಿದರು. ಸಾಮಾಜಿಕವಾಗಿ ಮೇಲ್ವರ್ಗದವರಿಗೆ ಸಮಾನವಾಗಿ ಗೌರವದಿಂದ ಬದುಕುವುದು, ದೇಶದ ಸಂಪತ್ತಿನಲ್ಲಿ ಸಮಪಾಲು ಪಡೆಯುವ ಆರ್ಥಿಕ ಸಮಾನತೆ, ಮೀಸಲಾತಿ ಮತ್ತು ಮತದಾನದ ಮೂಲಕ ರಾಜಕೀಯ ಅಧಿಕಾರ ಪಡೆಯುವುದು ಹಾಗೂ ಅಸ್ಪೃಶ್ಯತೆಯಿಂದ ಮುಕ್ತಿ ಪಡೆಯಲು ಧಮ್ಮ ಮಾರ್ಗವನ್ನು ಅನುಸರಿಸುವುದು ಅಂಬೇಡ್ಕರ್ ಅವರ ಮುಖ್ಯ ಆಶಯವಾಗಿತ್ತು. ಬ್ಯಾಲೆಟ್ ಬಾಕ್ಸ್ ಮೂಲಕ ರಾಜಕೀಯ ಬದಲಾವಣೆ ತರಲು ಅವರು ನೀಡಿದ ಅವಕಾಶವನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

### ಅಂಬೇಡ್ಕರ್ ಚಿಂತನೆಗಳ ಅನುಷ್ಠಾನಕ್ಕೆ ಒತ್ತು

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಹಿಂದ ಜವರಪ್ಪ ಅವರು, ಅಂಬೇಡ್ಕರ್ ಅವರ ಜಯಂತಿಗಳನ್ನು ಆಚರಿಸುವುದರ ಜೊತೆಗೆ ಅವರು ಹಾಕಿಕೊಟ್ಟ ಮಾರ್ಗಗಳನ್ನು ಅನುಸರಿಸುವಲ್ಲಿ ನಾವು ವಿಫಲರಾಗುತ್ತಿದ್ದೇವೆ ಎಂದು ವಿಷಾದಿಸಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ ಇಂದಿಗೂ ಅಸ್ಪೃಶ್ಯತೆ ಜೀವಂತವಾಗಿರುವುದು ನೋವಿನ ಸಂಗತಿಯಾಗಿದ್ದು, ಸರ್ಕಾರಗಳು ಸಮಾಜದ ಕೆಳವರ್ಗದವರಿಗೆ ಸಿಗಬೇಕಾದ ಅವಕಾಶಗಳನ್ನು ವಂಚಿಸುತ್ತಿವೆ ಎಂದು ಅವರು ದೂರಿದರು.

### ಮಹಿಳಾ ಹಕ್ಕುಗಳ ಹೋರಾಟಗಾರ ಅಂಬೇಡ್ಕರ್

ಮುಖ್ಯ ಅತಿಥಿಯಾಗಿದ್ದ ಪ್ರೊ. ಸೌಭಾಗ್ಯವತಿ ಅವರು ಮಾತನಾಡಿ, ಡಾ. ಅಂಬೇಡ್ಕರ್ ಅವರು ಕೇವಲ ಒಂದು ಸಮುದಾಯಕ್ಕೆ ಸೀಮಿತರಾಗದೆ, ಮಹಿಳೆಯರ ಸ್ವಾಭಿಮಾನದ ಬದುಕಿಗಾಗಿ ಹೋರಾಡಿದ ಮಹಾನ್ ನಾಯಕರಾಗಿದ್ದರು ಎಂದು ಶ್ಲಾಘಿಸಿದರು. ಸಮಾಜದಲ್ಲಿ ಸ್ವಾರ್ಥವಿಲ್ಲದೆ ಸೇವೆ ಮಾಡುವ ವರ್ಗಕ್ಕೆ ನಾವು ಹೆಚ್ಚಿನ ಆದ್ಯತೆ ನೀಡಬೇಕು ಮತ್ತು ಅಂಬೇಡ್ಕರ್ ಅವರ ಸಮಾನತೆಯ ಸಿದ್ಧಾಂತವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಬಿ.ಸಿ. ಮಹದೇವಯ್ಯ, ಉಪಾಧ್ಯಕ್ಷ ಗಂಗಾಧರ್ ಹಾಗೂ ಪದಾಧಿಕಾರಿಗಳಾದ ಮಹದೇವಸ್ವಾಮಿ ಮತ್ತು ಬಿ.ಪಿ. ನಾಗರಾಜು ಉಪಸ್ಥಿತರಿದ್ದರು.

## ಜೂಜು ಅಡ್ಡೆ ಮೇಲೆ ಪೊಲೀಸರ ದಾಳಿ; ನಾಲ್ವರ ಬಂಧನ

ಚಾಮರಾಜನಗರ: ತಾಲೂಕಿನ ಜನ್ನೂರು ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಇಸ್ಪೀಟ್



ಜೂಜಾಟವಾಡುತ್ತಿದ್ದ ಅಡ್ಡೆಯ ಮೇಲೆ ಪೊಲೀಸರು ದಾಳಿ ನಡೆಸಿ, ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಗ್ರಾಮದ ಗೋಮಾಳದಲ್ಲಿ ಹಣವನ್ನು ಪಣಕ್ಕಿಟ್ಟು ಜೂಜಾಡು ತ್ತಿರುವ ಬಗ್ಗೆ ಸಂತೇಮರಹಳ್ಳಿ ವೃತ್ತದ ಸಿಪಿಐ ಎಸ್.ಎಲ್. ಸಾಗರ್ ಅವರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿಯ ಮೇರೆಗೆ ಪೊಲೀಸರ ತಂಡ ಶುಕ್ರವಾರ ಹಠಾತ್ ದಾಳಿ ನಡೆಸಿದೆ. ದಾಳಿಯ ವೇಳೆ ಹೊನ್ನಯ್ಯ ಸೇರಿದಂತೆ ಒಟ್ಟು ನಾಲ್ವರು ವ್ಯಕ್ತಿಗಳನ್ನು ಬಂಧಿಸಲಾಗಿದ್ದು, ಜೂಜಾಟಕ್ಕೆ ಪಣಕ್ಕಿಟ್ಟಿದ್ದ 5,240 ರೂ. ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಈ ಕುರಿತು ಕುದೇರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗಿದೆ.

# ಪೊಲೀಸ್ ಸಿಬ್ಬಂದಿ ಮಕ್ಕಳಿಗೆ ಗೌರವ



ಹನೂರು: ಈ ಬಾರಿಯ ಎಸ್ ಎಲ್ ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ 90 ಕಿಂತ ಹೆಚ್ಚು ಅಂಕ ಗಳಿಸಿರುವ ಪೊಲೀಸ್ ಇಲಾಖೆಯ ಸಿಬ್ಬಂದಿಗಳ 30 ಮಕ್ಕಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜುಗೌಡ ಸನ್ಮಾನಿಸಿ ಗೌರವಿಸಿದರು.

ಚಾಮರಾಜನಗರ ಜಿಲ್ಲಾ ಪೊಲೀಸ್ ಕವಾಯತು ಮೈದಾನದ ಆವರಣದಲ್ಲಿ ಏರ್ಪಡಿಸಲಾಗಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದ 15 ವಿದ್ಯಾರ್ಥಿಗಳು ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದ 15 ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಮುತ್ತುರಾಜುಗೌಡರು ಮಕ್ಕಳನ್ನು ಉದ್ದೇಶಿಸಿ ನಿಮ್ಮ ಮುಂದಿನ ಭವಿಷ್ಯ ಉಜ್ವಲವಾಗಿರಲಿ ಉತ್ತಮ ಹುದ್ದೆಗಳನ್ನು ಅಲಂಕರಿಸಿ ತಂದೆ ತಾಯಿ, ಗ್ರಾಮ ತಾವು ಓದಿದ ಶಿಕ್ಷಣ ಸಂಸ್ಥೆಗೆ ಕೀರ್ತಿ ತನ್ನಿ ಎಂದು ತಿಳಿಸಿದರು.

ಮೊಟ್ಟ ಮೊದಲ ಬಾರಿಗೆ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಮಕ್ಕಳನ್ನು ಸನ್ಮಾನಿಸಿ ಗೌರವಿಸುವ ಕಾರ್ಯವನ್ನು ಎಸ್ಪಿ ಮುತ್ತುರಾಜು ಅವರು ಕೈಗೊಂಡಿರುವುದು ವಿಶೇಷ.

ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿ ಗಳು ಇನ್ನಿತರರು ಉಪಸ್ಥಿತರಿದ್ದರು.

# ಹಲ್ಲೆ, ದರೋಡೆ ಪ್ರಕರಣ: ಹೈಕೋರ್ಟ್ ಆದೇಶ ಪಾಲಿಸದ ಪೊಲೀಸರು

ಚಾಮರಾಜನಗರ, ಮೇ 9– ಗುಂಡ್ಲುಪೇಟೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಅಂಗಡಿಗೆ ನುಗ್ಗಿ ಹಲ್ಲೇ, ದರೋಡೆ ಪ್ರಕರಣಕ್ಕೆ ಸಂಬಂಧಪಟ್ಟಂತೆ 8 ಮಂದಿ ವಿರುದ್ಧ ದೂರು ದಾಖಲಾಗಿದ್ದರು ಸಹ ಪೊಲೀಸರನ್ನು ಅವರನ್ನು ಬಂಧಿಸುತ್ತಿಲ್ಲ. ಹೈಕೋರ್ಟ್ ಆದೇಶವನ್ನು ಸಹ ಪಾಲಿಸುತ್ತಿಲ್ಲ ಎಂದು ತಾಲೂಕಿನ ಕೆಂಪನಪುರ ಗ್ರಾಮದ ಗಿರೀಶ್‌ಕುಮಾರ್ ದೂರಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಂಡ್ಲುಪೇಟೆ ಪಟ್ಟಣದ ಊಟಿಗೆ ಹೋಗುವ ಮಾರ್ಗದಲ್ಲಿರುವ ಕೆಎಂಎನ್ ರೆಸಾರ್ಟ್ ಅನ್ನು 15 ಲಕ್ಷ ರೂ.ಗೆ ಭೋಗ್ಯ ಮಾಡಿಕೊಟ್ಟಿದ್ದು, ರೆಸಾರ್ಟ್ ಮಾಲೀಕರಾದ ಮಹದೇವನಾಯಕ ಅವರಿಗೆ ನೀಡಿ, ಕರಾರು ಪತ್ರ ಮಾಡಿಸಿಕೊಂಡಿದ್ದೇನೆ. ಇದರ ಅವಧಿ ಮುಗಿಯುವ ಮುನ್ನೇ ರೆಸಾರ್ಟ್‌ನ ಮಾಲೀಕರು ಮತ್ತೊಬ್ಬರಿಗೆ ಬಾಡಿಗೆ ನೀಡಿದ್ದರು. ಅಲ್ಲದೇ ನನಗೆ ಕೊಡಬೇಕಾದ ಹಣವು ಕೊಡದೇ ವಂಚನೆ ಮಾಡುತ್ತಿದ್ದಾರೆ. ಅಲ್ಲದೇ ನನ್ನ ವಾಯಿದೆ ಇನ್ನು ಎರಡು ತಿಂಗಳು ಇರುವಾಗಲೇ ಮತ್ತೊಬ್ಬರಿಗೆ ನೀಡಿ, ನಮ್ಮನ್ನು ಬಲವಂತವಾಗಿ ರೆಸಾರ್ಟ್ ಖಾಲಿ ಮಾಡಿಸಲು ಮಹದೇವನಾಯಕ ಮತ್ತು ಇತರ 8 ಮಂದಿ ಹಲ್ಲೆ ಮಾಡಿದ್ದಾರೆ ಎಂದು ವಿವರ ನೀಡಿದರು.

ನಮ್ಮ ಅಂಗಡಿಗೆ ಅಕ್ರಮವಾಗಿ ನುಗ್ಗಿ ಕೆಲಸಗಾರರಿಗೆ ಹೊಡೆದು, ಹಣ ದೋಚಲಾಗಿದೆ. ಜೊತೆಗೆ ನನ್ನ ಅನುಮತಿ ಇಲ್ಲದೇ ನನ್ನ ರೂಂ ಬೀಗ ಹೊಡೆದು ಚಿನ್ನ, ನಗದು ಕಳುವು ಮಾಡಿದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಪಟ್ಟಣದಲ್ಲಿ ವಿಡಿಯೋ ಸಮೇತ ದೂರು ದಾಖಲು ಮಾಡಿದ್ದೆ. ಅಲ್ಲದೇ ಅಕ್ರಮವಾಗಿ ನನ್ನ ಅಂಗಡಿಗೆ ಪ್ರವೇಶ ಮಾಡಿ, ನನ್ನಮೇಲೆ ಹಲ್ಲೆ ಮಾಡಿದ್ದು, ಬೆಲೆ ಬಾಳು ಪದಾರ್ಥಗಳು ಹಾಗೂ ಚಿನ್ನ, ಹಣವನ್ನು ದೋಚಿಸಿದ್ದಾರೆ. ಮಹದೇವನಾಯಕ ಸೇರಿದಂತೆ 8 ಮಂದಿ ವಿರುದ್ಧ ಪ್ರಕರಣ ದಾಖಲುಮಾಡಿದ್ದು, ಇದುವರೆಗೆ ಸಹ ಅವರನ್ನು ಬಂಧಿಸುತ್ತಿಲ್ಲ ಎಂದು ದೂರಿದರು.

> ▶▶ ಗಿರೀಶ್ ಕುಮಾರ್ ಅಳಲು
> ▶▶ ಅಟ್ರಾಸಿ ಪ್ರಕರಣ ದಾಖಲಿಸಿ ಬೆದರಿಸುವ ತಂತ್ರಕ್ಕೆ ಪೊಲೀಸರೇ ಕುಮ್ಮಕ್ಕು ಗಿರೀಶ್ ನೇರ ಆರೋಪ



ನಾನು ದೂರು ನೀಡಿದ ಬಳಿಕ ನನ್ನ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲು ಮಾಡಿದ್ದು, ನನ್ನನ್ನು ಹೆದರಿಸುವ ಜೊತೆಗೆ ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ಪೊಲೀಸರು ದಾಖಲು ಮಾಡಿರುವ ಸುಳ್ಳು ದೂರಿನ ವಿರುದ್ಧ ಹೈಕೋರ್ಟ್‌ನಲ್ಲಿ ತಡೆಯಾಜ್ಞೆಯನ್ನು ಸಹ ತಂದಿದ್ದೇನೆ. ಇಷ್ಟಾಗಿಯು ಸಹ ಗುಂಡ್ಲುಪೇಟೆ ಪೊಲೀಸರು ಆರೋಪಿಗಳ ಪರವಾಗಿದ್ದೇನೆ. ಈ ಪೈಕಿ ಪ್ರಕರಣ ಪ್ರಮುಖ ಆರೋಪಿಯೊಬ್ಬ ಪೊಲೀಸರೊಂದಿಗೆ ನಿಕಟ ಸಂಪರ್ಕ ಹೊಂದಿದ್ದು, ಠಾಣೆಯಲ್ಲಿದ್ದು ಸಹ ಆತನನ್ನು ಬಂಧಿಸಲು ಮುಂದಾಗಿಲ್ಲ. ನಾನು ಠಾಣೆಗೆ ಹೋದ ಸಂದರ್ಭದಲ್ಲಿ ಪೊಲೀಸ ಅಧಿಕಾರಿಗಳ ಮುಂದೆಯೇ ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು ಯಾವುದೇ ಕ್ರಮವಾಗಿಲ್ಲ ಎಂದರು.

ಈ ಸಂದರ್ಭ ಡಿವೈಎಸ್ಪಿ, ಎಸ್ಪಿ ಹಾಗೂ ಐಜಿ ಅವರಿಗೆ ದೂರು ನೀಡಿದ್ದು. ಯಾವುದೇ ಪ್ರಯೋಜನವಾಗಿಲ್ಲ. ಕೊನೆಗೆ ನ್ಯಾಯಾಲಯದ ಮೊರೆ ಹೋಗಿ, ಅಲ್ಲಿಂದ ಆದೇಶ ತಂದರು ಸಹ ಪ್ರಕರಣದಲ್ಲಿ ಭಾಗಿಯಾಗಿರುವ ಎಂಟು ಮಂದಿಯನ್ನು ಬಂಧಿಸಲು ಮುಂದಾಗುತ್ತಿಲ್ಲ. ಸಬೂಬು ಹೇಳುತ್ತಿದ್ದಾರೆ. ಹೀಗಾಗಿ ನನಗೆ ಸಂಬಂಧ ಅಧಿಕಾರಿಗಳು ನ್ಯಾಯ ಕಲ್ಪಿಸಿಕೊಡಬೇಕು ಎಂದು ನೊಂದ ಗಿರೀಶ್‌ಕುಮಾರ್ ಮನವಿ ಮಾಡಿದ್ದಾರೆ.

## ಅಕ್ರಮ ಕೇರಳ ಲಾಟರಿ ಮಾರಾಟ ದೂರು ದಾಖಲು

ಗುಂಡ್ಲುಪೇಟೆ: ತಾಲ್ಲೂಕಿನ ಕೊಡಸೋಗೆ ಗ್ರಾಮದ ಶ್ರೀನಿವಾಸ ಎಂಬಾತ ಗುಂಡ್ಲುಪೇಟೆ ಪಟ್ಟಣದಲ್ಲಿ ಅಕ್ರಮವಾಗಿ ಕೇರಳ ಲಾಟರಿ ಮಾರಾಟ ಮಾಡುತಿದ್ದ ಈತನ ಬಳಿ 100 ಕ್ಕೂ ಹೆಚ್ಚು ಲಾಟರಿ ಟಿಕೆಟ್ 6000 ನಗದು ವಶಪಡಿಸಿಕೊಳ್ಳಲಾಯಿತು.

ಖಚಿತ ಮಾಹಿತಿ ಮೇರೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಜಯಕುಮಾರ್, ಪಿಎಸ್ ಐ ನರೇಶ್ ಕುಮಾರ್ ನೇತೃತ್ವದಲ್ಲಿ ದಾಳಿ ನಡೆಸಿ ಆರೋಪಿಯಿಂದ ಕೇರಳ ಲಾಟರಿ ಟಿಕೆಟ್ ಮತ್ತು ನಗದು ವಸಪಡಿಸಿಕೊಳ್ಳಲಾಗಿದೆ.

## ಕೃಷ್ಣ ನಿಧನ

ಹನೂರು: ಹನೂರು ಪಟ್ಟಣದ ಅಂಬೇಡ್ಕರ್ ಬಡಾವಣೆಯ ನಿವಾಸಿ ಕೃಷ್ಣ 45 ಹೃದಯಘಾತದಿಂದ ನಿಧನರಾಗಿದ್ದಾರೆ.



ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12 ಗಂಟೆಗೆ ಅಯ್ಯಪ್ಪ ಸ್ವಾಮಿ ದೇವಸ್ಥಾನ ಸಮೀಪದ ಪರಿಶಿಷ್ಟ ಜಾತಿ ಜನಾಂಗದ ರುದ್ರ ಭೂಮಿಯಲ್ಲಿ ಜರುಗಲಿದೆ ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

**ಸಂತಾಪ**

ಮೃತರ ನಿಧನಕ್ಕೆ ಶಾಸಕ ಎಂಆರ್ ಮಂಜುನಾಥ್ ಮಾಜಿ ಶಾಸಕ ಆರ್ ನರೇಂದ್ರ ಬಿಜೆಪಿ ಮುಖಂಡ ನಿಶಾಂತ್ ಸಂತಾಪ ಸೂಚಿಸಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ರೌಡಿಗಳ ಮನೆ ಮೇಲೆ ಪೊಲೀಸರ ದಿಢೀರ್ ದಾಳಿ

## ಬೆಳಗಿನ ಜಾವ 5 ರಿಂದ 8 ಗಂಟೆಯವರೆಗೆ 30ಕ್ಕೂ ಹೆಚ್ಚು ಮಂದಿಗೆ ಬಿಸಿ





ಮೈಸೂರು: ನಗರದಲ್ಲಿ ರೌಡಿ ಚಟುವಟಿಕೆಗಳನ್ನು ಸಂಪೂರ್ಣವಾಗಿ ಮಟ್ಟಹಾಕಲು ಪೊಲೀಸ್ ಇಲಾಖೆಯು ಕಠಿಣ ಕ್ರಮಗಳನ್ನು ಕೈಗೊಂಡಿದೆ. ರೌಡಿ ಕೃತ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವ ನಿಟ್ಟಿನಲ್ಲಿ, ಬೆಳಗಿನ ಜಾವ 5 ರಿಂದ 8 ಗಂಟೆಯವರೆಗೆ ನಗರದ ವಿವಿಧೆಡೆ ಇರುವ ರೌಡಿ ಶೀಟರ್‌ಗಳ ಮನೆಗಳ ಮೇಲೆ ಪೊಲೀಸರು ಅನಿರೀಕ್ಷಿತವಾಗಿ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.

**ವಿವಿಧ ಉಪ ವಿಭಾಗಗಳಲ್ಲಿ ನಡೆದ**

**ವ್ಯಾಪಕ ಶೋಧ**

ನಗರದ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಒಟ್ಟು 30 ರೌಡಿ ಶೀಟರ್‌ಗಳನ್ನು ತಪಾಸಣೆಗೆ ಒಳಪಡಿಸಲಾಗಿದೆ. ವಿಜಯನಗರ ಉಪ ವಿಭಾಗದ ಹೆಬ್ಬಾಳ ಠಾಣೆ ವ್ಯಾಪ್ತಿಯ ತೇಜಸ್, ತೇಜು, ಲೋಕೇಶ್; ಮೇಟಗಳ್ಳಿ ಠಾಣೆಯ ಪ್ರವೀಣ್, ಹರೀಶ್ ಹಾಗೂ ವಿಜಯನಗರ ಠಾಣೆಯ ಭರತ್, ಲೋಕೇಶ್, ಶಿವಕುಮಾರ್ ಮತ್ತು ದಂಡಪ್ಪ ಅವರ ಮನೆಗಳ ಮೇಲೆ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಇದೇ ವೇಳೆ ಸರಸ್ವತಿಪುರಂ ಠಾಣಾ ವ್ಯಾಪ್ತಿಯ ಅರುಣ, ಮೋಹನ್, ಗಿರೀಶ್, ಮಹೇಶ್, ಮನು, ಪ್ರೀತಮ್, ಶ್ಯಾಮ್ ಹಾಗೂ ನಾಗೇಶ್ ಅವರ ನಿವಾಸಗಳನ್ನು ಪೊಲೀಸರು ಜಾಲಾಡಿದ್ದಾರೆ.

### ಕಾನೂನು ಕ್ರಮ ಮತ್ತು ವಾರೆಂಟ್ ಜಾರಿ

**ಕೆ.ಆರ್ ಉಪ ವಿಭಾಗ ವ್ಯಾಪ್ತಿಯಲ್ಲಿ ಕೆ.ಆರ್ ಠಾಣೆಯ ನೋವೆಲ್, ಹೇಮಂತ್; ಲಕ್ಷ್ಮೀಪುರಂನ ಧನುಷ್; ಅಶೋಕಪುರಂನ ಗಂಗೂಲಿ; ವಿದ್ಯಾರಣ್ಯಪುರದ ಕುಮಾರ್ ಹಾಗೂ ಕುವೆಂಪುನಗರದ ಅಭಿಷೇಕ್ ಅವರ ಚಟುವಟಿಕೆಗಳ ಮೇಲೆ ಕಣ್ಣಿಡಲಾಗಿದ್ದು, ಶೋಧ ಕಾರ್ಯ ನಡೆಸಲಾಗಿದೆ. ಎನ್.ಆರ್ ಉಪ ವಿಭಾಗದಲ್ಲಿ ಮಂಡಿ ಠಾಣೆಯ ಅಬೂಬಕರ್ ಸಿದ್ದಿಕ್, ಶಬೀರ್ ಅಹಮದ್; ವಿ.ವಿ ಪುರಂನ ಮಂಜು; ಜೆ.ಎಲ್ ಪುರಂನ ಕಾರ್ತಿಕ್ ಹಾಗೂ ಎನ್.ಆರ್ ಠಾಣೆಯ ಅಬ್ಬರ್ ಅವರ ಮನೆಗಳ ಮೇಲೆ ದಾಳಿ ಮಾಡಲಾಗಿದೆ. ಅಲ್ಲದೆ ದೇವರಾಜ ಉಪ ವಿಭಾಗದ ಉದಯಗಿರಿ ಠಾಣೆ ವ್ಯಾಪ್ತಿಯ ಫಜಲೇ ಕರೀಂ ಮತ್ತು ಬೇಬಿ ಸೇರಿದಂತೆ ಹಲವರನ್ನು ತಪಾಸಣೆ ಮಾಡಲಾಗಿದೆ.**

### ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯಾಚರಣೆ

**ಈ ದಾಳಿಗಾಗಿ ಪೊಲೀಸರು ನ್ಯಾಯಾಲಯದಿಂದ ಮುಂಚಿತವಾಗಿಯೇ ಶೋಧನಾ ವಾರೆಂಟ್‌ಗಳನ್ನು ಪಡೆದುಕೊಂಡಿದ್ದರು. ದಾಳಿಯ ವೇಳೆ ರೌಡಿ ಆಸಾಮಿಗಳ ಇತ್ತೀಚಿನ ಚಟುವಟಿಕೆಗಳು ಹಾಗೂ ಅಪರಾಧ ಕೃತ್ಯಗಳಿಗೆ ಬಳಸಬಹುದಾದ ಮಾರಕಾಸ್ತ್ರ ಅಥವಾ ಇತರೆ ಸಾಧನಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಾಯಿತು. ಪೊಲೀಸ್ ಆಯುಕ್ತರ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಾಚರಣೆಯನ್ನು ಅಪರಾಧ ಮತ್ತು ಸಂಚಾರ ವಿಭಾಗದ ಉಪ ಪೊಲೀಸ್ ಆಯುಕ್ತರು ಹಾಗೂ ನಗರದ ಎಲ್ಲಾ ಠಾಣೆಗಳ ಪೊಲೀಸರು ಜಂಟಿಯಾಗಿ ಯಶಸ್ವಿಗೊಳಿಸಿದ್ದಾರೆ.**

## ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡಗಳ ಸಂರಕ್ಷಣೆಗೆ ಸುಪ್ರೀಂ ಗ್ರೀನ್ ಸಿಗ್ನಲ್

**ಐಐಟಿ ರೂರ್ಕಿ ಸಮಿತಿ ವರದಿ ಕುರಿತ ಚರ್ಚೆ, ಜು.30ಕ್ಕೆ ವಿಚಾರಣೆ**



ಮೈಸೂರು: ನಗರದ ಹೃದಯ ಭಾಗದಲ್ಲಿರುವ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಬೇಕೆಂದು ಸುಪ್ರೀಂಕೋರ್ಟ್ ಹೇಳಿದೆ.

ಮೇ 4ರಂದು ಐಐಟಿ ರೂರ್ಕಿ ಸಮಿತಿ ವರದಿಯನ್ನು ನ್ಯಾಯಮೂರ್ತಿಗಳಾದ ಪರಿಶೀಲಿಸಿದ ಪಾರ್ದಿವಾಲಾ ಮತ್ತು ವಿಜಯ್ ಬಿಷ್ಣೋಯ್ ಅವರನ್ನು ಒಳಗೊಂಡ ಪೀಠವು, ಈ ಎರಡೂ ನಿರ್ಮಾಣಗಳನ್ನು ಸಂರಕ್ಷಿಸಬೇಕು ಮತ್ತು ಅಗತ್ಯ ನವೀಕರಣದೊಂದಿಗೆ ಪುನಃಸ್ಥಾಪನೆ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಸಮಗ್ರ ಯೋಜನಾ ವರದಿಯನ್ನು ಸಿದ್ಧಪಡಿಸಬೇಕೆಂದು ಪೀಠ ಹೇಳಿದೆ. ಈ ಎರಡು ನಿರ್ಮಾಣಗಳನ್ನು ನೆಲಸಮಗೊಳಿಸಬೇಕೆಂಬ ಪ್ರಸ್ತಾವನೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಸ್ಪೆಷಲ್ ಲೀವ್ ಪಿಟಿಷನ್ ಸಂಬಂಧ ನ್ಯಾಯಾಲಯವು ವಿಚಾರಣೆ ನಡೆಸಿ, ಐಐಟಿ ರೂರ್ಕಿ ಸಮಿತಿಯ ಸಂಶೋಧನೆಗಳಿಗೆ ಅನುಗುಣವಾಗಿ ಮುಂದುವರಿಯುವಂತೆ ರಾಜ್ಯ ಸರ್ಕಾರ, ಜಿಲ್ಲಾಡಳಿತ ಮತ್ತು ಮೈಸೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಿದೆ. ಈ ಪಾರಂಪರಿಕ ನಿರ್ಮಾಣಗಳಿಗೆ ಯಾವುದೇ ಹಾನಿಯಾಗದಂತೆ ಸೂಕ್ತ ಕ್ರಮಗಳನ್ನು ಶೀಘ್ರವೇ ಕೈಗೊಳ್ಳುವಂತೆ ಸೂಚಿಸಿರುವ ನ್ಯಾಯಾಲಯವು, ಮುಂದಿನ ವಿಚಾರಣೆಯನ್ನು ಜು.30ಕ್ಕೆ ನಿಗದಿಪಡಿಸಿದೆ. ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ ಶಿಫಾರಸುಗಳನ್ನು ಪರಿಗಣಿಸುವಂತೆಯೂ ಪೀಠವು ಅಧಿಕಾರಿಗಳಿಗೆ ಸೂಚಿಸಿದೆ.

**ಐಐಟಿ ರೂರ್ಕಿ ವರದಿ**

ಅಕ್ಟೋಬರ್ 2025 ರಲ್ಲಿ ನಡೆಸಿದ ಕಟ್ಟಡಗಳ ಸಮಗ್ರ ವಿಶ್ಲೇಷಣೆ ಮತ್ತು ಆಡಿಟ್ ಆಧಾರದಲ್ಲಿ ಐಐಟಿ ರೂರ್ಕಿ ತಜ್ಞರು, ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್ ಡೌನ್ ಬಿಲ್ಡಿಂಗ್ ಎರಡನ್ನೂ ಸಂರಕ್ಷಿಸುವುದು ಸಾಧ್ಯವೆಂದು ಹೇಳಿದ್ದಾರೆ. ಮೈಸೂರಿನ ನಾಗರಿಕ ವಾಸ್ತುಶಿಲ್ಪ ಸಮೂಹದ ಭಾಗವಾಗಿ ಈ ಕಟ್ಟಡಗಳು ಇಂದಿಗೂ ಪ್ರಸ್ತುತವಾಗಿದ್ದು, ಪರಸ್ಪರ ಸಂಬಂಧ ಹೊಂದಿರುವ ಮೌಲ್ಯಗಳ ಒಳಗೆ ವೈಜ್ಞಾನಿಕ ಸಂರಕ್ಷಣಾ ಯೋಜನೆ ಅಗತ್ಯವಿದ್ದು, ತೀವ್ರ ಹಾನಿಗೀಡಾಗಿರುವ ಭಾಗಗಳನ್ನು ಒಳಗೊಂಡಿವೆ. ಸಮಗ್ರ ಮತ್ತು ಪುನರುಜ್ಜಿವನದ ಭಾಗವಾಗಿ ಮರುನಿರ್ಮಾಣ ಮಾಡಬಹುದು ಎಂದು ಸಮಿತಿ ಹೇಳಿದೆ.

**ನೆಲಸಮ ಪ್ರಸ್ತಾವನೆ ವಿರುದ್ಧ ಪಿಟಿಷನ್**

ಪಾರಂಪರಿಕ ಪ್ರತಿಪಾದಕ ಹಾಗೂ ಲೇಖಕ ಜಿ.ಸತ್ಯನಾರಾಯಣ, ಮಹಾರಾಜ ಜಯಚಾಮರಾಜ ಒಡೆಯರ್ ಅವರ ಅಳಿಯ ಆರ್. ರಾಜಚಂದ್ರ ಮತ್ತು ಇತರರು ಈ ಎಸ್‌ಎಲ್‌ಪಿ ಸಲ್ಲಿಸಿದ್ದರು. ಈ ಎಸ್‌ಎಲ್‌ಪಿ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ಈ ಹಿಂದೆ ನೆಲಸಮ ಮತ್ತು ಪುನರ್ ನಿರ್ಮಾಣ ಕ್ರಮಕ್ಕೆ ತಡೆ ನೀಡಿತ್ತು. ಈ ನಡುವೆ ಇತ್ತೀಚೆಗೆ ಲ್ಯಾನ್ಸ್ ಡೌನ್ ಕಟ್ಟಡದ ಪುನರ್ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ, 35.95 ಕೋಟಿ ರೂ. ಮೊತ್ತಕ್ಕೆ ಟೆಂಡರ್ ಕರೆದಿದೆ. ಸುಪ್ರೀಂ ಕೋರ್ಟ್ ಅಭಿಪ್ರಾಯಗಳನ್ನು ಸ್ವಾಗತಿಸಿದ ಆರ್.ರಾಜಚಂದ್ರ, ಅಧಿಕಾರಿಗಳು ಈಗ ವಾಸ್ತವ ಗಳನ್ನು ಗುರುತಿಸಿ ನಗರದ ಪರಂಪರೆಯನ್ನು ಸಂರಕ್ಷಿಸಲು ಕ್ರಮ ಕೈಗೊಳ್ಳುತ್ತಾರೆ ಎಂದು ಆಶಿಸಿದ್ದಾರೆ.


> **ನ್ಯಾಯಾಲಯ ಸದ್ಯ ಯಥಾಸ್ಥಿತಿಯಲ್ಲಿ ಲ್ಯಾನ್ಸ್‌ಡೌನ್ ಕಟ್ಟಡ ಹಾಗೂ ದೇವರಾಜ ಮಾರುಕಟ್ಟೆಯನ್ನು ಸಂರಕ್ಷಿಸುವಂತೆ ಹೇಳಿದ್ದು, ಈ ಸಂಬಂಧ ನಮ್ಮ ಇಂಟ್ಯಾಕ್ ಮೈಸೂರು, ಇಂಟ್ಯಾಕ್ ಬೆಂಗಳೂರು, ಇಂಟ್ಯಾಕ್ ದೆಹಲಿ, ವರದಿ ಆಧಾರದ ಮೇಲೆ ಈ ತೀರ್ಮಾನ ಮಾಡಿದೆ. ಜು.30ರಷ್ಟು ವಿಚಾರಣೆ ಮುಂದೂಡಿದ್ದು ಅಲ್ಲಿ ಎನೆಲ್ಲಾ ತೀರ್ಮಾನ ಆಗಲಿದೆ ಎಂಬುದನ್ನು ಕಾದು ನೋಡಬೇಕಿದೆ.**
>
> ▶▶ **ಪ್ರೊ.ರಂಗರಾಜನ್** ಇತಿಹಾಸ ತಜ್ಞ

# ಜನತೆಗೆ ಸುಲಲಿತ ಮತ್ತು ತುರ್ತು ಆರೋಗ್ಯ ಸೇವೆ ದೊರೆಯಲಿ

ನಂಜನಗೂಡು: ನಗರದ ಸಾರ್ವಜನಿಕ ಆಸ್ಪತ್ರೆ ಸಭಾಂಗಣದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ತಾಯಿ–ಮಕ್ಕಳ ಆಸ್ಪತ್ರೆಯ ಅಧಿಕಾರಿಗಳೊಂದಿಗೆ ಇಂದು ತುರ್ತು ಸಭೆ ನಡೆಸಿದರು. ಈ ವೇಳೆ ಕ್ಷೇತ್ರದ ಪ್ರತಿಯೊಬ್ಬ ನಾಗರಿಕನಿಗೂ ಸಮರ್ಪಕ ವೈದ್ಯಕೀಯ ಸೇವೆ ಒದಗಿಸುವ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ಅವರು, ಆಸ್ಪತ್ರೆಗಳಲ್ಲಿನ ಮೂಲಭೂತ ಸೌಕರ್ಯಗಳ ಲಭ್ಯತೆ ಹಾಗೂ ರೋಗಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

**ಉತ್ತಮ ಆರೋಗ್ಯ ಸೇವೆ ಹಾಗೂ ಮುನ್ನೆಚ್ಚರಿಕೆ**

ಕೋವಿಡ್ ಮಹಾಮಾರಿಯ ನಂತರ ಈಗ ಹಂಟಾ ಎಂಬ ಹೊಸ ವೈರಸ್ ಭೀತಿ ಮಾಧ್ಯಮಗಳಲ್ಲಿ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ, ಆರೋಗ್ಯ ಇಲಾಖೆ ಅಧಿಕಾರಿಗಳು ಅತ್ಯಂತ ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಶಾಸಕರು ತಿಳಿಸಿದರು. ಗ್ರಾಮೀಣ ಪ್ರದೇಶದ ಜನರು ತುರ್ತು ಚಿಕಿತ್ಸೆಗಾಗಿ ತಾಲೂಕು ಕೇಂದ್ರದ ಆಸ್ಪತ್ರೆಗೆ ಧಾವಿಸಿದಾಗ, ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಅವರ ಸಂಕಷ್ಟಕ್ಕೆ ತಕ್ಷಣ ಸ್ಪಂದಿಸಿ ಜೀವ ಉಳಿಸುವ ಕೆಲಸ ಮಾಡಬೇಕು. ಸಣ್ಣ ಪುಟ್ಟ ಸಮಸ್ಯೆಗಳಿಗೂ ಜಿಲ್ಲಾ ಆಸ್ಪತ್ರೆಗೆ ರೋಗಿಗಳನ್ನು ವರ್ಗಾಯಿಸುವ ಪದ್ಧತಿಯನ್ನು ಕೈಬಿಡ ಬೇಕು, ಏಕೆಂದರೆ ದೂರದ ಪ್ರಯಾಣದ ವೇಳೆ ರೋಗಿಯ ಸ್ಥಿತಿ ಮತ್ತಷ್ಟು ಹದಗೆಡುವ ಸಾಧ್ಯತೆ ಇರುತ್ತದೆ ಎಂದು ಅವರು ಎಚ್ಚರಿಸಿದರು.



> ▶▶ **ಕ್ಷೇತ್ರದ: ಅಧಿಕಾರಿಗಳಿಗೆ ಶಾಸಕ ದರ್ಶನ್ ಎಚ್ಚರಿಕೆ**

**ನಕಲಿ ವೈದ್ಯರ ವಿರುದ್ಧ ಕ್ರಮ ಮತ್ತು ಉತ್ತರದಾಯಿತ್ವ**

ಕ್ಷೇತ್ರದ ಜನರಿಂದ ವೈದ್ಯಕೀಯ ಸೇವೆಯ ನಿರ್ಲಕ್ಷ್ಯದ ಬಗ್ಗೆ ವಾಟ್ಸಪ್ ಮೂಲಕ ಅನೇಕ ದೂರುಗಳು ಬರುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ ಶಾಸಕರು, ಅಧಿಕಾರಿಗಳು ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಧೋರಣೆ ತೋರಬಾರದು ಎಂದು ಸೂಚಿಸಿದರು. ಅಧಿಕಾರಿಗಳಿಗೆ ಯಾವುದೇ ತಾಂತ್ರಿಕ ತೊಂದರೆಗಳಿದ್ದರೆ ನೇರವಾಗಿ ತಮ್ಮ ಗಮನಕ್ಕೆ ತರುವಂತೆ ತಿಳಿಸಿದ ಅವರು, ತಾಲೂಕಿನಾದ್ಯಂತ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ನಕಲಿ ವೈದ್ಯರ ಕ್ಲಿನಿಕ್ಗಳನ್ನು ಕೂಡಲೇ ಮುಚ್ಚಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಆದೇಶಿಸಿದರು.

**ನಗರದ ನೈರ್ಮಲ್ಯ ಮತ್ತು ಮಾರುಕಟ್ಟೆ ಸುಧಾರಣೆ**

ಆರೋಗ್ಯದ ಜೊತೆಗೆ ನೈರ್ಮಲ್ಯದ ಬಗ್ಗೆಯೂ ಹೆಚ್ಚಿನ ಗಮನ ಹರಿಸಿದ ಶಾಸಕರು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೋಡಲ್ ಅಧಿಕಾರಿಗಳು ಹಾಗೂ ಪಿಡಿಒಗಳು ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದರು. ನಂಜನಗೂಡು ನಗರದ ಮಟನ್ ಮಾರ್ಕೆಟ್ ಬಳಿ ಮಾಂಸಹಾರದ ತ್ಯಾಜ್ಯವನ್ನು ಹೂಲಹಳ್ಳಿ ನಾಲೆಗೆ ಬಿಡುತ್ತಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅವರು, ಆರೋಗ್ಯ ಅಧಿಕಾರಿಗಳ ಅನುಮತಿ ಇಲ್ಲದೆ ನಡೆಯುತ್ತಿರುವ ಅವೈಜ್ಞಾನಿಕ ಚಟುವಟಿಕೆಗಳ ಮೇಲೆ ಶಿಸ್ತು ಕ್ರಮ ಜರುಗಿಸಲು ನಗರಸಭೆ ಪೌರಾಯುಕ್ತ ಬಸವರಾಜ್ ಅವರಿಗೆ ಸೂಚಿಸಿದರು. ಮೈಸೂರು ಮಹಾನಗರ ಪಾಲಿಕೆಯ ಮಾದರಿಯಲ್ಲೇ ನಗರದ ಮಾರುಕಟ್ಟೆಗಳಲ್ಲಿ ಶಿಸ್ತುಬದ್ಧ ನೈರ್ಮಲ್ಯ ಪಾಲನೆಯಾಗಬೇಕು ಎಂದು ಅವರು ಸ್ಪಷ್ಟಪಡಿಸಿದರು. ಈ ತುರ್ತು ಸಭೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಸೀಲ್ದಾರ್ ಸ್ಮಿತಾ ರಾಮ್, ಇಒ ಜೆರಾಲ್ಡ್ ರಾಜೇಶ್, ನಗರಸಭೆ ಪೌರಾಯುಕ್ತ ಬಸವರಾಜ್, ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ. ಈಶ್ವರ್, ಡಾ. ಶಿವಪ್ರಸಾದ್ ಹಾಗೂ ಡಿವೈಎಸ್ಪಿ ರಘು ಸೇರಿದಂತೆ ಹಲವು ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೇ. 13ರಂದು ಚಾಮರಾಜನಗರಕ್ಕೆ ಲೋಕಾಯುಕ್ತ ಅಧಿಕಾರಿಗಳ ಭೇಟಿ

**ಸಾರ್ವಜನಿಕರಿಂದ ದೂರು ಸ್ವೀಕಾರ**

ಚಾಮರಾಜನಗರ, ಜಿಲ್ಲೆಯ ಲೋಕಾಯುಕ್ತ ಅಧಿಕಾರಿಗಳು ಮೇ 13ರಂದು ಚಾಮರಾಜನಗರ ಪಟ್ಟಣಕ್ಕೆ ಭೇಟಿ ನೀಡಿ ಅಲ್ಲಿನ ಪ್ರವಾಸಿಮಂದಿರದಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ.

ಸಾರ್ವಜನಿಕರು ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಭರ್ತಿ ಮಾಡಿ ಸಲ್ಲಿಸಿದ ದೂರು ಅರ್ಜಿಗಳನ್ನು ಸ್ವೀಕರಿಸಿ ವಿಚಾರಣೆ ನಡೆಸುವರು. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕ ಕೆಲಸಗಳ ಅನಗತ್ಯ ವಿಳಂಬ, ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ ಹಾಗೂ ನೌಕರರ ವಿರುದ್ಧ ದೂರುಗಳನ್ನು ನಿಗದಿತ ನಮೂನೆ–1 ಮತ್ತು 2ರಲ್ಲಿ ನೀಡಬಹುದು. ನಾಗರಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




**ಹೊರೆಯಾಲ ಗ್ರಾಮದಲ್ಲಿ ಆಪ್ತ ಸಹಾಯಕ ಗೋಪಾಲ್ ಹೊರೆಯಾಲ ಅವರಿಂದ ಚಾಲನೆ**


# ಮಹಾಪುರುಷರ ಸ್ವಾಗತ ಕಮಾನು ನಿರ್ಮಾಣಕ್ಕೆ ಭೂಮಿಪೂಜೆ

ಗುಂಡ್ಲುಪೇಟೆ: ತಾಲೂಕಿನ ಹೊರೆಯಾಲ ಗ್ರಾಮದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಹಾಗೂ ವಾಲ್ಮೀಕಿ ಅವರ ಪುತ್ಥಳಿಗಳನ್ನೊಳಗೊಂಡ ಭವ್ಯ ಸ್ವಾಗತ ಕಮಾನು ನಿರ್ಮಾಣಕ್ಕೆ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ಆಪ್ತ ಸಹಾಯಕ ಗೋಪಾಲ್ ಹೊರೆಯಾಲ ಚಾಲನೆ ನೀಡಿದರು.

ಶುಕ್ರವಾರ ನಡೆದ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮದ ಸರ್ವತೋಮುಖ ಅಭಿವೃದ್ಧಿ ಹಾಗೂ ಸಾಮಾಜಿಕ ಸೌಹಾರ್ದತೆಯ ಕುರಿತು ವಿಷಯಗಳನ್ನು ಹಂಚಿಕೊಂಡರು:

**ಸೌಹಾರ್ದತೆಯೇ ಗ್ರಾಮದ ಶಕ್ತಿ:**

"ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗದವರು ಸೇರಿದಂತೆ ಎಲ್ಲಾ ಸಮುದಾಯದವರು ಪ್ರೀತಿ ಮತ್ತು ವಿಶ್ವಾಸದಿಂದ ಬಾಳಿದಾಗ ಮಾತ್ರ ಗ್ರಾಮದಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಾಣವಾಗುತ್ತದೆ. ಬಡತನದ ಹಿನ್ನೆಲೆಯಿಂದ ಬಂದ ನನಗೆ ಸಾಮಾನ್ಯ ಜನರ ಸಂಕಷ್ಟಗಳ ಅರಿವಿದೆ. ಈ ನಿಟ್ಟಿನಲ್ಲಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನಿಲ್ ಬೋಸ್ ಅವರ ಮಾರ್ಗದರ್ಶನದಲ್ಲಿ ತಾಲೂಕಿನಾದ್ಯಂತ ಅಭಿ ವೃದ್ಧಿ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ" ಎಂದರು.



**ಮಾದರಿ ಗ್ರಾಮವನ್ನಾಗಿಸುವ ಗುರಿ:**

"ನನ್ನ ಹುಟ್ಟೂರಾದ ಹೊರೆಯಾಲ ಗ್ರಾಮವನ್ನು ತಾಲೂಕಿಗೆ ಮಾದರಿಯನ್ನಾಗಿ ಮಾಡುವುದು ನನ್ನ ಆಸೆ. ಈಗಾಗಲೇ ಹಲವು ಕಾಮಗಾರಿಗಳು ಮಂಜೂರಾಗಿದ್ದು, ಮುಂದಿನ ದಿನಗಳಲ್ಲಿ ದಲಿತ ಮತ್ತು ಹಿಂದುಳಿದ ವರ್ಗಗಳ ಕೇರಿಗಳಿಗೆ ರಸ್ತೆ, ಚರಂಡಿಯಂತಹ ಮೂಲಸೌಕರ್ಯಗಳನ್ನು ಕಲ್ಪಿಸಲು ಸಚಿವರಿಂದ ಹೆಚ್ಚಿನ ಅನುದಾನ ಕೊಡಿಸಲಾಗುವುದು. ಗ್ರಾಮದ ಬಾಕಿ ಇರುವ ಕೆಲಸಗಳ ಪಟ್ಟಿಯನ್ನು ಶೀಘ್ರದಲ್ಲೇ ಸಚಿವರ ಗಮನಕ್ಕೆ ತರಲಾಗುವುದು" ಎಂದು ಭರವಸೆ ನೀಡಿದರು.

**ಶಿಕ್ಷಣಕ್ಕೆ ಆದ್ಯತೆ ನೀಡಲು ಕರೆ:**

ಡಾ. ಬಿ.ಆರ್. ಅಂಬೇಡ್ಕರ್ ಅವರ ಹೋರಾಟದ ಫಲವಾಗಿ ನಮಗೆ ಇಂದು ಸ್ವಾತಂತ್ರ್ಯ ಮತ್ತು ಸಮಾನತೆ ಸಿಕ್ಕಿದೆ. ಆ ಅವಕಾಶವನ್ನು ಬಳಸಿಕೊಂಡು ಪೋಷಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು. ಕೇವಲ ಸರ್ಕಾರಿ ಉದ್ಯೋಗ ಮಾತ್ರವಲ್ಲದೆ ಖಾಸಗಿ ವಲಯದಲ್ಲೂ ದೊಡ್ಡ ಸ್ಥಾನಗಳನ್ನು ಅಲಂಕರಿಸಬೇಕು ಎಂದು ಅವರು ಕಿವಿಮಾತು ಹೇಳಿದರು. ಗ್ರಾಮದ ಪ್ರವೇಶ ದ್ವಾರದಲ್ಲಿ ನಿರ್ಮಾಣವಾಗಲಿರುವ ಈ ಸ್ವಾಗತ ಕಮಾನು, ಹೊರಗಿನಿಂದ ಬರುವವರಿಗೆ ಮಹಾಪುರುಷರ ಸಮಾನತೆಯ ಸಂದೇಶವನ್ನು ಸಾರಲಿದೆ ಎಂದು ಅವರು ಆಶಯ ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಶಿವಸ್ವಾಮಿ, ಪಿಎಲ್‌ಡಿ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಎಚ್.ಎಂ. ಮಹೇಶ್, ವಕೀಲ ಮಹೇಶ್, ಯಜಮಾನರಾದ ಚಿಕ್ಕತಮ್ಮಯ್ಯ, ಡಿ.ಮಹದೇವನಾಯಕ, ಇಂದ್ರನಾಯಕ, ಸಹ ಪ್ರಾಧ್ಯಾಪಕ ಡಾ.ಬಿ.ಶೇಖರ್, ಉಪನ್ಯಾಸಕ ಜಗದೀಶ್, ಶಿಕ್ಷಕರಾದ ಮಹೇಶ್ವರಿ, ಸಿಆರ್‌ಪಿಎಫ್‌ನ ರಾಜು ಮತ್ತಿತರರು ಹಾಜರಿದ್ದರು.

ಕೆ.ಆರ್.ಪೇಟೆ: ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ

# ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿಪೂಜೆ



ಕೆ.ಆರ್.ಪೇಟೆ: ತಾಲೂಕಿನ ಕಿಕ್ಕೇರಿ ಹೋಬಳಿಯ ವಿವಿಧ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಹೆಚ್.ಟಿ. ಮಂಜು ಅವರು ಅಧಿಕೃತವಾಗಿ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದ್ದಾರೆ. ಕಿಕ್ಕೇರಿ ಹೋಬಳಿಯ ವಡಕಹಳ್ಳಿ, ಐನೋರಹಳ್ಳಿ, ದೇವರಹಳ್ಳಿ, ಕಡೆಹೆಮ್ಮಿಗೆ ಹಾಗೂ ಯಲಾದಹಳ್ಳಿ ಗ್ರಾಮಗಳಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ನಡೆಯಲಿರುವ ರಸ್ತೆ ಅಭಿವೃದ್ಧಿ ಕೆಲಸಗಳಿಗೆ ಈ ಸಂದರ್ಭದಲ್ಲಿ ಚಾಲನೆ ದೊರೆಯಿತು. ಇದರೊಂದಿಗೆ ಲೋಕೋಪಯೋಗಿ ಇಲಾಖೆಯ ವತಿಯಿಂದ ಐಕನಹಳ್ಳಿ ಕೊಪ್ಪಲು ತೋಪೇಗೌಡ ವೃತ್ತದಿಂದ ಕಾಂತರಾಜಪುರ ಮಾರ್ಗದ ರಸ್ತೆ ಹಾಗೂ ಊಗಿನಹಳ್ಳಿ ಗೇಟ್‌ನಿಂದ ಮಾದಾಪುರ ಮಾರ್ಗದ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಗಳಿಗೂ ಚಾಲನೆ ನೀಡಲಾಯಿತು.

### ಗುಣಮಟ್ಟದ ಕಾಮಗಾರಿಗೆ ಕಟ್ಟುನಿಟ್ಟಿನ ಸೂಚನೆ

ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಶಾಸಕ ಹೆಚ್.ಟಿ. ಮಂಜು ಅವರು, ಗುತ್ತಿಗೆದಾರರು ಕಾಮಗಾರಿಯ ನಿರ್ವಹಣೆಯಲ್ಲಿ ಯಾವುದೇ ಕಾರಣಕ್ಕೂ ಗುಣಮಟ್ಟದ ಕುರಿತು ರಾಜಿ ಮಾಡಿಕೊಳ್ಳಬಾರದು ಎಂದು ಎಚ್ಚರಿಸಿದರು. ಕಾಮಗಾರಿ ನಡೆಯುವ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳದಲ್ಲೇ ಉಪಸ್ಥಿತರಿದ್ದು, ಕೆಲಸದ ಗುಣಮಟ್ಟವನ್ನು ನಿರಂತರವಾಗಿ ಪರಿಶೀಲಿಸಬೇಕು ಎಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು. ಪ್ರಸ್ತುತ ತಾವು ವಿರೋಧ ಪಕ್ಷದ ಶಾಸಕರಾಗಿದ್ದರೂ ಸಹ, ಸರ್ಕಾರದಿಂದ ಬಿಡುಗಡೆಯಾಗುವ ಅಲ್ಪ ಅನುದಾನವನ್ನೇ ಬಳಸಿಕೊಂಡು ತೀರಾ ಅಗತ್ಯವಿರುವ ಗ್ರಾಮಗಳಿಗೆ ಹಂಚಿಕೆ ಮಾಡುವ ಮೂಲಕ ರಸ್ತೆಗಳ ಸುಧಾರಣೆಗೆ ಪ್ರಥಮ ಆದ್ಯತೆ ನೀಡುತ್ತಿರುವುದಾಗಿ ಅವರು ಸ್ಪಷ್ಟಪಡಿಸಿದರು.

### ಸಮಗ್ರ ಅಭಿವೃದ್ಧಿಯ ದೂರದೃಷ್ಟಿ ಮತ್ತು ಭರವಸೆ

ತಾಲೂಕಿನ ಎಲ್ಲಾ ಗ್ರಾಮಗಳನ್ನು ತಾವು ಸಮಾನವಾಗಿ ಕಾಣುತ್ತಿದ್ದು, ಯಾವುದೇ ಗ್ರಾಮವನ್ನು ಅಭಿವೃದ್ಧಿಯಿಂದ ಕಡೆಗಣಿಸುವ ಪ್ರಶ್ನೆಯೇ ಇಲ್ಲ ಎಂದು ಶಾಸಕರು ಭರವಸೆ ನೀಡಿದರು. ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಮೂಲಕ ಹಂತ ಹಂತವಾಗಿ ತಾಲೂಕಿನ ಎಲ್ಲಾ ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿಪಡಿಸಿ, ಕೆ.ಆರ್.ಪೇಟೆಯನ್ನು ಮಾದರಿ ತಾಲೂಕನ್ನಾಗಿ ಮಾಡುವ ಗುರಿ ಹೊಂದಿರುವುದಾಗಿ ಅವರು ತಿಳಿಸಿದರು. ಇದೇ ವೇಳೆ 2028ರ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಅಂದು ತಾವು ಪುನರಾಯ್ಕೆಯಾದರೆ ಸಾವಿರಾರು ಕೋಟಿ ರೂಪಾಯಿ ಅನುದಾನ ತಂದು ತಾಲೂಕಿನ ಚಿತ್ರಣವನ್ನೇ ಬದಲಿಸುವುದಾಗಿ ಮತದಾರರಿಗೆ ಭರವಸೆ ನೀಡಿದರು.

### ಮೂಲಸೌಕರ್ಯ ಹಾಗೂ ಶೈಕ್ಷಣಿಕ ಸಾಧನೆಗೆ ಶ್ಲಾಘನೆ

ತಾಲೂಕಿನ ಪ್ರತಿ ಗ್ರಾಮಕ್ಕೂ ಜಲಜೀವನ್ ಮಿಷನ್ ಯೋಜನೆಯಡಿ ಶುದ್ಧ ಕುಡಿಯುವ ನೀರು ಒದಗಿಸುವ ಕೆಲಸ ನಡೆಯುತ್ತಿದ್ದು, ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ಗುಣಮಟ್ಟದೊಂದಿಗೆ ಕೆಲಸ ಪೂರ್ಣಗೊಳಿಸಬೇಕು ಎಂದು ಶಾಸಕರು ತಾಕೀತು ಮಾಡಿದರು. ಅಪೂರ್ಣಗೊಂಡ ಕಾಮಗಾರಿಗಳ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳು ವಹಿಸಿಕೊಳ್ಳಬಾರದು ಎಂದು ಅವರು ಸಲಹೆ ನೀಡಿದರು. ಇನ್ನು ತಾಲೂಕಿನ ಶೈಕ್ಷಣಿಕ ಪ್ರಗತಿಯ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಎರಡನೇ ಸ್ಥಾನ ತಂದುಕೊಟ್ಟ ಶಿಕ್ಷಕರನ್ನು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಬಸವೇಗೌಡ ಹಾಗೂ ಕಿಕ್ಕೇರಿ ಹೋಬಳಿಯ ಜೆಡಿಎಸ್ ಮುಖಂಡರು ಮತ್ತು ಗ್ರಾಮ ಪಂಚಾಯಿತಿ ಸದಸ್ಯರು ಉಪಸ್ಥಿತರಿದ್ದರು.

# ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ಸಂರಕ್ಷಣೆಗೆ: ಆಗ್ರಹ



ಮೈಸೂರು: ಮೈಸೂರಿನ ಪಾರಂಪರಿಕ ಕಟ್ಟಡಗಳಾಗಿರುವ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡದ ಸಂರಕ್ಷಣೆ ಹಾಗೂ ನವೀಕರಣಕ್ಕೆ ಅನುದಾನವನ್ನು ಶೀಘ್ರ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, ಮೈಸೂರಿನ ಐತಿಹಾಸಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡದ ಸಂರಕ್ಷಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ 4 ಮೇ 2026 ರಂದು ನೀಡಿದ ತೀರ್ಪು ಅತ್ಯಂತ ಮಹತ್ವದ್ದಾಗಿದೆ. ಕಟ್ಟಡ ಕೆಡವಿ ಪುನರ್ ನಿರ್ಮಾಣದ ಪ್ರಸ್ತಾವನೆಯನ್ನು ತಿರಸ್ಕರಿಸಿದೆ. 19ನೇ ಶತಮಾನದ ಈ ಐತಿಹಾಸಿಕ ಕಟ್ಟಡವನ್ನು ಸಂರಕ್ಷಿಸಿ, ನವೀಕರಿಸಲು ಆದೇಶಿಸಿದೆ ಎಂದು ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದಿದ್ದಾರೆ.

ಐಐಟಿ ರೂರ್ಕಿ ಸಲ್ಲಿಸಿದ ವಿವರವಾದ ತಾಂತ್ರಿಕ ಅಧ್ಯಯನ ವರದಿ ಆಧರಿಸಿ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. ಸುಮಾರು 70% ದುರಸ್ತಿ ಮಾಡಬ ಹುದಾಗಿದೆ. ಹಾಲಿ ಇರುವ ಅಡಿಪಾಯ ಸಂರಕ್ಷಣೆ ಮತ್ತು ನವೀಕರಣ ಸಾಧ್ಯವಾಗಲಿದೆ. "ನಾಗರಿಕ ವಾಸ್ತುಶಿಲ್ಪ ಸಮೂಹ"ಗಳು ಮೈಸೂರಿನ ಅವಿಭಾಜ್ಯ ಅಂಗವಾಗಿದೆ. ಮೈಸೂರು–ಕೊಡಗು ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯನಾಗಿ, ಮೈಸೂರಿನ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಪ್ರವಾಸೋದ್ಯಮ ಸಂರಕ್ಷಿಸಲು ಬದ್ಧನಾಗಿದ್ದೇನೆ. ನ್ಯಾಯಾಂಗ ಆದೇಶವನ್ನು ಪಾಲಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಈ ನಿಟ್ಟಿನಲ್ಲಿ ಐಐಟಿ ರೂರ್ಕಿ ಮತ್ತು ಇಂಟಾಚ್ ತಜ್ಞರ ಸಮಿತಿ ನೀಡಿರುವ ಶಿಫಾರಸಿನ ಅನ್ವಯ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ನವೀಕರಣಕ್ಕೆ ಅನುದಾನ ಬಿಡುಗಡೆ ಮಾಡಬೇಕು. ಮೈಸೂರು ನಗರ ನಿಗಮ (ಎಂಸಿಸಿ) ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರಗಳು (ಎಂಡಿಎ) ಈ ಯೋಜನೆಯನ್ನು ತಕ್ಷಣವೇ ಪ್ರಾರಂಭಿಸಬೇಕು ಎಂದು ಸೂಚನೆ ನೀಡಬೇಕು. ರಾಜ್ಯ ಸರ್ಕಾರದಿಂದ ಹಂಚಿಕೆಯಾದ ಹಣವನ್ನು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಮಾತ್ರ ಬಳಸಲಾಗುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕಾಗಿದೆ ಎಂದಿದ್ದಾರೆ.

2024–25ರ ಬಜೆಟ್‌ನಲ್ಲಿ ದೇವರಾಜ ಮಾರುಕಟ್ಟೆಯ ನವೀಕರಣಕ್ಕೆ 95 ಕೋಟಿ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಕ್ಕೆ 35 ಕೋಟಿ ಅನುದಾನ ಘೋಷಿಸಲಾಗಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕೇವಲ ಕಟ್ಟಡಗಳಲ್ಲ, ಇವು ಮೈಸೂರಿನ ಜೀವಂತ ಸಾಂಸ್ಕೃತಿಕ ಮತ್ತು ವಾಣಿಜ್ಯ ಪರಂಪರೆಯನ್ನು ಪ್ರತಿನಿಧಿಸುತ್ತವೆ, ಮೈಸೂರಿನವರೇ ಆದ ಸಿಎಂ ಸಿದ್ದರಾಮಯ್ಯ ಇವುಗಳ ಸಂರಕ್ಷಣೆ ಮತ್ತು ನವೀಕರಣಕ್ಕೆ ಆದ್ಯತೆ ನೀಡಿ, ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವ ಭರವಸೆ ಇದೆ ಎಂದು ಹೇಳಿದ್ದಾರೆ.

# ಸಂವಿಧಾನದಲ್ಲೂ ಬಸವ ತತ್ವಗಳು

## ನಿವೃತ್ತ ನ್ಯಾಯಾಧೀಶ ನಾಗಮೋಹನ ದಾಸ್ ಹೇಳಿಕೆ | ಬಸವೇಶ್ವರರ ಪುತ್ಥಳಿ ಅನಾವರಣ


ರಾಮನಗರ: 12ನೇ ಶತಮಾನದ ಬಸವ ತತ್ವಗಳು ಭಾರತದ ಸಂವಿಧಾನದಲ್ಲೂ ಕಾಣುತ್ತಿದ್ದೇವೆ. ವಚನಗಳು ಬದುಕಿಗೆ ನೈತಿಕ ಚೌಕಟ್ಟು ಮತ್ತು ಸಂವಿಧಾನ ಕಾನೂನು ಚೌಕಟ್ಟು ಕಲ್ಪಿಸುತ್ತದೆ. ಇವು ಒಟ್ಟಿಗೆ ಇದ್ದರೆ ಕಲ್ಯಾಣ ರಾಷ್ಟ್ರ ಸಾಧ್ಯವಾಗುತ್ತದೆ ಎಂದು ನಿವೃತ್ತ ನ್ಯಾಯಾಧೀಶ ನಾಗಮೋಹನ ದಾಸ್ ಅಭಿಪ್ರಾಯಪಟ್ಟರು.

ಇಲ್ಲಿನ ನಗರಸಭೆಯ ಆವರಣದಲ್ಲಿ ಸ್ಥಾಪಿಸಿರುವ ಬಸವೇಶ್ವರರ ಪುತ್ಥಳಿ ಅನಾವರಣಗೊಳಿಸಿದ ನಮತರ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಮ ಸಮಾಜ ವಚನಕಾರರ ಕಲ್ಪನೆಯಾಗಿತ್ತು. ಸಂವಿಧಾನವೂ ಇದನ್ನೇ ಪ್ರತಿಪಾದಿಸುತ್ತದೆ. ಪ್ರಜಾಪ್ರಭುತ್ವ, ಜಾತ್ಯತೀತ ಹಾಗೂ ಸಾಮಾಜಿಕ ನ್ಯಾಯ ಈ ಮೌಲ್ಯಗಳು ವಚನಗಳಲ್ಲೂ ಇವೆ, ಸಂವಿಧಾನದಲ್ಲೂ ಇದೆ ಎಂದರು.

ದೇಶದಲ್ಲಿ ಹುಟ್ಟುತ್ತಾ ಜಾತಿ, ಜಾತಿಗೊಂದು ಕಸುಬು ಇತ್ತು. ಬದಲಾಯಿಸಲು ಅವಕಾಶವೇ ಇರಲಿಲ್ಲ. ಜಾತಿ ಮತ್ತು ಕಸುಬನ್ನು ವಂಶಪಾರಂಪರ್ಯ ಮಾಡಲಾಗಿತ್ತು. ಈ ಜಾತಿ ಅಸಮಾನತೆ, ಅಸ್ಪೃಶ್ಯತೆ ವಿರುದ್ಧ 12ನೇ ಶತಮಾನದ ವಚನಕಾರರು ಧ್ವನಿ ಎತ್ತಿದರು. ಆ ಸಿದ್ಧಾಂತವನ್ನು ಸಂವಿಧಾನದಲ್ಲಿಯೂ ಕಾಣಬಹುದಾಗಿದೆ.

ವಚನ ಮತ್ತು ಸಂವಿಧಾನದ ಸಾರಾಂಶ ಅರಿಯುವ ಕಾರ್ಯ ನಿರಂತರವಾಗಬೇಕು. ನಮ್ಮಲ್ಲಿನ ಅನೇಕ ಜನರು ವಚನ – ಸಂವಿಧಾನವನ್ನು ಓದಲಿಲ್ಲ. ಓದಿದ ಕೆಲವರು ಅರ್ಥ ಮಾಡಿಕೊಳ್ಳಲಿಲ್ಲ. ಅರ್ಥ ಮಾಡಿಕೊಂಡ ಬಹುತೇಕು ಬದುಕಿನಲ್ಲಿ ಅದನ್ನು ಅನುಷ್ಠಾನ ಮಾಡಿಕೊಳ್ಳಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಮಗೆ ಬೇಕಿರುವುದು ಬಸವಣ್ಣ, ಅಂಬೇಡ್ಕರ್ ಹಾಗೂ ಸಂವಿಧಾನದ ಅಮಲಲ್ಲ. ನಮಗೆಲ್ಲ ಅವುಗಳ ಅರಿವು ಬೇಕಿದೆ. ಇಂದು ಬಸವಣ್ಣ, ಅಂಬೇಡ್ಕರ್ ,ಕುವೆಂಪು ಫೋಟೋ ಇಟ್ಟುಕೊಂಡು ಜಾತಿ ರಾಜಕಾರಣ ಮಾಡುತ್ತಾರೆ. ಆ ದಾರ್ಶನಿಕರು ಒಂದು ಜಾತಿಗೆ ಸೀಮಿತರಾದವರಲ್ಲ . ಎಲ್ಲ ಜಾತಿ ಧರ್ಮಗಳ ಜನರ ಚೌಕಟ್ಟನ್ನು ಮೀರಿ ಜಗತ್ತಿನ ಮನಕುಲಕ್ಕೆ ಸಂದೇಶ ನೀಡಿದವರು. ಆ ಸಂದೇಶಗಳು ಇಡೀ ಮನುಕುಲದ ಎಲ್ಲ ಕಾಲಕ್ಕೂ ಪ್ರಸ್ತುತವಾಗಿರಲಿವೆ ಎಂದು ನಾಗಮೋಹನ್ ದಾಸ್ ಹೇಳಿದರು.




### ನಗರಸಭೆ ರಾಜ್ಯಕ್ಕೆ ಮಾದರಿ: ಎಚ್.ಎಂ.ರೇವಣ್ಣ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಅಧ್ಯಕ್ಷ ಎಚ್.ಎಂ.ರೇವಣ್ಣ ಮಾತನಾಡಿ, ದೇಶದಲ್ಲಿಯೇ ಮೊದಲ ಬಾರಿಗೆ ನಗರಸಭೆ ಆವರಣದಲ್ಲಿ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಪುತ್ಥಳಿ, ಸಂವಿಧಾನ ಪೀಠಿಕೆ ಸ್ಥಾಪಿಸಿರುವುದು. ಈಗ ಬಸವಣ್ಣರವರ ಮೂರ್ತಿಯನ್ನು ಅನಾವರಣ ಮಾಡಿ ಕೆ.ಶೇಷಾದ್ರಿರವರು ನಗರಸಭೆಗೆ ಕೀರ್ತಿ ತಂದಿದ್ದಾರೆ. ಬಸವಣ್ಣರವರ ತತ್ವಗಳನ್ನು ಸಂವಿಧಾನದಲ್ಲಿ ನೋಡುತ್ತಿದ್ದು, ಅದೆಲ್ಲವನ್ನು ಕಾನೂನಿನಲ್ಲಿ ಜಾರಿಗೆ ತರುತ್ತಿದ್ದೇವೆ. ಕನ್ನಡ ಸಾರಸ್ವತ ಲೋಕಕ್ಕೂ ಕೊಡುಗೆ ನೀಡಿದ ಬಸವಣ್ಣರವರು ಮಹಾನ್ ಮಾನವತವಾದಿ, ಸಮಸಮಾಜದ ಚಿಂತಕರು ಎಂದರು.

### ವಚನಗಳ ಮೂಲಕ ಬಸವಣ್ಣರ ವ್ಯಕ್ತಿತ್ವ ದರ್ಶನ – ಸುತ್ತೂರು ಶ್ರೀಗಳು

ಬಸವ ಜಯಂತಿಯನ್ನು ಉದ್ಘಾಟಿಸಿದ ಸುತ್ತೂರು ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಬಸವಣ್ಣ ಜಗತ್ತು ಕಂಡ ಶ್ರೇಷ್ಠ ಸಂತರು. ಅವರ ವಚನಗಳು ಬಹುಶ ಲಭ್ಯವಾಗದಿದ್ದರೆ ಬಸವಣ್ಣ ಪೌರಾಣಿಕ ವ್ಯಕ್ತಿಯಾಗಿ ಉಳಿದು ಬಿಡುತ್ತಿದ್ದರು. ರಹಸ್ಯವಾಗ ಬಹುದಾಗಿದ್ದ ವಚನಗಳನ್ನು ಶರಣರು ಕಾಪಾಡಿದ ಕಾರಣದಿಂದ ಬಸವಣ್ಣರವರ ವ್ಯಕ್ತಿತ್ವವನ್ನು ಪ್ರತ್ಯಕ್ಷವಾಗಿ ದರ್ಶನ ಮಾಡುವ ಅವಕಾಶ ಸಿಕ್ಕಿದಂತಾಗಿದೆ ಎಂದು ತಿಳಿಸಿದರು.

ವಿಶ್ವ ಗುರು ಬಸವಣ್ಣರವರು ಧಾರ್ಮಿಕ ನೆಲೆಗಟ್ಟನ್ನು ಮುಖ್ಯವಾಗಿಟ್ಟುಕೊಂಡು ಮಾಡಿದ ಕ್ರಾಂತಿ ವಿಕಸಿತ ಸಮಾಜವನ್ನು ಸುಧಾರಣೆ ಮಾಡುತ್ತಿದೆ. ಬಸವಣ್ಣರವರ ಸಾಮಾಜಿಕ ಸುಧಾರಣೆಗಳು ಕೇವಲ ಲೌಕಿಕ, ಸಾಮಾಜಿಕ ಹಾಗೂ ಮೇಲುಸ್ತರದಲ್ಲಿ ನಡೆದಿದ್ದು ಅಲ್ಲ. ಮನುಷ್ಯನ ಶ್ರೇಯಸ್ಸಿಗೆ ಮೋಕ್ಷ ಸಾಧನೆ, ಧಾರ್ಮಿಕ ಪ್ರಜ್ಞೆ, ಆಧ್ಯಾತ್ಮಿಕ ನಡವಳಿಕೆ ಎಲ್ಲವನ್ನು ಒಟ್ಟುಗೂಡಿಸಿ ಸಮಗ್ರ ಬದಲಾವಣೆ ಆಗಬೇಕೆಂದು ಧಾರ್ಮಿಕ ತಳಹಾದಿಯ ಮೇಲೆ ಸಾಮಾಜಿಕ ಸುಧಾರಣೆ ತರಲು ಬಯಸಿದವರು ಎಂದರು.

ವಚನಗಳಲ್ಲಿರುವ ಅಂಶಗಳು ಸಂವಿಧಾನದಲ್ಲಿಯೂ ಬಂದಿದೆ. ಬಸವಣ್ಣರವರು ಮಾಡಿದ ಸಾಮಾಜಿಕ ಸುಧಾರಣೆ ಇಂದಿಗೂ ಮಾದರಿಯಾಗಿದೆ. ಆ ವಚನಗಳು ಮೊದಲೇ ಸಿಕ್ಕಿದ್ದರೆ ಸಮಾಜದಲ್ಲಿ ಸಮಾತನೆ ಇರುತ್ತಿತ್ತು. ಈಗ ಅದನ್ನು ಅಂಬೇಡ್ಕರ್ ರವರು ಸಂವಿಧಾನದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಜಾರಿಗೆ ತಂದಿದ್ದಾರೆ ಎಂದು ಶ್ರೀಗಳು ಹೇಳಿದರು.

ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಮಹಾಸ್ವಾಮಿ, ಮರಳೇಗವಿ ಮಠದ ಶಿವರುದ್ರಸ್ವಾಮಿಗಳು, ಮಾಜಿ ಶಾಸಕರಾದ ಸಿ.ಎಂ.ಲಿಂಗಪ್ಪ, ಎಚ್.ಎಂ.ರೇವಣ್ಣ, ಕೆಎಂಎಫ್ ಮಾಜಿ ಅಧ್ಯಕ್ಷ ಪಿ.ನಾಗರಾಜು, ಜಿಲ್ಲಾಧಿಕಾರಿ ಯಶ್ವಂತ್ ವಿ ಗುರುಕರ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ.ಸತೀಶ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಯರೇಹಳ್ಳಿ ಮಂಜು, ಗ್ಯಾರಂಟಿ ಯೋಜನೆ ತಾಲ್ಲೂಕು ಅಧ್ಯಕ್ಷ ವಿ.ಎಚ್.ರಾಜು, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಆರೀಪ್, ಪೌರಾಯುಕ್ತ ಡಾ.ಜಯಣ್ಣ, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಜಿಲ್ಲಾಧ್ಯಕ್ಷ ಹೆಚ್.ಎಸ್.ಯೋಗಾನಂದ, ತಾಲೂಕು ಅಧ್ಯಕ್ಷ ಶಂಕರಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಕೆಇಬಿ ಶಾಖಾ ಕಚೇರಿಯ ಕಟ್ಟಡ ನಿರ್ಮಾಣಕ್ಕೆ ಚಾಲನೆ

ಗುಂಡ್ಲುಪೇಟೆ: ತಾಲ್ಲೂಕಿನ ಹಂಗಳ ಗ್ರಾಮದಲ್ಲಿ ಸುಮಾರು 82 ಲಕ್ಷ ವೆಚ್ಚದಲ್ಲಿ ಕೆಇಬಿ ಶಾಖಾ ಕಚೇರಿಯ ಕಟ್ಟಡ ನಿರ್ಮಾಣಕ್ಕೆ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿ ನಮ್ಮ ತಾಲ್ಲೂಕಿಗೆ ಮೂರು ವಿದ್ಯುತ್ ಉಪಕೇಂದ್ರ ಕ್ಕೆ ಸುಮಾರು 36 ಕೋಟಿಗೆ ಅನುದಾನ ತಂದು ಈಗಾಗಲೇ ಅರೇಪುರ ಬಳಿ ವಿದ್ಯುತ್ ಉಪಕೇಂದ್ರ ಉದ್ಘಾಟನೆಗೆ ಸಿದ್ದವಾಗಿದೆ, ಅಲ್ಲದೆ ವಡ್ಡಗೆರೆ ಮತ್ತು ಗೋಪಾಲಪುರ ಬಳಿ ಕೋಟ್ಯಾಂತರ ರೂ ವೆಚ್ಚದಲ್ಲಿ ಕಾಮಗಾರಿ ಭರದಿಂದ ಸಾಗುತಿದ್ದು ಇದರಿಂದ ಗ್ರಾಮೀಣ ಬಾಗದ ಜನರಿಗೆ ವಿದ್ಯುತ್ ಸಮಸ್ಯೆ ಬಗೆಹರಿದು ಗುಣಮಟ್ಟದ ವಿದ್ಯುತ್ ಸಿಗಲಿದೆ ಅದರಂತೆ ಹಂಗಳ ಗ್ರಾಮದಲ್ಲಿ ಕೆಇಬಿ ಶಾಖಾ ಕಚೇರಿ ನಿರ್ಮಾಣ ಮಾಡುತ್ತಿದ್ದೇವೆ ಎಂದರು. ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ಹೆಚ್ ಎಸ್ ನಂಜಪ್ಪ, ದೇವರಹಳ್ಳಿ ಪ್ರಭುಸ್ವಾಮಿ, ಎಪಿಎಂಸಿ ಅಧ್ಯಕ್ಷ ರಂಗೂಪುರ ನಾಗರಾಜು, ಹಾಪ್ ಕಾಮ್ಸ್ ಮಾಜಿ ಅಧ್ಯಕ್ಷ ಡಿ ಬಿ ಕುಮಾರ್, ಸುರೇಶ್, ಮಲ್ಲಪ್ಪ, ವೃಷಭೇಂದ್ರ ಮತ್ತಿತರರಿದ್ದರು.



# ಮೇ12ರಂದು ಹನೂರಿನಲ್ಲಿ ಉದ್ಯೋಗ ಮೇಳ

### ವಿವಿಧ ಕಂಪನಿಗಳು ಭಾಗಿ

ಚಾಮರಾಜನಗರ,– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಹನೂರು ಗ್ಯಾರಂಟಿ ಯೋಜನೆಗಳ ಅನು??ಠನ ಸಮಿತಿ ಮತ್ತು ಹನೂರು ತಾಲ್ಲೂಕು ಪಂಚಾಯಿತಿ ಹಾಗೂ ಚಾಮರಾಜನಗರ ವಿಶ್ವವಿದ್ಯಾನಿಲಯ ಇವರ ಸಹಯೋಗದಲ್ಲಿ ಉದ್ಯೋಗ ಮೇಳ ಕಾರ್ಯಕ್ರಮವನ್ನು ಮೇ 12ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಹನೂರಿನ ಶ್ರೀ ಜಿ.ವಿ ಗೌಡ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಎಸ್.ಎಸ್.ಎಲ್.ಸಿ, ಪಿಯುಸಿ, ಡಿಪ್ಲೋಮಾ, ಐ.ಟಿ.ಐ ಇಂಜಿನಿಯರಿಂಗ್ ಮತ್ತು ಯಾವುದೇ ಪದವಿ ಹಾಗೂ ಸ್ನಾತಕೋತ್ತರ ಪದವಿ ಅಭ್ಯರ್ಥಿಗಳಿಗಾಗಿ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವ–ವಿವರ (ಬಯೋ ಡೇಟಾ) ಮತ್ತು ಅಂಕಪಟ್ಟಿಗಳ ಮೂಲ ಹಾಗೂ ಜೆರಾಕ್ಸ್ ಪ್ರತಿಗಳೊಂದಿಗೆ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ 08224–200130, 08224–224430, 8105725710, 9731906898 ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಎ. ಮಹಮ್ಮದ್ ಅಕ್ಬರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕ್ಯಾನ್ಸರ್ ತಪಾಸಣಾ ಶಿಬಿರಕ್ಕೆ ಸಚಿವ ಕೆ.ವೆಂಕಟೇಶ್ ಭೇಟಿ

ಚಾಮರಾಜನಗರ, ಸ್ತ್ರೀ ಸೌಖ್ಯ ಕಾರ್ಯಕ್ರಮದಡಿ ಮಹಿಳೆಯರಲ್ಲಿ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿ ಆರಂಭದಲ್ಲಿಯೇ ರೋಗ ಪತ್ತೆಹಚ್ಚಿ ಚಿಕಿತ್ಸೆ ನೀಡುವ ಸಲುವಾಗಿ ನಡೆಸಲಾಗುತ್ತಿರುವ ಕ್ಯಾನ್ಸರ್ ತಪಾಸಣಾ ಶಿಬಿರಕ್ಕೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಶುಕ್ರವಾರ ಭೇಟಿ ನೀಡಿ ವೀಕ್ಷಿಸಿದರು.

ಚಾಮರಾಜನಗರ ತಾಲೂಕಿನ ಕಾಗಲವಾಡಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಕ್ಯಾನ್ಸರ್ ತಪಾಸಣಾ ಶಿಬಿರಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಿದರು.

ಇದುವರೆಗೆ ಎಷ್ಟು ಕಡೆ ಇಂತಹ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಎಷ್ಟು ಮಂದಿ ನೊಂದಾಯಿಸಿಕೊಳ್ಳುತ್ತಿದ್ದಾರೆ. ತಪಾಸಣೆ, ಚಿಕಿತ್ಸೆಗೆ ಒಳಗಾಗಿರುವವರ ಸಂಖ್ಯೆ ಎಷ್ಟು ಎಂಬುದರ ಬಗ್ಗೆ ಪ್ರಶ್ನಿಸಿ ಮಾಹಿತಿ ಪಡೆದುಕೊಂಡರು.

ಜಿಲ್ಲಾಧಿಕಾರಿ ಶ್ರೀರೂಪ ಅವರು ವಿವರಿಸಿ ಗರ್ಭಕಂಠ ಕ್ಯಾನ್ಸರ್, ಸ್ತನ ಕ್ಯಾನ್ಸರ್ ತಪಾಸಣೆಯನ್ನು ಮಹಿಳೆಯರಿಗೆ ನಡೆಸಲಾಗುತ್ತಿದೆ. ಪುರುಷರಿಗೆ ಬಾಯಿ ಕ್ಯಾನ್ಸರ್ ತಪಾಸಣೆಯನ್ನೂ ಸಹ ಮಾಡಲಾಗುತ್ತಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಮೊಬೈಲ್ ಕ್ಯಾನ್ಸರ್ ತಪಾಸಣಾ ಘಟಕ (ಪಿಂಕ್ ಬಸ್) ದೊಂದಿಗೆ ವೈದ್ಯರು ಸಿಬ್ಬಂದಿ ಸ್ಥಳಕ್ಕೆ ಬಂದು ತಪಾಸಣೆ ಮಾಡುತ್ತಿದ್ದಾರೆ. ಈ ಘಟಕದಲ್ಲಿಯೇ ಎಲ್ಲಾ ವೈದ್ಯಕೀಯ ಪರೀಕ್ಷೆಗಳ ವ್ಯವಸ್ಥೆಗಳು ಇವೆ ಎಂದು ತಿಳಿಸಿದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ ಮಾತನಾಡಿ ಇದುವರೆಗೆ ಏರ್ಪಡಿಸಲಾಗಿರುವ ತಪಾಸಣಾ ಶಿಬಿರ, ದೊರಕುತ್ತಿರುವ ವೈದ್ಯಕೀಯ ಪರೀಕ್ಷೆ, ಔಷದ ಚಿಕಿತ್ಸೆಗಳ ಕುರಿತು ಸಚಿವರಿಗೆ ಮಾಹಿತಿ ನೀಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದಿದ್ದ ಸಾರ್ವಜನಿಕರೊಂದಿಗೂ ಜ ಸಚಿವರು ಮಾತನಾಡಿ ಅಲ್ಲಿನ ಸೇವೆಯ ಬಗ್ಗೆ ತಿಳಿದುಕೊಂಡರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ತಹಶೀಲ್ದಾರ್ ಗಿರಿಜಾ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿವಾರಣಾಧಿಕಾರಿ ಡಾ. ಪಿ. ಚಂದ್ರಶೇಖರ್, ಜಿಲ್ಲಾ ಕಾರ್ಯಕ್ರಮ ಅಭಿವೃದ್ಧಿ ಅಧಿಕಾರಿ ಡಾ. ರಾಜೇಶ್ ಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ. ಶ್ರೀನಿವಾಸ್, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಜನಾರ್ಧನ್, ಇತರರು ಇದ್ದರು.

# ಆರಕ್ಷಕರ ಮಕ್ಕಳ ಬೇಸಿಗೆ ಶಿಬಿರಕ್ಕೆ ಚಾಲನೆ




ಚಾಮರಾಜನಗರ, ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಪೊಲೀಸ್ ಕಲ್ಯಾಣ ಕಾರ್ಯಕ್ರಮದಡಿ ಆಯೋಜಿಸಲಾದ "ಆರಕ್ಷಕರ ಮಕ್ಕಳ ಬೇಸಿಗೆ ಶಿಬಿರ 2026"ಕ್ಕೆ ಡಿಎಆರ್ ಕೇಂದ್ರಸ್ಥಾನ ಆವರಣದ ಪೊಲೀಸ್ ಭವನದಲ್ಲಿ ಚಾಲನೆ ನೀಡಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತು ರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಬೇಸಿಗೆ ಶಿಬಿರದಲ್ಲಿ ವಿವಿಧ ಸಾಂಸ್ಕೃತಿಕ, ಕ್ರೀಡಾ ಹಾಗೂ ವ್ಯಕ್ತಿತ್ವ ವಿಕಸನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳು ಹೆಚ್ಚು ಪ್ರೋತ್ಸಾಹದಾಯಕ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅವರ ಜ್ಞಾನ ಮತ್ತು ಸಾಮರ್ಥ್ಯ ವೃದ್ಧಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮಕ್ಕಳು ಪ್ರತಿಯೊಂದು ಕ್ಷೇತ್ರದಲ್ಲೂ ಆಸಕ್ತಿ ವಹಿಸಿ ತಮ್ಮ ಪ್ರತಿಭೆಯನ್ನು ಬೆಳಗಿಸಬೇಕು. ಶಿಬಿರಗಳು ಮಕ್ಕಳ ಆತ್ಮವಿಶ್ವಾಸ ಮತ್ತು ಕೌಶಲ್ಯ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಅವರು ಹೇಳಿದರು. ಹೆಚ್ಚುವರಿ ಪೊಲೀಸ್ ವರಿಷ್ಟಾಧಿಕಾರಿ ಎಂ.ಎನ್. ಶಶಿಧರ್, ಡಿವೈಎಸ್‌ಪಿ ಸೋಮಣ್ಣ, ಕಲಾವಿದರಾದ ಕಿರಣ್ ಗಿರ್ಗಿ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶಾಸಕ ಹಾಗೂ ಸಮೃದ್ಧಿ ಗ್ರೂಪ್ ಆಫ್ ಕಂಪನಿಗಳ ಅಧ್ಯಕ್ಷ ಸಮೃದ್ಧಿ ಮಂಜುನಾಥ್ ಭಾಗಿ

# ಹೇಬಡ್ಡಿ ಎಐ ಅವಿಷ್ಕಾರ ಅನಾವರಣ

ಮೈಸೂರು: ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲಾಗಿರುವ 'ಹೇಬಡ್ಡಿ ಎಐ' ಅಲ್ಫಾ ರಿಲೀಸ್ ಸಾಫ್ಟ್ ಲಾಂಚ್ ಕಾರ್ಯಕ್ರಮವು ಶುಕ್ರವಾರ ಸಂಜೆ ನಗರದ ಹೋಟೆಲ್ ಲೆ ರೂಚಿ ದಿ ಪ್ರಿನ್ಸ್‌ನಲ್ಲಿ ಭವ್ಯವಾಗಿ ನಡೆಯಿತು.

ಯುಗಾಸಿಸ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್ (ಭಾರತ) ಹಾಗೂ ಹೇಬಡ್ಡಿ ಎಐ ಇಂಕ್ (ಅಮೆರಿಕಾ) ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾದ ಈ ನವೀನ ಎಐ ಆಧಾರಿತ ವೇದಿಕೆ, ಜನರ ದೈನಂದಿನ ಅಗತ್ಯಗಳಿಗೆ ತ್ವರಿತ ಮತ್ತು ಸುಲಭ ಡಿಜಿಟಲ್ ಪರಿಹಾರಗಳನ್ನು ಒದಗಿಸುವ ಉದ್ದೇಶದಿಂದ ಪರಿಚಯಿಸಲಾಯಿತು. "ಒಂದು ವೇದಿಕೆ ? ಅನೇಕ ಸೇವೆಗಳು ? ಸಂಪರ್ಕಿತ ಅನುಭವ" ಎಂಬ ಪರಿಕಲ್ಪನೆಯೊಂದಿಗೆ ರೂಪುಗೊಂಡಿರುವ ಹೇಬಡ್ಡಿ ಎಐ, ತಂತ್ರಜ್ಞಾನವನ್ನು ಸಾಮಾನ್ಯ ಜನರ ಜೀವನಶೈಲಿಗೆ ಇನ್ನಷ್ಟು ಹತ್ತಿರ ತರುವ ಪ್ರಯತ್ನವೆಂದು ಆಯೋಜಕರು ತಿಳಿಸಿದರು.



ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್‌ನ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಧನಂಜಯ ಸುಧನ್ವ ಭಾಗವಹಿಸಿ ಮಾತನಾಡಿ, ಕೃತಕ ಬುದ್ಧಿಮತ್ತೆ ಮುಂದಿನ ದಿನಗಳಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹತ್ವದ ಬದಲಾವಣೆ ತರಲಿದ್ದು, ಇಂತಹ ಸ್ವದೇಶಿ ತಂತ್ರಜ್ಞಾನ ವೇದಿಕೆಗಳು ಯುವ ಉದ್ಯಮಿಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲಿವೆ ಎಂದು ಅಭಿಪ್ರಾಯಪಟ್ಟರು.

ವಿಶೇಷ ಆಹ್ವಾನಿತರಾಗಿ ಮುಳಬಾಗಲ್ ಕ್ಷೇತ್ರದ ಶಾಸಕ ಹಾಗೂ ಸಮೃದ್ಧಿ ಗ್ರೂಪ್ ಆಫ್ ಕಂಪನಿಗಳ ಅಧ್ಯಕ್ಷ ಸಮೃದ್ಧಿ ಮಂಜುನಾಥ್ ಮತ್ತು ಲೆ ರೂಚಿ ಗ್ರೂಪ್ ಆಫ್ ಹೋಟೆಲ್ಸ್‌ನ ಅಧ್ಯಕ್ಷ ಹಾಗೂ ವ್ಯವಸ್ಥಾ ಪಕ ನಿರ್ದೇಶಕ ಬಿ.ಮಂಜುನಾಥ್ ಸಂಸ್ಥೆಯ ಹೊಸ ಪ್ರಯತ್ನಕ್ಕೆ ಶುಭ ಹಾರೈಸಿದರು. ಹೇಬಡ್ಡಿ ಎಐ ಅಪ್ಲಿಕೇಶನ್‌ನ ವಿವಿಧ ವೈಶಿಷ್ಟ್ಯಗಳನ್ನು ಪರಿಚಯಿಸಲಾಯಿತು. ಧ್ವನಿ ಆಧಾರಿತ ಸಹಾಯ, ಬಳಕೆದಾರ ಸ್ನೇಹಿ ಸೇವೆಗಳು, ತ್ವರಿತ ಮಾಹಿತಿ ನಿರ್ವಹಣೆ ಸೇರಿದಂತೆ ಹಲವು ಆಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ಈ ವೇದಿಕೆ, ಜನರ ದಿನನಿತ್ಯದ ಕೆಲಸಗಳನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ರೂಪಿಸಲಾಗಿದೆ ಎಂದು ಸಂಸ್ಥೆ ತಿಳಿಸಿತು.

# ಫೈನಲ್ ಪ್ರವೇಶಿಸಿದ ಹಾಸನ್ ಚಾಲೆಂಜರ್ಸ್

**ಹಾಸನ:** ಹಾಸನ ಜಿಲ್ಲಾ ಪತ್ರಕರ್ತರ ಸಂಘವು ಆಯೋಜಿಸಿರುವ ಪತ್ರಕರ್ತರು-ಅಧಿಕಾರಿಗಳ ಕ್ರಿಕೆಟ್ ಸಮ್ಮಿಲನ ಪಂದ್ಯಾವಳಿಯಲ್ಲಿ ಪತ್ರಕರ್ತರ ಹಾಸನ್ ಚಾಲೆಂಜರ್ಸ್ ತಂಡ ಸೋಲರಿಯದೆ ಅಜೇಯವಾಗಿ ಫೈನಲ್ ಪ್ರವೇಶಿಸಿದೆ.



ಒಟ್ಟು ಐದು ಪಂದ್ಯಗಳನ್ನಾಡಿದ ಹಾಸನ್ ಚಾಲೆಂಜರ್ಸ್, ಆರಂಭಿಕ ಪಂದ್ಯದಲ್ಲಿ ಕೃಷಿ ಇಲಾಖೆ ವಿರುದ್ಧ ಭರ್ಜರಿ ಜಯ ಸಾಧಿಸಿತು. ಮೊದಲು ಬ್ಯಾಟ್ ಮಾಡಿದ ಹಾಸನ್ ಚಾಲೆಂಜರ್ಸ್ ಜನಮಿತ್ರ ಅಭಿಜಿತ್ ಅವರ ಭರ್ಜರಿ 12 ಸಿಕ್ಸರ್ ನೆರವಿನಿಂದ 5 ಓವರ್‌ಗಳಲ್ಲಿ 132 ರನ್ ಕಲೆ ಹಾಕಿತು. ಅಭಿ ವೈಯಕ್ತಿಕ 73 ರನ್ ಗಳಿಸಿದರೆ, ಇವರಿಗೆ ಉತ್ತಮ ಸಾಥ್ ನೀಡಿದ ಪವರ್ ಟಿವಿಯ ಸಚಿನ್ ಶೆಟ್ಟಿ 1 ಸಿಕ್ಸರ್, 4 ಫೋರ್ ನೆರವಿನಿಂದ 22 ರನ್‌ಗಳಿಸಿದರು. ಹೊಳೆನರಸೀಪುರದ ಅಭಿ ಸಹ 3 ಭರ್ಜರಿ ಸಿಕ್ಸರ್ ಸಹಿತ 23 ರನ್ ಸಿಡಿಸಿದರು.

ಈ ಬೃಹತ್ ಮೊತ್ತ ಬೆನ್ನಟ್ಟಿದ ಕೃಷಿ ಇಲಾಖೆ 34 ರನ್‌ಗಳಿಸಲಷ್ಟೇ ಶಕ್ತವಾಯಿತು. 98 ರನ್‌ಗಳಿಂದ ಹಾಸನ್ ಚಾಲೆಂಜರ್ಸ್ ಜಯಭೇರಿ ಬಾರಿಸಿತು.

ಹಾಸನ ಜಿಲ್ಲಾ ಪಂಚಾಯತ್ ವಿರುದ್ಧದ 2ನೇ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಜಿಪಂ ತಂಡ ಕೇವಲ 31 ರನ್ ಕಲೆ ಹಾಕಿತು. ಈ ಮೊತ್ತ ಬೆನ್ನತ್ತಿದ ಹಾಸನ್ ಚಾಲೆಂಜರ್ಸ್ ತಂಡ, ಕೇವಲ 1 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿತು. ಸಚಿನ್ ಮೂರು ಫೋರ್, 2 ಸಿಕ್ಸರ್ ಜೊತೆಗೆ 25 ರನ್‌ಗಳಿಸಿದರು.

ಅರಣ್ಯ ಇಲಾಖೆ ವಿರುದ್ಧದ ಮೂರನೇ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಹಾಸನ್ ಚಾಲೆಂಜರ್ಸ್ 5 ಓವರ್‌ಗಳಲ್ಲಿ 49 ರನ್‌ಗಳ ಟಾರ್ಗೆಟ್ ನೀಡಿತು. ಈ ಮೊತ್ತ ಬೆನ್ನತ್ತಿದ ಅರಣ್ಯ ಇಲಾಖೆ, 43 ರನ್‌ಗಳಿಸಲಷ್ಟೇ ಶಕ್ತವಾಯಿತು. 6 ರನ್‌ಗಳಿಂದ ರಾಯಲ್ ಚಾಲೆಂಜರ್ಸ್ ತಂಡ ವಿಜಯ ಪತಾಕೆ ಹಾರಿಸಿತು.

ಸತತ ನಾಲ್ಕನೇ ಪಂದ್ಯದಲ್ಲಿ ತೋಟಗಾರಿಕೆ ಇಲಾಖೆ ತಂಡವನ್ನು ಎದುರಿಸಿದ ಹಾಸನ್ ಚಾಲೆಂಜರ್ಸ್ ರಣರೋಚಕ ಹಣಾಹಣಿಯಲ್ಲಿ ಗೆದ್ದು ಬೀಗಿತು. 44 ರನ್‌ಗಳ ಗುರಿ ಬೆನ್ನಟ್ಟಿದ ಹಾಸನ್ ಚಾಲೆಂಜರ್ಸ್ ತಂಡ ಕಡೆಯ ಓವರ್‌ನಲ್ಲಿ 1 ಬಾಲ್‌ನಲ್ಲಿ 6 ರನ್‌ಗಳಿಸಬೇಕಿತ್ತು. ಆಲೂರಿನ ಪ್ರದೀಪ್ ಅಮೋಘ ಸಿಕ್ಸರ್ ಸಿಡಿಸುವ ಮೂಲಕತಂಡಕ್ಕೆ ರೋಚಕ ಜಯ ತಂದುಕೊಟ್ಟರು.

ಅಂತಿಮವಾಗಿ ಜಿಪಂ ವಿರುದ್ಧ ಸೆಮಿ ಫೈನಲ್ ಪಂದ್ಯದಲ್ಲೂ ಹಾಸನ್ ಚಾಲೆಂಜರ್ಸ್ ಸಂಘಟಿತ ಆಟದಿಂದಾಗಿ ಗೆದ್ದು ಪ್ರಶಸ್ತಿ ಸುತ್ತು ಪ್ರವೇಶಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಜಿಪಂ,6 ಓವರ್‌ಗಳಲ್ಲಿ 68 ರನ್ ಕಲೆ ಹಾಕಿತು.

ಈ ಮೊತ್ತ ಬೆನ್ನಟ್ಟಿದ ಹಾಸನ್ ಚಾಲೆಂಜರ್ಸ್‌ಗೆ ಎಂದಿನಂತೆ ಅಭಿಜಿತ್ ಮತ್ತು ಸಚಿನ್ ಆಸರೆಯಾದರು. ಅಭಿಜಿತ್ 4 ಸಿಕ್ಸರ್ ಸಹಿತ 33 ರನ್‌ಗಳಿಸಿ ಅಜೇಯರಾಗಿ ಉಳಿದರೆ, ಸಚಿನ್ 19 ರನ್‌ಗಳಿಸಿ ಔಟಾದರು. ಅಂತಿಮವಾಗಿ ಹಾಸನ್ ಚಾಲೆಂಜರ್ಸ್ ಮೊದಲ ತಂಡವಾಗಿ ಫೈನಲ್ ಪ್ರವೇಶಿಸಿತು. ವಿಜೇತ ತಂಡವನ್ನು ಸಂಸದ ಶ್ರೇಯಸ್ ಪಟೇಲ್ ಹಾಗೂ ಇತರರು ಹಾರ್ದಿಕವಾಗಿ ಅಭಿನಂದಿಸಿದರು. ಭಾನುವಾರ ಫೈನಲ್ ಪಂದ್ಯ ನಡೆಯಲಿದೆ

# ಇಂದು ರಾಜ್ಯಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ

**ಮೈಸೂರು:** ಸುವರ್ಣಬೆಳಕು ಫೌಂಡೇಶನ್ ವತಿಯಿಂದ ಪ್ರಥಮ ಬಾರಿಗೆ ಮೇ 10 ರಂದು ಮೈಸೂರಿನ ಶ್ರೀಕಾಂತ ವಿದ್ಯಾಸಂಸ್ಥೆಯಲ್ಲಿ ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ, ಯೋಗ ರತ್ನ ಹಾಗೂ ಸೇವಾ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಫೌಂಡೇಶನ್ ಅಧ್ಯಕ್ಷ ಎಸ್.ಮಹೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ಕ್ಕೆ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದ್ದು, ಸಂಜೆ 5ರ ವೇಳೆ ಸಮಾರೋಪ ಸಮಾರಂಭ ನಡೆಯಲಿದೆ. ಈ ಸ್ಪರ್ಧೆಯ ಅಂತಿಮ ಸುತ್ತಾದ ಚಾಂಪಿಯನ್ ಆಫ್ ಚಾಂಪಿಯನ್‌ನಲ್ಲಿ ವಿಜೇತರಾದ ಪುರುಷ ಹಾಗೂ ಮಹಿಳೆಗೆ ಫೌಂಡೇಶನ್‌ನ ಚಿಹ್ನೆಯನ್ನು ಹೊಂದಿರುವ ಅಪ್ಪಟ ಬೆಳ್ಳಿ ಟ್ರೋಫಿಯನ್ನು ವಿತರಿಸಿ, ಗೌರವಿಸಲಾಗುತ್ತದೆ ಎಂದರು.

ಮೇ10 ರಂದು ಬೆಳಗ್ಗೆ 11 ಗಂಟೆಗೆ ನಡೆಯುವ ಉದ್ಘಾಟನಾ ಕಾರ್ಯಕ್ರಮವನ್ನು ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಉದ್ಘಾಟಿಸಲಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸ್ಪರ್ಧೆಗೆ ಚಾಲನೆ ನೀಡಲಿದ್ದಾರೆ. ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ವಿವಿ ಕ್ರಿಯೇಷನ್‌ನ ಮುಖ್ಯಸ್ಥ ವಿಮಲ ವೀರೇಶ್ ಚಾಲನೆ ನೀಡಲಿದ್ದಾರೆ. ಮೇಲುಕೋಟೆಯ ವಂಗೀಪುರ ಮಠದ ಇಳೈಆಳ್ವಾರ್ ಸ್ವಾಮೀಜಿ ಸಾನಿಧ್ಯವನ್ನು ವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ವಕೀಲ ಹಾಗೂ ಸಮಾಜ ಸೇವಕ ಮೋಹನ್ ವಹಿಸಲಿದ್ದಾರೆ. ಸಂಜೆ 5 ಗಂಟೆಗೆ ನಡೆಯುವ ಸಮಾರೋಪ ಸಮಾರಂಭವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದು, ಸ್ಪರ್ಧೆಯ ವಿವಿಧ ವಿಭಾಗಗಳಲ್ಲಿ ಪ್ರಥಮ, ದ್ವಿತಿಯ, ತೃತೀಯ ಸ್ಥಾನಗಳಲ್ಲಿ ವಿಜೇತರಾದವರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಟ್ರೋಫಿ ವಿತರಿಸಲಿದ್ದಾರೆ. ಚಾಂಪಿಯನ್ ಆಫ್ ಚಾಂಪಿಯನ್ ಸುತ್ತಿನಲ್ಲಿ ವಿಜೇತರಾದವರಿಗೆ ಅಪ್ಪಟ ಬೆಳ್ಳಿ ಟ್ರೋಫಿ ಮೈಸೂರಿನ ವಿಜಯನಗರ ಯೋಗನರಸಿಂಹ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ವಿತರಿಸಲಿದ್ದಾರೆ. ನಗರಪಾಲಿಕೆಯ ಮಾಜಿ ಸದಸ್ಯ ಲೋಕೇಶ್ ಪಿಯಾ ಮತ್ತಿತರರು ಉಪಸ್ಥಿತರಿರಲಿದ್ದಾರೆ ಎಂದರು.

ಮೈಸೂರು ಯೋಗ ದಸರಾದ ಮಾಜಿ ಅಧ್ಯಕ್ಷರಾದ ದೇವರಾಜು ಮಾತನಾಡಿ, ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆಯು ಒಟ್ಟು 9 ವಿಭಾಗಗಳಲ್ಲಿ ನಡೆಯಲಿದೆ. 10 ವರ್ಷದೊಳಗಿನ, 11 ರಿಂದ 14 ವರ್ಷ, 15 ರಿಂದ 18 ವರ್ಷ, 19 ರಿಂದ 25 ವರ್ಷ, 26 ರಿಂದ 35 ವರ್ಷ, 36 ರಿಂದ 45 ವರ್ಷ,

45 ವರ್ಷ ಮೇಲ್ಪಟ್ಟ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆ ನಡೆಯಲಿದೆ ಎಂದರು.

# ಯಶಸ್ವಿನಿ ಯೋಜನೆಯ ಸದುಪಯೋಗಕ್ಕೆ ಕರೆ

**ಕೆ.ಆರ್.ನಗರ:** ಸಹಕಾರಿ ಸಂಘ ಸಂಸ್ಥೆಗಳ ಸದಸ್ಯರು ಯಶಸ್ವಿನಿ ಯೋಜನೆಯ ಸದುಪಯೋಗ ಮಾಡಿಕೊಳ್ಳಬೇಕೆಂದು ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್ ಹೇಳಿದರು.



ಸಾಲಿಗ್ರಾಮ ಪಟ್ಟಣದ ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯಲ್ಲಿ ಸಂಘದ ಸದಸ್ಯರುಗಳಿಗೆ 2026-27ನೇ ಸಾಲಿನ ಯಶಸ್ವಿನಿ ಯೋಜನೆಯ ಗುರುತಿನ ಚೀಟಿಗಳನ್ನು ವಿತರಿಸಿ ಮಾತನಾಡಿ, ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಪಡೆದಿರುವಂತಹ ಸರ್ವರೂ ಕೂಡ ತಮ್ಮ ತಮ್ಮ ಸಂಘಗಳಲ್ಲಿ ಯಶಸ್ವಿನಿ ಯೋಜನೆಯ ಸದಸ್ಯತ್ವ ಪಡೆಯುವ ಮೂಲಕ ತಮ್ಮೊಂದಿಗೆ ತಮ್ಮ ಕುಟುಂಬದವರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕೆಂದು ಮನವಿ ಮಾಡಿದರು.

ನಮ್ಮ ಸೊಸೈಟಿಯಲ್ಲಿ ಆರ್‌ಡಿ ಮತ್ತು ಎಫ್‌ಡಿ ಗಳಿಗೆ ಆಕರ್ಷಕ ಬಡ್ಡಿ ದರವನ್ನು ನೀಡುತ್ತಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು, ಸಹಕಾರ ಸಂಘ ಸಂಸ್ಥೆಗಳಿಂದ ಸದಸ್ಯರು ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿಸಿ ಸಂಘ ಸಂಸ್ಥೆಗಳ ಬೆಳವಣಿಗೆಯೊಂದಿಗೆ ತಮ್ಮ ಕುಟುಂಬಗಳು ಕೂಡ ಆರ್ಥಿಕ ಅಭಿವೃದ್ಧಿ ಹೊಂದಬೇಕು ಎಂದರು.

ಈ ಸಂದರ್ಭದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್, ಸೊಸೈಟಿಯ ನಿರ್ದೇಶಕ ಮಂಜುನಾಥ್, ಸಿಇಓ ಸಿಂಧೂ ಮಂಜುನಾಥ್, ಸೊಸೈಟಿಯ ಸದಸ್ಯರುಗಳಾದ ಶೀತಲ್, ಚೆಲುವಯ್ಯ, ಆಶಾ, ಲಕ್ಷ್ಮಮ್ಮ, ಚಂದ್ರಶೇಖರ, ರಘು, ಸ್ವಾಮಿ, ಶಶಿಕಲಾ, ಶಶಿರೇಖಾ ಇದ್ದರು.

ಮೇ22 ರಂದು ಶ್ರೀ ಬಸವೇಶ್ವರ ಜಯಂತೋತ್ಸವ

# ಸುತ್ತೂರು ಶ್ರೀಗಳಿಂದ ಭಿತ್ತಪತ್ರ ಬಿಡುಗಡೆ

**ಚಾಮರಾಜನಗರ:** ಚಾಮ ರಾಜನಗರದಲ್ಲಿ ಶ್ರೀ ಸಿದ್ಧಮಲ್ಲೇಶ್ವರ ವಿರಕ್ತ ಮಠ ಹಾಗೂ ಬಸವ ಬಳಗಗಳ ಒಕ್ಕೂಟದ ವತಿಯಿಂದ ಮೇ 22 ರಂದು ನಡೆಯಲಿರುವ ಕರ್ನಾಟಕ ಸಾಂಸ್ಕೃತಿಕ ನಾಯಕ, ವಿಶ್ವಗುರು, ಜಗಜ್ಯೋತಿ ಬಸವೇಶ್ವರರ ಜಯಂತೋತ್ಸವ-2026 ಕಾರ್ಯಕ್ರಮದ ಭಿತ್ತ ಪತ್ರವನ್ನು ನಗರದಲ್ಲಿ ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮೀಜಿ ಬಿಡುಗಡೆಗೊಳಿಸಿದರು.



ನಗರದ ಡಾ. ರಾಜ್‌ಕುಮಾರ್ ಕಲಾಮಂದಿರದ ಮುಂಭಾಗದಲ್ಲಿ ಬಸವ ಬಳಗದ ಒಕ್ಕೂಟದ ಅಧ್ಯಕ್ಷ ಪಿ.ಮರಿಸ್ವಾಮಿ ಹಾಗೂ ಗಣ್ಯರ ಸಮ್ಮುಖದಲ್ಲಿ ಶ್ರೀಗಳು ಪೋಸ್ಟರ್ ಅನ್ನು ಬಿಡುಗಡೆ ಮಾಡಿ ಶುಭ ಕೋರಿದರು. ಜಿಲ್ಲೆಯಲ್ಲಿ ಪ್ರಥಮವಾಗಿ ಎಲ್ಲಾ ವೀರಶೈವ ಲಿಂಗಾಯತ ಸಂಘಟನೆಗಳ ಸಹಭಾಗಿತ್ವದಲ್ಲಿ ಬಸವ ಬಳಗಗಳ ಒಕ್ಕೂಟವನ್ನು ರಚನೆ ಮಾಡಿಕೊಂಡು ಜಿಲ್ಲಾ ಕೇಂದ್ರದಲ್ಲಿ ಮೇ 22 ರಂದು ಅದ್ದೂರಿಯಾಗಿ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮ ಯಶಸ್ವಿಯಾಗಲಿ. ಬಸವಾಧಿ ಶರಣರ ಪ್ರೇರಣೆ ಎಲ್ಲರಿಗೂ ದೊರೆಯಲಿದೆ ಎಂದು ಶುಭ ಕೋರಿದರು.

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಹಾಗೂ ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಜಿಲ್ಲಾ ಕೇಂದ್ರದಲ್ಲಿ ಮೇ 22ರ ಶುಕ್ರವಾರ ರಂದು ಬಸವ ಜಯಂತಿ ಮೆರವಣಿಗೆ ಅದ್ದೂರಿಯಾಗಿ ನಡೆಯಲಿದೆ. ಸಮಾನತೆಯ ಹರಿಕಾರ ಬಸವೇಶ್ವರ ಜಯಂತಿ ಸಮಸ್ತ ಜನರ ಹಬ್ಬವಾಗಿದೆ. ಪ್ರತಿ ಗ್ರಾಮಗಳಿಗೂ ಭೇಟಿ ನೀಡಿ, ಕರ ಪತ್ರ ನೀಡುವ ಜೊತೆಗೆ ಕಾರ್ಯಕ್ರಮಕ್ಕೆ ಅಹ್ವಾನ ನೀಡಲಿದ್ದು. ಸುತ್ತೂರು ಶ್ರೀಗಳು ಹಾಗೂ ಅನೇಕ ಗಣ್ಯರು ಭವ್ಯ ಶ್ರೀ ಬಸವೇಶ್ವರರ ಮೆರವಣಿಗೆಗೆ ಅಂದು ಬೆಳಗ್ಗೆ 10 ಗಂಟೆಗೆ ಚಾಲನೆ ನೀಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಸಚಿವರು, ಸಂಸದರು, ಮಾಜಿಸಚಿವರು, ಶಾಸಕರು, ಹರಗುರು ಚರಮೂರ್ತಿಗಳು, ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ನ ರಾಜ್ಯಾಧ್ಯಕ್ಷ ಡಾ. ಸೋಮಶೇಖರ್, ಮಾಜಿ ಸಚಿವೆ ಡಾ. ಗೀತಾ ಮಹದೇವಪ್ರಸಾದ್, ಮಾಜಿ ಶಾಸಕ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಶರಣ ಸಾಹಿತ್ಯಪರಿಷತ್ ಅಧ್ಯಕ್ಷ ಬಿ.ಕೆ. ರವಿಕುಮಾರ್, ಬಸವ ಬಳಗಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ದೊಡ್ಡರಾಯಪೇಟೆ ಗಿರೀಶ್, ಮಹಾಸಭಾದ ಅಧ್ಯಕ್ಷ ಮೂಡ್ಲುಪುರ ನಂದೀಶ್, ಮಹಾಸಭಾದ ತಾಲೂಕು ಅಧ್ಯಕ್ಷ ಬಾಲಚಂದ್ರಮೂರ್ತಿ, ಎಪಿಎಂಸಿ ನಿರ್ದೇಶಕ ಅಲೂರು ಪ್ರದೀಪ್, ಬಾಬು, ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ವಸಂತಮ್ಮ, ರತ್ನಮ್ಮ, ವೀರಭದ್ರಸ್ವಾಮಿ, ಪ್ರಭುಸ್ವಾಮಿ ಮೊದಲಾದವರು ಇದ್ದರು.

# ಅಮೃತದಿಂದ ಬರೆದ ಪದ 'ಅಮ್ಮ'



| ಸ್ನೇಹಾ ಆನಂದ್

"ಅಮ್ಮಾ" ಎಂದರೆ ಬರಿ ಪದವಲ್ಲ, ಹಾಸಿ ಹೊದ್ದರೂ ಮುಗಿಯದ ಪ್ರೀತಿ ವಾತ್ಸಲ್ಯದ ಭಾವನೆಯೇ ಅದರಲ್ಲಿದೆ, ದೇಹಕ್ಕೆ ಒಂದಿಷ್ಟು ಪೆಟ್ಟು ಬಿದ್ದಾಗ "ಅಮ್ಮಾ" ಎಂದರೆ ಸಾಕು ನೋವು ಹಾರಿ ಹೋಗುವುದು, ಆ ಪದಕ್ಕೆ ಅಷ್ಟು ಶಕ್ತಿ ಇದ್ದಾಗ ತಾಯಿಯೇ ಜೊತೆಗಿದ್ದರೆ ಅದು ಎಷ್ಟು ಶಕ್ತಿ ಇದ್ದಂತೆ ಅಲ್ವಾ!



ಒಂದು ಹುಡುಗಿ ತಾಯಿಯಾದಾಗ ಆಕೆಗೆ ತನ್ನ ತಾಯಿಯ ಅವಶ್ಯಕತೆ ಜಾಸ್ತಿ! ಎಷ್ಟೋ ಜನರಿಗೆ ತಾಯಿಯೇ ಇರುವುದಿಲ್ಲ, ಆ ಸಮಯದಲ್ಲಿ ದೊಡ್ಡಮ್ಮ, ಚಿಕ್ಕಮ್ಮ ಜವಾಬ್ದಾರಿ ವಹಿಸಿಕೊಂಡು ಪ್ರೀತಿಯಿಂದ ಬಾಣಂತನ ಮಾಡುತ್ತಾರೆ!

ಬಾಣಂತಿಗೆ ಆ ಸಮಯದಲ್ಲಿ ಸರಿಯಾದ ಆರೈಕೆ ಮುಖ್ಯ, ಪಥ್ಯದ ಊಟ, ತಾಯಿಯ ಹಾಲಿನ ಪ್ರಮಾಣ ಜಾಸ್ತಿ ಮಾಡಲು ಸೊಪ್ಪುಗಳ ಬಳಕೆ,

ಮಗುವಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಇರಲು ಮೆತ್ತನೆಯ ಆಹಾರ, ಮಗುವಿನ ರಕ್ಷಣೆಗಾಗಿ ತಾಯಿ ಕೂಡ ಬೆಚ್ಚನೆಯ ವಾತಾವರಣದಲ್ಲಿ ಇರಬೇಕಾಗುತ್ತದೆ,

ಬಾಣಂತಿಗೆ ಬೆನ್ನು ಗಟ್ಟಿಯಾಗಲು ಅಗ್ಗಿಷ್ಟಿಕೆ ಸರಿಯಾಗಿ ಕಾಯಿಸಿಕೊಳ್ಳುವುದು, ಕಟ್ಟುವುದು, ಆ ಸಮಯದಲ್ಲಿ ಅಂಟಿನ ಉಂಡೆಯನ್ನು ತಿನ್ನುವುದು, ಬಾಣಂತಿ ಖಾರ ಎಂದು ಬೆಲ್ಲ ಹಾಗು ಶುಂಠಿಯನ್ನು ತುಪ್ಪದಲ್ಲಿ ಕಲಸಿ ಕೊಡುವ ಮಗಳಿಗೆ ತಾನು ಮಾತ್ರ ಊಟ ತಿಂಡಿಯನ್ನು ಮರೆತು ಬಿಡುತ್ತಾಳೆ ಆ ತಾಯಿ !!

ಒಂದು ಹೆಣ್ಣು ತಾಯಿಯಾದರೆ ಅವಳು ಮರುಜನ್ಮ ಪಡೆದಂತೆ , ಮಗುವಿಗೆ ಜನನ ಕೊಡುವ ಸಮಯದಲ್ಲಿ ಸಾವಿರ ಚೇಳುಗಳು ಒಂದೇ ಸಲ ಕುಟುಕಿದ ಅನುಭವ, ಹೀಗಾಗಿ ಅವಳು ಪುನರ್ಜನ್ಮ ಪಡೆದು ಬಂದಂತೆ ಎಂದು ಹೇಳುತ್ತಾರೆ!

ಹೀಗಾಗಿ ಆ ಮೂರು ತಿಂಗಳು ಪತಿಯಿಂದ ದೂರವಿರಬೇಕು ಎನ್ನುವುದು ಮುಖ್ಯ, ಏಕೆಂದರೆ ಮಗುವಿಗೆ ಜನ್ಮ ಕೊಟ್ಟ ತಾಯಿಯ ಗರ್ಭಕೋಶ ತುಂಬಾ ನಿಶ್ಶಕ್ತಿಗೊಂಡಿರುತ್ತದೆ, ನರನಾಡಿಗಳು ಮಗುವಿಗೆ ಜನ್ಮ ಕೊಟ್ಟ ಸಮಯದಲ್ಲಿ ಜಾಸ್ತಿ ನುಲುಗಿರುತ್ತವೆ,ಈ ಕಾರಣದಿಂದ ಮೊದಲು ತಾಯಿಯ ದೇಹಕ್ಕೆ ಸರಿಯಾದ ಆರೈಕೆ ಮುಖ್ಯ!



ಇನ್ನು ಮಗುವಿನ ಬೆಳವಣಿಗೆಯಲ್ಲಿ ವೈದ್ಯರ ಸಲಹೆ,ಸೂಚನೆ ಒಂದು ಕಡೆಗೆ ಪಾಲಿಸಬೇಕು ನಿಜ , ಆದರೆ ವೈದ್ಯಕೀಯ ಚಿಕಿತ್ಸೆಗಿಂತ ಮೀರಿದ್ದು ಹಿರಿಯರ ಸಲಹೆ, ಸೂಚನೆಗಳನ್ನು ಆ ತಾಯಿ ತೆಗೆದುಕೊಂಡು ಮಕ್ಕಳ ಲಾಲನೆ ಪಾಲನೆಯನ್ನು ಮಾಡಬೇಕು!

ಸ್ನೇಹ ಲೋಕ

ಆ ಸಮಯದಲ್ಲಿ ಮಗುವಿಗೆ ಶೀತವಾಗದಂತೆ ಇಡಲು ಬೆಚ್ಚಗಿನ ಹಾಗು ಕಣ್ಣಿಗೆ ಜಾಸ್ತಿ ಬೆಳಕು ಬೀಳದಂತೆ ನೋಡಿಕೊಳ್ಳಬೇಕು , ಆದರೂ ಎಳೆಯ ಬಿಸಿಲಿನಲ್ಲಿ ಕುಳಿತು ಕೊಳ್ಳುವುದು ಅವಶ್ಯಕ!

ನಮ್ಮ ಹಿರಿಯರ ಮೆತ್ತನೆಯ ಹತ್ತಿ ಸೀರೆಯಲ್ಲಿ ಮಗುವಿನ ಜೋಳಿಗೆ ಕಟ್ಟಿ ಅದರಲ್ಲಿ ಮಗುವನ್ನು ಮಲಗಿಸುತ್ತಾರೆ, ಅದರಿಂದ ಮಗುವಿಗೆ ತಾಯಿಯ ಗರ್ಭದಲ್ಲಿ ಸುರಕ್ಷಿತವಾದಂತೆ ಇದ್ದು ಬೆಚ್ಚಿ ಬೀಳದಂತೆ ನೆಮ್ಮದಿಯ ನಿದ್ದೆ ಮಾಡುತ್ತದೆ! ಆ ಸಮದಲ್ಲೇ ತಾಯಿ ನಿಶ್ಚಿಂತೆಯಿಂದ ಮಲಗುವುದು ಕೂಡ!

ಆಗ ಹೊರಗಿನ ವಾತಾವರಣದಲ್ಲಿ ಎಷ್ಟೇ ಗಲಾಟೆಯಿರಲಿ ಮಗು ಎಚ್ಚರಗೊಳ್ಳುವುದಿಲ್ಲ, ಹೆಚ್ಚು ಕಡಿಮೆ ಒಂದೂವರೆ ವರುಷ ಜೋಳಿಗೆಯಲ್ಲಿ ಮಲಗಿಸುತ್ತಾರೆ, ತಾಯಿ ತನ್ನ ಎದೆ ಹಾಲೂಡಿಸುವ ತನಕ ಎನ್ನಬಹುದು!

ಇನ್ನು ಮಗು ಹುಟ್ಟಿ ಹದಿನೈದು ದಿನಗಳ ನಂತರ"ಗುಟ್ಟಿ" ಎಂದು ಹಾಕುತ್ತಾರೆ! ಬಾದಾಮಿ ಶಕ್ತಿ ಬರುವುದಕ್ಕೆ, ಜಾಕಾಯಿ ನಿದ್ರೆ ಸರಿಯಾಗಿ ಆಗುವುದಕ್ಕೆ,ಒಡ್ಡು ಮುರುಕು ಎನ್ನುವ ಒಂದು ಬೇರು ಅದು ಮಕ್ಕಳು ಮೈಕೈ ನೋವು ಕಡಿಮೆಯಾಗಿ ಪದೇಪದೇ ದೇಹವನ್ನು ಒಡ್ಡು ಮುರಿಯದಂತೆ ನೋಡಿಕೊಳ್ಳಲು, ಅರಿಷಿಣ ರೋಗ ನಿರೋಧಕ ಶಕ್ತಿಯಂತೆ, ಹೀಗೆ ಇವುಗಳನ್ನು ತಾಯಿಯ ಹಾಲಿನಲ್ಲಿಯೇ ತೇಯ್ದು ಮಗುವಿನ ಹಾಕುತ್ತಾರೆ, ಈ ಸಮಯದಲ್ಲಿ ಹಾಕಿದ ಈ ಗುಟ್ಟಿಯಿಂದ ಮಗು ಬೆಳೆದು ದೊಡ್ಡವರಾದ ಮೇಲೆ ಬೇಗ ಶೀತ, ಕೆಮ್ಮು ಬರದಂತೆ ತಡೆಗಟ್ಟುತ್ತದೆ! ಇನ್ನು ಮಗುವಿನ ಮೂಳೆ ಗಟ್ಟಿ ಮಾಡಲು ಕ್ಯಾಲ್ಸಿಯಂ ಬೇಕು ಅದಕ್ಕೆ ಒಂದು ಎಲೆ ತೆಗೆದುಕೊಂಡು ಅದಕ್ಕೆ ಸುಣ್ಣ ಸವರಿ ಎಲೆಯ ರಸವನ್ನು ಹಿಂಡಿ ತಾಯಿಯ ಹಾಲಿನಲ್ಲಿ ಕಲೆಸಿ ಕುಡಿಸುತ್ತಾರೆ, ಪ್ರತಿಯೊಂದು ತಾಯಿ ಹಾಲಿನಿಂದಲೇ ಹೀಗಾಗಿ ತಾಯಿ ಹಾಲು ಯಾವಾಗಲೂ ಅಮೃತಕ್ಕೆ ಸಮ!

ಮಗು ಬೆಳದಂತೆ ಬಾಣಂತಿಯ ಆಹಾರದಲ್ಲಿ ವ್ಯತ್ಯಾಸವಾಗುತ್ತಾ ಹೋಗುತ್ತದೆ, ನಿಧಾನವಾಗಿ ಒಂದೊಂದೇ ಚಪಾತಿ, ರೊಟ್ಟಿಯನ್ನು ಕೊಡುತ್ತಾ ಮೂರು ತಿಂಗಳ ಬಾಣಂತನ ಮುಗಿಯುವುದರೊಳಗೆ ಆಕೆಯ ತಾಯಿ ಮಗಳನ್ನು ದೈಹಿಕವಾಗಿ ಗಟ್ಟಿ ಮಾಡಿ, ತೊಟ್ಟಿಲು ಶಾಸ್ತ್ರ ನೆರವೇರಿಸಿ,ಗಂಗೆ ಪೂಜೆ ಮಾಡಿಸಿ ಇನ್ನು ನೀನು ನಿಧಾನವಾಗಿ ನಿನ್ನ ಮಗುವಿನ್ನು ನೀನೇ ನೋಡಿಕೊಳ್ಳಬಹುದು ಎಂದು ದೇವರ ಗುಡಿಗೆ ಹೋಗಿ ಭಗವಂತನ ಆಶೀರ್ವಾದ ತಾಯಿ ಮಗುವಿಗೆ ಕೊಡಿಸಿ, ಸಂತೃಪ್ತಿ ಪಡೆದು ಅತ್ತೆಯ ಮನೆಗೆ ನೆಂಟರಿಷ್ಟರ ಜೊತೆಗೆ ಹೋಗಿ ಎಲ್ಲರೂ ಮಗು,ತಾಯಿಗೆ ಒಳ್ಳೆಯದಾಗಲಿ ಎಂದು ಹಾರೈಸಿ ಮನೆಗೆ ವಾಪಸ್ಸು ಬರುತ್ತಾರೆ!

ಅಷ್ಟು ದಿನ ಇದ್ದ ಮುದ್ದಾದ ಮಗುವಿನ ಆರೈಕೆ ಅಕ್ಕರೆಯ ನೆನಪಾಗಿ ಕಣ್ಣು ತುಂಬಿ ಬರುತ್ತದೆ!

ಅಲ್ಲಿಗೆ ತನ್ನ ಮಗಳ ಹಾಗು ಮಗು ಜವಾಬ್ದಾರಿ ತಾಯಿಗೆ ಮುಗಿಯಿತು, ನಂತರ ಹೊಸದಾಗಿ ತಾಯಿಯಾದ ಮಗಳು ಅಮ್ಮಾ ಹಾಗು ಅತ್ತೆಯು ಕಾಳಜಿಯಿಂದ ಕೊಡುವ ಸಲಹೆ ಪಡೆಯುತ್ತಾ ಮಗುವಿನ ಆರೈಕೆ ಸರಿಯಾಗಿ ಮಾಡುತ್ತಾಳೆ!

ಹೀಗೆ ಒಂದು ಹೆಣ್ಣು ತಾಯಿಯಾದಾಗ ಮಗುವಿನ ಜವಾಬ್ದಾರಿ ಸರಿಯಾಗಿ ವಹಿಸಿಕೊಂಡು ಮನೆಯನ್ನೂ ಕೂಡ ಶಿಸ್ತಾಗಿಟ್ಟು

ಎಲ್ಲರಿಗೂ ರುಚಿಯಾದ ಅಡುಗೆ ಬಡಿಸಿ ಅನ್ನಪೂರ್ಣೇಶ್ವರಿ ಎನಿಸಿಕೊಳ್ಳುತ್ತಾಳೆ!

ಒಂದು ಮನೆ ನಂದಗೋಕುಲವಾಗ ಬೇಕಾದರೆ ತಾಯಿಯ ಅಸ್ತಿತ್ವ ಅಲ್ಲಿರಲೇ ಬೇಕು!

### ತಾಯಿ

ಕಣ್ಣಲ್ಲೇ ಕಾಪಿಟ್ಟು
ನವಮಾಸ ನೋವ್ಪಟ್ಟು
ಭುವಿಗೆ ತಂದಳು ನನ್ನ ತಾಯಿ!

ತನ್ನ ಕನಸೆಲ್ಲ ಕೊಂದ್ಬಿಟ್ಟು
ನನ್ನ ಕನಸಿಗೆ ರೆಕ್ಕೆ ಕಟ್ಬಿಟ್ಟು
ಹಾರಿ ಬಿಟ್ಟಳೇ ನನ್ನ ತಾಯಿ!

ಋಣ ಭಾರ ಕಟ್ಬಿಟ್ಟು
ಈ ದೇಹಕೆ ಉಸಿರುಕೊಟ್ಟು
ಹೊರಟು ಬಿಟ್ಟಳೇ ನನ್ನ ತಾಯಿ!??

ತಾಯಿ ಯಾವಾಗಲೂ ನಮ್ಮ ಜೊತೆಗೆ ಶಾಶ್ವತವಲ್ಲ, ಆದರೆ ಅವಳ ಋಣ ಮಾತ್ರ ಉಸಿರಿರುವವರೆಗೆ!

ಹೀಗಾಗಿ"ಅಮ್ಮಾ ಎಂದರೆ ಮೈಮನವೆಲ್ಲ ಹೂವಾಗುವುದಮ್ಮಾ ಎರಡಕ್ಷರದಲಿ ಏನಿದೆ ಶಕ್ತಿ ಹೇಳುವರ್ಯಾರಮ್ಮಾ" ಎನ್ನುವ ಸಾಲುಗಳಿಗೆ ಸರಿಗಟ್ಟುವ ಪದವಿಲ್ಲ!

# ಮಮತೆಯ ಮಹಾಪೂರ ಮಾತೆ

**ಯಾದೇವಿ ಸರ್ವಭೂತೇಷು ಶಾಂತಿರೂಪೇಣ ಸಂಸ್ಥಿತಾ ನಮಸ್ತಸ್ಯೈ,ನಮಸ್ತಸ್ಯೈ ನಮೋ ನಮಃ॥**



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.




"ಅಮ್ಮಾ ಎಂದರೆ ಮೈಮನ ಹೂವಾಗುವದಮ್ಮ" ಎಂದಾಗ ಮೈಮನದಲ್ಲಿ ಏನೋ ಪುಳಕವಾಗುವದು."ಅಮ್ಮ" ಎಂಬ ಪದದ ಶಕ್ತಿಯೇ ಅಂತಹದು.ಎಲ್ಲ ಜನರ ಕಷ್ಟ ಕಾಯಲು ದೇವರಿಂದ ಆಗದು. ಆದರೆ ತಾಯಿಯೊಬ್ಬಳು ಜೊತೆಗಿದ್ದರೆ ಎಂತಹ ಕಷ್ಟ ಬಂದರೂ ಸಹಿಸುವ ಶಕ್ತಿ ಕಂಡುಬರುತ್ತದೆ. ಮಾತೆಯೆಂಬುದು ಹಲವು ಶಬ್ದಗಳಿಂದ ಕರೆಯಲ್ಪಡುವ ಅಮ್ಮ,ತಾಯಿ,ಮಾತೆ,ಜನನಿ,ಜನ್ಮದ ಾತೆ,ಅವ್ವ ಎಂದು ಸಂಭೋದಿಸಿದರೆ ಇಂಗ್ಲೀಷಿನಲ್ಲಿ ಮದರ,ಹಿಂದಿಯಲ್ಲಿ ಮಾ ಎನ್ನುವವಳು ಮಗು ಹುಟ್ಟಿದಾಗಿನಿಂದ ದೊಡ್ಡವರಾಗುವ ತನಕ ಪ್ರತಿಯೊಂದು ಹಂತದಲ್ಲೂ ನಮಗೆ ನೆರವಾಗುವವಳು.ತಾಯಿಯ ಪ್ರೀತಿ,ಆಕೆ ಕಲಿಸುವ ಶಿಸ್ತಿನಿಂದ ಹೊರಬಂದ ಮಗು ಮೊದಲು ಮಾತನಾಡಲು ಕಲಿಯುವದೇ "ಅಮ್ಮ" ಎಂಬ ಪದದಿಂದ.ಪ್ರತಿಯೊಬ್ಬ ಬೆಳೆಯುವ ಮಗುವಿಗೆ ಪೋಷಕಿಯಾದರೆ,ಸ್ನೇಹಿತೆ,ರಕ್ಷಕಿ,ನೋವನ್ನು ಹೋಗಲಾಡಿಸುವವಳು,ಬೇಡಿಕೆ ಇಡೇರಿಸುವಳು,ಅಡುಗೆ ಮಾಡುವವಳು,ಕೈತುತ್ತು ನೀಡುವವಳು,ಕೈಹಿಡಿದು ನಡೆಸುವವಳು,ಲೆಕ್ಕವಿಲ್ಲದಷ್ಟು ನೋವನ್ನು ಹೃದಯದಲ್ಲಿ ಇಟ್ಟುಕೊಂಡಿದ್ದರೂ ,ತಾಳಿ,ಬಾಳಿ ಬದುಕನ್ನು ಕಟ್ಟಿದ ಮಾತೆಯರನ್ನು ನೆನೆಯುವದು ಸದಾಚಾರದ ಸಂಕೇತವಾಗಿದೆ.ಪ್ರತಿಯೊಂದು ಮಗುವಿನ ಮೊದಲ ತೊದಲ ನುಡಿ ,ನೋವು ನಲಿವಿನಲ್ಲಿಸುಳಿಯುವ ನುಡಿ ಬದುಕಿನ ಕೊನೆಯ ನುಡಿಯಾದ ಅಮ್ಮನ ಮಮತೆಯನ್ನು ನೆನಪಿಸುವ ದಿನವೇ ' ಮದರ್ಸ ಡೆ' ಅಥವಾ 'ಮಾತೆಯರ ದಿನವೆಂದು ಕರೆಯಲಾಗುತ್ತದೆ.

ಆಚರಣೆಯ ಇತಿಹಾಸ



1876ರಲ್ಲಿ ಆ?ಯನ್ ಚರ್ಚನಲ್ಲಿ ಪ್ರಾರ್ಥನೆ ವೇಳೆ ಇಡೀ ಮನುಕುಲಕ್ಕೆ ತಾಯಂದಿರ ಕೊಡುಗೆಯ ವಿವರ ನೀಡುತ್ತಿದ್ದಳು. ಮಾನವೀಯತೆಯ ಪ್ರತಿರೂಪವೆನಿಸಿದ ತಾಯಂದಿರಿಗೆ ಗೌರವ ಸೂಚಿಸಲು ಮಾತೆಯರ ದಿನ ಆಚರಿಸಿ ವರ್ಷದಲ್ಲೊಂದು ದಿನವನ್ನಾದರೂ ಮಾತೆಯರ ದಿನದ ಆಚರಣೆಗಾಗಿ ಮೀಸಲಾಗಿರುವ ಆಸೆ ವ್ಯಕ್ತ ಪಡಿಸಿದಳು.ತನ್ನಮ್ಮನ ನೋವು ತುಂಬಿದ ನುಡಿಗಳು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದ ಹನ್ನೆರಡು ವರ್ಷದ ಅನಾಜಾರ್ವಿಸಳ ಮನಸ್ಸಿನಲ್ಲಿ ಭದ್ರವಾಗಿ ಬೇರೂರಿದವು.ಅಮೇರಿಕದಲ್ಲಿ ಅಂತರ್ಯುದ್ಧ ಭುಗಿಲೆದ್ದಾಗ 'ಆ?ಯನರೀವ್ಸ' ಶಾಂತಿ ಸ್ಥಾಪಿಸುವ ದಿಸೆಯಲ್ಲಿ ತಾಯಂದಿರ ಸ್ನೇಹದಿನವನ್ನಾಚರಿಸಿ ಹೊಸ ಆಚರಣೆಗೆ ಮುನ್ನುಡಿ ಬರೆದಳು.ಮಾತೆಯ ದಿನಾಚರಣೆಗೆ ಕಾರಣಳಾದ 'ಆ?ಯನ್' 1905 ರಲ್ಲಿ ಕೊನೆಉಸಿರೆಳೆದಳು.ಬಳಿಕ ಆಕೆಯ ಮಗಳು ' ಅನ್ನಾಜಾರ್ವಿಸ್' ತನ್ನ ತಾಯಿಯ ಅಭಿಲಾಷೆಯಂತೆ ಪ್ರತೀವರ್ಷ ಮಾತೆಯರ ದಿನವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಆಚರಿಸುವ ಸಂಪ್ರದಾಯಕ್ಕೆ ನಾಂದಿ ಹಾಡಿದಳು.ನಮ್ಮ ದೇಶದಲ್ಲೂ ಕೂಡ ಪ್ರತೀವರ್ಷ ಮೇ ತಿಂಗಳ ಎರಡನೇಯ ಭಾನುವಾರ ಮಾತೆಯರ ದಿನಾಚರಣೆ ಅಥವಾ ' ಮದರ್ಸ ಡೇ' ಎಂದು ಆಚರಿಸಲಾಗುತ್ತದೆ. ' ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು' ನಮಗೆ ಜನುಮ ನೀಡುವ ತಾಯಿ ಮಗುವಿಗೆ ಮೊದಲ ಗುರುವಾಗಿ ,ಭೂತಾಯಿಯಷ್ಟೇ ಸಹನಶೀಲಳಾಗಿ ತನ್ನ ನೋವನ್ನೆಲ್ಲ ಸಹಿಸಿಕೊಂಡು ಮಾತೃತ್ವದ ಪಟ್ಟಕ್ಕೆ ಬರುತ್ತಾಳೆ. ಒಡೆದುಹೋದ ಆಟದ ವಸ್ತುಗಳಿಗೆ ಅಂಟು ಹಾಕಿ ಜೋಡಿಸುವ ಇಂಜನೀಯರ ತಾಯಿ,ಗಾಯವಾದಾಗ ದೈನ್ಯಳಾಗಿ ಸೇವೆನೀಡುವ ತಾಯಿ,ತಂದೆಯ ಏಟನ್ನು ತಪ್ಪಿಸಲು ಮಧ್ಯ ನಿಂತು ವಾದಿಸುವ ಮಾತೆ,ದಿನನಿತ್ಯ ನಾವು ಕಂಡ ಎಲ್ಲ ಹುದ್ದೆಗಳನ್ನು ನಿರ್ವಹಿಸುವ ತಾಯಿಯ ಜೀವನ ಒಂದು ಅಮೂಲ್ಯ ಪುಸ್ತಕದಂತೆ.ಅದರಲ್ಲಿ ಪ್ರೀತಿ,ವಾತ್ಸಲ್ಯ ಮಮತೆ,ಕರುಣೆ,ಬಾಂಧವ್ಯದ ಅಪೂರ್ವ ಅಧ್ಯಾಯಗಳನ್ನು ನೋಡಬಹುದು. ಹೊತ್ತು,ಹೆತ್ತು,ಬೆಳೆಸಿ,ತಿದ್ದಿ- ತೀಡಿ ನಮ್ಮೆಲ್ಲರನ್ನೂ ಒಳ್ಳೆಯ ಪ್ರಜೆಯನ್ನಾಗಿ ಮಾಡಿದ ಮಹಾಮಾತೆಗೆ ನಮಸ್ಕಾರ.

**ಅಮ್ಮ ಎಂದರೆ ಔದಾರ್ಯ**
**ಮಾತೆಯೆಂದರೆ ಮಾಧುರ್ಯ**
**ತಾಯಿಯೆಂದರೆ ಆಂತರ್ಯ**
**ಜಗಬೆಳಗುವ ಸೌಂದರ್ಯ**
**ಅಮ್ಮಾ ನಿನಗಿದೋ ಅಭಿನಂದನೆ.**



ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.



# ತಾಯಿತನದ ನಿಜ ಸ್ವರೂಪ

## ಅಮ್ಮನ ದಿನ

ಮನದ ಮಾತು...

Mother's Day ಎಂಬ ಆಚರಣೆಯ ಹಿಂದೆ ಕೇವಲ ಶುಭಾಶಯಗಳ ಕಥೆಯಿಲ್ಲ; ತಾಯಿಯ ಮಮತೆ, ಮಹಿಳೆಯ ಸೇವಾ ಮನೋಭಾವ ಮತ್ತು ಸಮಾಜದ ಆರೋಗ್ಯದ ಬಗ್ಗೆ ಒಂದು ಭಾವನಾತ್ಮಕ ಚಳವಳಿಯ ಇತಿಹಾಸ ಇದೆ.

ಪ್ರಾಚೀನ ಕಾಲದಿಂದಲೇ ತಾಯಿಯನ್ನು ಗೌರವಿಸುವ ಸಂಪ್ರದಾಯ ಹಲವು ಸಂಸ್ಕೃತಿಗಳಲ್ಲಿ ಇತ್ತು.

ಪುರಾತನ ಗ್ರೀಕ್ ಮತ್ತು ರೋಮನ್ ಸಂಸ್ಕೃತಿಗಳಲ್ಲಿ ದೇವತೆ ರೂಪದ ಮಾತೃಶಕ್ತಿಯನ್ನು ಆರಾಧಿಸಲಾಗುತ್ತಿತ್ತು.

ನಂತರ ಯುರೋಪಿನ ಕೆಲವು ದೇಶಗಳಲ್ಲಿ Mothering Sunday ಎಂಬ ಆಚರಣೆ ಪ್ರಚಲಿತಕ್ಕೆ ಬಂತು. ಆದರೆ ಇಂದಿನ ಆಧುನಿಕ ಮಾತೃ ದಿನದ ರೂಪಕ್ಕೆ ಪ್ರಮುಖ ಕಾರಣರಾದವರು Anna Jarvis.

ಅನ್ನಾ ಜಾರ್ವಿಸ್ ಅವರ ತಾಯಿ Ann Reeves Jarvis ಅಮೇರಿಕಾದಲ್ಲಿ ಮಹಿಳೆಯರು ಮತ್ತು ಮಕ್ಕಳ ಆರೋಗ್ಯಕ್ಕಾಗಿ ದುಡಿದ ಸಮಾಜಸೇವಕಿ. ಅವರು Mother's Day Work Clubs ಎಂಬ ಸಂಘಟನೆಗಳ ಮೂಲಕ ಬಡ ಕುಟುಂಬಗಳಿಗೆ ಆರೋಗ್ಯ ಮತ್ತು ಸ್ವಚ್ಛತೆಯ ಅರಿವು ಮೂಡಿಸುತ್ತಿದ್ದರು. ಅಮೇರಿಕಾದ ಗೃಹಯುದ್ಧದ ಸಮಯದಲ್ಲೂ ಗಾಯಾಳು ಸೈನಿಕರ ಸೇವೆಯಲ್ಲಿ ತೊಡಗಿದ್ದರು.

1905ರಲ್ಲಿ ತಾಯಿ ನಿಧನರಾದ ನಂತರ, ತಾಯಂದಿರ ತ್ಯಾಗವನ್ನು ಸ್ಮರಿಸಲು ವಿಶೇಷ ದಿನ ಇರಬೇಕು ಎಂಬ ಸಂಕಲ್ಪವನ್ನು ಅನ್ನಾ ಜಾರ್ವಿಸ್ ಮಾಡಿಕೊಂಡರು. ಅನೇಕ ಪತ್ರಗಳನ್ನು ಬರೆದು, ಸಭೆಗಳನ್ನು ನಡೆಸಿ, ಜನರಲ್ಲಿ ಜಾಗೃತಿ ಮೂಡಿಸಿದರು.

1908ರಲ್ಲಿ Grafton ಪಟ್ಟಣದ ಒಂದು ಚರ್ಚ್‌ನಲ್ಲಿ ಮೊದಲ ಅಧಿಕೃತ ಮಾತೃ ದಿನ ಆಚರಣೆ ನಡೆಯಿತು. ಆ ದಿನ ತಾಯಿಯ ಪ್ರೀತಿಯ ಸಂಕೇತವಾಗಿ ಬಿಳಿ ಕಾರ್ನೇಶನ್ ಹೂಗಳನ್ನು ಹಂಚಲಾಯಿತು.

ಅವರ ಹೋರಾಟ ಫಲವಾಗಿ 1914ರಲ್ಲಿ ಅಮೇರಿಕಾದ ಅಧ್ಯಕ್ಷ Woodrow Wilson ಮೇ ತಿಂಗಳ ಎರಡನೇ ಭಾನುವಾರವನ್ನು ಅಧಿಕೃತ Mother s Day ಎಂದು ಘೋಷಿಸಿದರು. ನಂತರ ವಿಶ್ವದ ಅನೇಕ ರಾಷ್ಟ್ರಗಳು ಅದನ್ನು ಸ್ವೀಕರಿಸಿವೆ.

ಆದರೆ ಒಂದು ಆಸಕ್ತಿಕರ ಸಂಗತಿ ಏನೆಂದರೆ

ನಂತರ ಮಾತೃ ದಿನ ಹೆಚ್ಚು ವ್ಯಾಪಾರೀಕರಣವಾಗುತ್ತಿದೆ ಎಂದು ಅನ್ನಾ ಜಾರ್ವಿಸ್ ಅವರಿಗೆ ಬೇಸರವಾಯಿತು. ಶುಭಾಶಯ ಕಾರ್ಡ್, ಉಡುಗೊರೆ ಮತ್ತು ವ್ಯಾಪಾರಕ್ಕಿಂತ ತಾಯಿಯ ಬಗ್ಗೆ ನಿಜವಾದ ಕೃತಜ್ಞತೆ ಮುಖ್ಯ ಎಂದು ಅವರು ಹೇಳುತ್ತಿದ್ದರು.

ಭಾರತೀಯ ಸಂಸ್ಕೃತಿಯಲ್ಲಿ ತಾಯಿಗೆ ಅತ್ಯುನ್ನತ ಸ್ಥಾನ ನೀಡಲಾಗಿದೆ.

ಮಾತೃ ದೇವೋ ಭವ ಎಂಬ ವಾಕ್ಯವೇ ತಾಯಿಯನ್ನು ದೇವರ ಸಮಾನವಾಗಿ ಕಾಣುತ್ತದೆ. ನಮ್ಮ ಸಾಹಿತ್ಯ, ಪುರಾಣ, ಕಾವ್ಯ ಮತ್ತು ಜನಪದಗಳಲ್ಲಿ ತಾಯಿಯ ಮಹತ್ವವನ್ನು ಅನೇಕ ರೀತಿಯಲ್ಲಿ ಕೊಂಡಾಡಲಾಗಿದೆ.

ಆದರೆ ವಿಶ್ವ ಮಾತೃ ದಿನ ಎಂದಾಗ ಕೇವಲ ದೇವಿಯರಂತೆ ಮಹಾನ್ ಸಾಧಕಿಯರನ್ನು ನೆನೆದು ಭಾಷಣ ಮಾಡುವುದರಿಂದ ಮಾತ್ರ ತಾಯಿತನದ ಅರ್ಥ ಸಂಪೂರ್ಣವಾಗುವುದಿಲ್ಲ.

ಒಮ್ಮೆ ಸಮಾಜದ ವಾಸ್ತವವನ್ನು ಪರೀಕ್ಷಿಸಿ ನೋಡಿದಾಗ ಮನಸ್ಸಿಗೆ ನೋವಾಗುವ ಅನೇಕ ಪ್ರಶ್ನೆಗಳು ಎದುರಾಗುತ್ತವೆ.

ಈ ಭೂಮಿಯ ಮೇಲೆ ಎಷ್ಟು ತಾಯಂದಿರು ನಿಜವಾಗಿಯೂ ಸುಖವಾಗಿ ಬದುಕುತ್ತಿದ್ದಾರೆ

ಎಷ್ಟು ತಾಯಂದಿರು ಮನಸ್ಸಿನೊಳಗಿನ ನೋವನ್ನು ಯಾರಿಗೂ ಹೇಳದೆ ನಗುಮುಖದ ಹಿಂದೆ ಮುಚ್ಚಿಕೊಂಡಿದ್ದಾರೆ

ಎಷ್ಟು ತಾಯಂದಿರು ಮನೆಯ ನಾಲ್ಕು ಗೋಡೆಗಳ ನಡುವೆ ಮೌನವಾಗಿ ಅಳುತ್ತಿದ್ದಾರೆ

ಕೇವಲ ಉಡುಗೊರೆ ಕೊಡುವುದರಿಂದ, ಕೇಕ್ ಕತ್ತರಿಸುವುದರಿಂದ, ಒಂದು ದಿನ ಸಾಮಾಜಿಕ ಜಾಲತಾಣದಲ್ಲಿ ಚಿತ್ರ ಹಾಕುವುದರಿಂದ ಮಾತ್ರ ದಿನಾಚರಣೆ ಸಂಪನ್ನವಾಗುವುದಿಲ್ಲ.

ಪ್ರತಿ ಮನೆಯ ಅಡುಗೆಮನೆಯನ್ನು ಒಳಹೊಕ್ಕು ನೋಡಿದರೆ ಅಲ್ಲಿ ಬೆವರು ಮಾತ್ರವಲ್ಲ, ತಾಯಿಯ ಕಣ್ಣೀರಿನ ಗುರುತುಗಳೂ ಕಾಣುತ್ತವೆ.

ಮನೆಯಲ್ಲಿರುವ ಎಲ್ಲರ ಹೊಟ್ಟೆ ತುಂಬಿದ ನಂತರ ತಾನು ತಣ್ಣನೆಯ ಊಟ ಮಾಡುವ ತಾಯಿ, ತನ್ನ ನೋವನ್ನು ಮುಚ್ಚಿ ಮಕ್ಕಳ ಮುಂದೆ ನಗುವ ತಾಯಿ, ತನ್ನ ಆಸೆಗಳನ್ನು ಮರೆತು ಮಕ್ಕಳ ಕನಸುಗಳಿಗೆ ಬಣ್ಣ ಹಚ್ಚುವ ತಾಯಿ ಇವಳ ಬದುಕೇ ನಿಜವಾದ ಮಾತೃತ್ವ.

ದೇಶ ವಿಜ್ಞಾನ, ತಂತ್ರಜ್ಞಾನ, ಆರ್ಥಿಕತೆಯಲ್ಲಿ ಪ್ರಗತಿಯತ್ತ ಸಾಗುತ್ತಿದೆ. ಆದರೆ ಅದೇ ಸಮಯದಲ್ಲಿ ವೃದ್ಧಾಶ್ರಮಗಳ ಸಂಖ್ಯೆಯೂ ಹೆಚ್ಚುತ್ತಿದೆ. ಇದು ಸಮಾಜದ ಯಶಸ್ಸೋ ಅಥವಾ ಸಂಬಂಧಗಳ ಸೋಲೋ

ಒಮ್ಮೆ ತನ್ನ ಮಡಿಲಲ್ಲಿ ಮಗು ಮಲಗಿಸಿ ಜೋಗುಳ ಹಾಡಿದ ತಾಯಿ, ಇಂದು ವೃದ್ಧಾಶ್ರಮದ ಮಂಚದ ಮೇಲೆ ಮಲಗಿ ಬಾಗಿಲಿನತ್ತ ಕಣ್ಣಿಟ್ಟುಕೊಂಡು ಮಗ ಬರುವನೆಂದು ಕಾಯುತ್ತಿರುವ ದೃಶ್ಯ ಎಂತಹ ಕಠೋರ ವ್ಯಂಗ್ಯ!

ಬಾಲ್ಯವೆಂದರೆ ಸುಖದ ಹೂಗನಸು.

ಆ ಹೂಗನಸಿಗೆ ಪರಿಮಳ ತುಂಬುವವಳು ತಾಯಿ.

ಪ್ರತಿಯೊಂದು ಮಗುವಿಗೂ ಬಾಲ್ಯದಲ್ಲಿ ತಾಯಿ ಎಂದರೆ ಪ್ರಪಂಚದ ಶ್ರೇಷ್ಠ ಮಹಿಳೆ. ತನ್ನ ಮಾತುಗಳನ್ನು ಕೇಳಲು, ತನ್ನ ಜೊತೆ ಆಟ ಆಡಲು, ತನ್ನ ಬೇಕು-ಬೇಡಗಳನ್ನು ಅರ್ಥಮಾಡಿಕೊಳ್ಳಲು, ಜ್ವರ ಬಂದಾಗ ರಾತ್ರಿಯಿಡೀ ಜಾಗರಿಸಿಕೊಳ್ಳಲು, ಭಯವಾದಾಗ ಎದೆಗೆ ಹಚ್ಚಿಕೊಳ್ಳಲು ತಾಯಿ ಬೇಕೇ ಬೇಕು ಎನಿಸುತ್ತದೆ. ಒಮ್ಮೆ ಒಂದು ಟಿವಿ ಕಾರ್ಯಕ್ರಮದಲ್ಲಿ ಪುಟ್ಟ ಮಗು ತುಂಬಾ ಸೊಗಸಾಗಿ ಹಾಡಿತು.

ಅಲ್ಲಿದ್ದ ನಿರ್ಣಾಯಕರೊಬ್ಬರು ನಗುತ್ತ ಕೇಳಿದರು ನೀನು ಹಾಲು ಕುಡಿಯದಿದ್ದರೆ, ಊಟ ಮಾಡದಿದ್ದರೆ ನಿನ್ನ ತಾಯಿ ಬೈಯುತ್ತಾಳಾ

ಆ ಮಗು ನಾಚುತ್ತಲೇ ಇಲ್ಲ ಎಂದಿತು.

ಯಾಕೆ ಎಂದು ಕೇಳಿದ ಕ್ಷಣ ನನಗೆ ತಾಯಿ ಇಲ್ಲ ಎಂದಿತು.

ಆ ಒಂದು ಉತ್ತರ ಕೇಳಿದಾಗ ವೇದಿಕೆಯ ನಗು ಕ್ಷಣಾರ್ಧದಲ್ಲಿ ಮೌನವಾಗಿ ಬಿಟ್ಟಿತು. ತಾಯಿಯನ್ನು ಕಳೆದುಕೊಳ್ಳುವುದು ಎಂದರೆ ಕೇವಲ ಒಬ್ಬ ವ್ಯಕ್ತಿಯನ್ನು ಕಳೆದುಕೊಳ್ಳುವುದಲ್ಲ; ಅದು ಪ್ರೀತಿಯನ್ನೇ ಕಳೆದುಕೊಳ್ಳುವುದು. ಮಗುವಿನ ಬಾಲ್ಯದ ಅರ್ಧ ಆಕಾಶವೇ ಕುಸಿದು ಬೀಳುವುದು. ಆದರೆ ಜೀವನದ ಮತ್ತೊಂದು ಕಠೋರ ಸತ್ಯವೆಂದರೆ

ಬಾಲ್ಯದಲ್ಲಿ ಹೂವಿನಂತಿದ್ದ ತಾಯಿಯೇ, ಕೆಲವೊಮ್ಮೆ ಯೌವನದಲ್ಲಿ ಮಕ್ಕಳಿಗೆ ಮುಳ್ಳಿನಂತಾಗಿ ಕಾಣುತ್ತಾಳೆ.

ಅಲ್ಲಿ ಹೋಗಬೇಡ ಇಲ್ಲಿ ಹೋಗಬೇಡ ಸರಿಯಾಗಿ ಊಟ ಮಾಡು ಸರಿಯಾಗಿ ನಿದ್ದೆ ಮಾಡು ಓದು ಎಂಬ ತಾಯಿಯ ಕಾಳಜಿಯ ಮಾತುಗಳು ಮಕ್ಕಳಿಗೆ ನಿಯಂತ್ರಣದ ಸರಪಳಿಯಂತೆ ಭಾಸವಾಗುತ್ತವೆ.

ಬೇರೆ ಮಕ್ಕಳನ್ನು ಉದಾಹರಿಸಿ ಹೇಳುವ ಮಾತುಗಳು ಪ್ರೇರಣೆಯಿಗಿಂತ ಒತ್ತಡವಾಗಿ ತೋರುತ್ತವೆ. ಹೀಗಾಗಿ ಕೆಲವೊಮ್ಮೆ ಮಕ್ಕಳ ಮನಸ್ಸಿನಲ್ಲಿ ತಾಯಿ ಎಂದರೆ ನಿರ್ಬಂಧ ಎಂಬ ಭಾವನೆ ಮೂಡುತ್ತದೆ.

ಆದರೆ ತಾಯಿ ಮಾಡುವ ಪ್ರತಿಯೊಂದು ಮಾತಿನ ಹಿಂದೆ ಇರುವುದೇ ಭಯ ನನ್ನ ಮಗುವಿಗೆ ಏನಾದರೂ ಆಗಿಬಿಟ್ಟರೆ ಎಂಬ ಆತಂಕ.

ಅವಳು ತೋರಿಸುವ ಕಠಿಣತೆ ಕೂಡ ಪ್ರೀತಿಯ ಮತ್ತೊಂದು ರೂಪ.

ಜೀವನ ಸಂಗಾತಿ ದೂರವಾದರೂ, ಗಂಡ ಸತ್ತರೂ, ಸಮಾಜ ಅವಮಾನ ಮಾಡಿದರೂ ಮಗನಿಗಾಗಿ ಜೀವ ಹಿಡಿದು ಗಟ್ಟಿಯಾಗಿ ನಿಲ್ಲುವ ಧೈರ್ಯ ತಾಯಿಗಷ್ಟೇ ಸಾಧ್ಯ. ತನ್ನ ಕಣ್ಣೀರು ಒರೆಸಿ ಮಗನ ಭವಿಷ್ಯ ಕಟ್ಟಲು ಹೋರಾಡುವ ಆ ಶಕ್ತಿ ಮಾತೃತ್ವದ ಮಹಿಮೆ.

ಆದರೆ ಮಗ ದೊಡ್ಡವನಾಗಿ ತನ್ನದೇ ಕುಟುಂಬ ಕಟ್ಟಿಕೊಂಡಾಗ, ತಾಯಿಯೊಳಗೆ ಒಂದು ಖಾಲಿತನ ಹುಟ್ಟುತ್ತದೆ.

ನನ್ನ ಮಗನನ್ನು ಯಾರೋ ಕಸಿದುಕೊಂಡರು ಎಂಬ ನೋವು ಅವಳ ಮನದೊಳಗೆ ಮೂಡುತ್ತದೆ.

ಕೆಲವೊಮ್ಮೆ ದಿನನಿತ್ಯದ ಕಲಹಗಳಲ್ಲಿ ಮಗನೇ ಅಮ್ಮಾ, ನಿನಗೇನೂ ತಿಳಿಯುವುದಿಲ್ಲ ಸುಮ್ಮನಿರು ಎಂದು ಹೇಳಿಬಿಡುತ್ತಾನೆ. ಆ ಒಂದು ವಾಕ್ಯ ತಾಯಿಯ ಹೃದಯವನ್ನು ಚೂರಾಗಿಸುತ್ತದೆ.

ತನ್ನ ಸರ್ವಸ್ವವೆಂದು ಜೀವ ತೆವಳಿಸಿದ ಮಗನ ಬದುಕಿನಲ್ಲಿ ತಾನು ಬೇಡವಾದ ಮೂಟೆಯೆಂಬ ಭಾವ ಬಂದಾಗ ಆ ತಾಯಿಯೊಳಗೆ ರೋಧನ, ಜಿಗುಪ್ಸೆ, ಹತಾಶೆ ಎಲ್ಲವೂ ತುಂಬಿಬಿಡುತ್ತವೆ.

ಇದಕ್ಕೆ ಹೀಗೆ ಪರಿಹಾರ ಎಂದು ನಿಖರವಾಗಿ ಹೇಳುವುದು ಸಾಧ್ಯವಿಲ್ಲ.

ಆದರೆ ಒಂದು ಸೂಕ್ಷ್ಮವನ್ನು ಗಮನಿಸಲೇಬೇಕು

ತಾಯಿ ತನ್ನ ಮಗನ ಮೇಲೆ ಹರಿಸಿದ ಪ್ರೀತಿಯ ಮಹಾಪೂರವನ್ನು ತನ್ನ ಸೊಸೆಯಿಂದ ನಿರೀಕ್ಷಿಸಿದರೆ ಅದು ಸಾಧ್ಯವಾಗುವುದಿಲ್ಲ.

ಅದೇ ರೀತಿ ಸೊಸೆಯೂ ತನ್ನ ತಾಯಿಯ ಜೊತೆಗಿನ ಬಾಂಧವ್ಯವನ್ನು ಮರೆಯುವುದಿಲ್ಲ. ಹೀಗಾಗಿ ತಾಯಿ-ಮಗನ ಸಂಬಂಧ ಪ್ರತ್ಯೇಕ ಗೌರವದೊಂದಿಗೆ ಇರಬೇಕು. ಮಗನಿಗೆ ಮಾಡಿದ ಪ್ರೀತಿ, ಪೋಷಣೆಯ ಋಣವನ್ನು ಸೊಸೆ ಹೊರುವುದಿಲ್ಲ; ಆದರೆ ಹಿರಿಯರಿಗೆ ಮಾನವೀಯ ಗೌರವ ನೀಡುವುದು ಅವಳ ಸೌಜನ್ಯ. ಅದೇ ರೀತಿ ಮಗನಾದವನು ತನ್ನ ಪತ್ನಿಯ ತಾಯಿಯನ್ನೂ ಗೌರವದಿಂದ ಕಾಣಬೇಕು.

ಸಂಬಂಧಗಳನ್ನು ಉಳಿಸುವುದು ಪ್ರೀತಿ ಮಾತ್ರವಲ್ಲ, ಪರಸ್ಪರ ಗೌರವವೂ ಹೌದು. ಭಾರತೀಯ ಪರಂಪರೆಯಲ್ಲಿ ಭೂಮಿಯನ್ನು, ಗೋಮಾತೆಯನ್ನು, ಪ್ರಕೃತಿಯನ್ನು, ರಕ್ಷಿಸುವ ದೇವಿಯನ್ನೂ ಮಾತೆಯ ಸ್ವರೂಪವೆಂದು ಪೂಜಿಸಲಾಗುತ್ತದೆ.

ಏಕೆಂದರೆ ಸೃಷ್ಟಿಯನ್ನು ಪೋಷಿಸುವ ಶಕ್ತಿ ತಾಯಿತನ.

ಹೀಗಾಗಿ ವಿಶ್ವ ಮಾತೃ ದಿನದಂದು ಕೇವಲ ತನ್ನ ತಾಯಿಯನ್ನು ಪ್ರೀತಿಸುವುದೇ ಮುಖ್ಯವಲ್ಲ;

ತನ್ನದಲ್ಲದ ಬೇರೆ ಹೆಣ್ಣುಗಳನ್ನೂ ಮಾತೃಸ್ಥಾನದಲ್ಲಿ ಗೌರವಿಸುವ ಮನಸ್ಸು ಬೆಳೆಸಿಕೊಳ್ಳಬೇಕು.

ವಿಚ್ಛೇದಿತೆಯರು, ವಿಧವೆಯರು, ಬಡ ತಾಯಂದಿರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಅನೇಕ ಕಡೆ ಕೆಲಸಕ್ಕೆ ಹೋಗುತ್ತಾರೆ.

ಅವರು ಅನುಭವಿಸುವ ಮಾನಸಿಕ ಹಿಂಸೆ, ನೈತಿಕ ಕಿರುಕುಳ, ಆರ್ಥಿಕ ಒತ್ತಡಗಳು ಸಣ್ಣದಲ್ಲ.

ಮಕ್ಕಳನ್ನು ಸಾಕುವ ಹೊಣೆ, ಸಮಾಜದ ಒತ್ತಡ, ಬದುಕಿನ ಹೋರಾಟ ಇವೆಲ್ಲದರ ನಡುವೆ ಅವರು ಒಳಗೊಳಗೆ ಎಷ್ಟು ಬಾರಿ ಮುರಿದು ಬೀಳುತ್ತಾರೋ ಯಾರಿಗೂ ಕಾಣುವುದಿಲ್ಲ.

ಒಂದು ಕುಟುಂಬ ಮನೆಯಾಗಿ ಉಳಿಯಬೇಕಾದರೆ ತಾಯಿಯ ಪಾತ್ರ ಬಹುದೊಡ್ಡದು. ಸುಂದರವಾಗಿ ಪೋಣಿಸಿದ ಹಾರದಲ್ಲಿ ನಮ್ಮ ಕಣ್ಣನ್ನು ಸೆಳೆಯುವುದು ಬಣ್ಣ ಬಣ್ಣದ ಹೂಗಳು; ಆದರೆ ಅವನ್ನೆಲ್ಲ ಒಟ್ಟಾಗಿ ಹಿಡಿದಿರುವ ದಾರ ಮಾತ್ರ ಕಣ್ಣಿಗೆ ಕಾಣುವುದಿಲ್ಲ.

ಹಾಗೆಯೇ ಸಂಸಾರದಲ್ಲಿ ಎಲ್ಲರ ಸಂತೋಷ, ಸಾಧನೆ, ನಗು ಕಾಣುತ್ತದೆ; ಆದರೆ ಅವನ್ನೆಲ್ಲ ಒಟ್ಟಾಗಿ ಹಿಡಿದು ನಿಲ್ಲಿಸುವ ತಾಯಿಯ ತ್ಯಾಗ ಮಾತ್ರ ಅನೇಕ ಬಾರಿ ಗಮನಕ್ಕೆ ಬರುವುದಿಲ್ಲ.

ಆದರೆ ಅವಳ ಅನುಪಸ್ಥಿತಿ ಮಾತ್ರ ಜೀವಪೂರ್ತಿ ಕಾಡುತ್ತದೆ.

**ತಾಯಿ ಇದ್ದರೆ ಮನೆ.**
**ತಾಯಿ ಇದ್ದರೆ ತವರು.**
**ತಾಯಿ ಇದ್ದರೆ ಸಾಂತ್ವನ.**
**ತಾಯಿ ಇದ್ದರೆ ಪ್ರೀತಿ.**

ತಾಯಿ ಎಂದರೆ ದುಃಖವನ್ನು ತೋಡಿಕೊಳ್ಳಲು ಇರುವ ಮಡಿಲು.

ನಾವು ಇದ್ದ ಹಾಗೆ ನಮ್ಮನ್ನು ಒಪ್ಪಿಕೊಳ್ಳುವ ಏಕೈಕ ಜೀವಿ ತಾಯಿ.

ಗಂಡ-ಹೆಂಡತಿಯ ನಡುವೆ ಜಗಳವಾಗಿ ದೂರವಾದ ಉದಾಹರಣೆಗಳು ಹಲವಿರಬಹುದು; ಆದರೆ ತಾಯಿ ಮಗನನ್ನು ಬಿಟ್ಟು ಹೋಗುವುದಿಲ್ಲ. ಅವನು ಎಷ್ಟೇ ತಪ್ಪಿದ್ದರೂ ಅವನನ್ನು ಎದೆಗೆ ಹಚ್ಚಿಕೊಂಡೇ ಬದುಕಲು ಪ್ರಯತ್ನಿಸುತ್ತಾಳೆ.

ಏಕೆಂದರೆ ಮಗುವಿನ ಹೃದಯವನ್ನು ತನ್ನ ಹೊಟ್ಟೆಯೊಳಗೆ ಹೊತ್ತು ಈ ಭೂಮಿಗೆ ತಂದವಳು ಅವಳು. ಆ ಕಾರಣಕ್ಕೇ

**ತಾಯಿಯ ಪ್ರೀತಿಗೆ ಪರ್ಯಾಯವಿಲ್ಲ,**
**ತಾಯಿಯ ಮಡಿಲಿಗೆ ಸಮಾಧಾನವಿಲ್ಲ,**
**ತಾಯಿಯ ಹೃದಯಕ್ಕೆ ಅಳತೆಯಿಲ್ಲ.**

---

# ಮಾತೃದೇವೋ ಭವ

ಇಂದು ತಾಯಂದಿರ ದಿನ. ಈ ಸಂದರ್ಭದಲ್ಲಿ ಬದುಕಿನ ಅತ್ಯಂತ ಪವಿತ್ರವಾದ 'ಮಾತೃತ್ವ'ದ ಕುರಿತು ಭಾರತೀಯ ತತ್ವಜ್ಞಾನ ಮತ್ತು ಸಾಹಿತ್ಯದ ಹಿನ್ನೆಲೆಯಲ್ಲಿ ಒಂದು ಸಮಗ್ರ ಅವಲೋಕನ ಇಲ್ಲಿದೆ. ಭಾರತೀಯ ಸಂಸ್ಕೃತಿಯಲ್ಲಿ ತಾಯಿಯನ್ನು ಕೇವಲ ಕುಟುಂಬದ ಒಂದು ಭಾಗವಾಗಿ ನೋಡದೆ, ಆಕೆಯನ್ನು 'ದೈವ ಸ್ವರೂಪಿ' ಎಂದು ಆರಾಧಿಸಲಾಗುತ್ತದೆ. ಉಪನಿಷತ್ತುಗಳು "ಮಾತೃದೇವೋ ಭವ" ಎಂದು ಮೊದಲು ಹೇಳುವ ಮೂಲಕ, ದೇವರಿಗಿಂತ ಮೊದಲು ತಾಯಿಯನ್ನು ಗೌರವಿಸಬೇಕು ಎಂಬ ಮೌಲ್ಯವನ್ನು ನಮಗೆ ಕಲಿಸಿಕೊಟ್ಟಿವೆ.

ನಮ್ಮ ಸಂಸ್ಕೃತಿಯಲ್ಲಿ ಪ್ರತಿ ಸ್ತ್ರೀಯನ್ನು ಜಗನ್ಮಾತೆಯ ಅಂಶವೆಂದು ಭಾವಿಸಲಾಗುತ್ತದೆ. ದುರ್ಗಾ ಸಪ್ತಶತಿಯ ಈ ಪ್ರಸಿದ್ಧ ಮಂತ್ರವು ಇದನ್ನು ಪುಷ್ಟೀಕರಿಸುತ್ತದೆ:

**ಯಾ ದೇವಿ ಸರ್ವ ಭೂತೇಷು ಮಾತೃ ರೂಪೇಣ ಸಂಸ್ಥಿತಾ ।**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥**

ಯಾವ ದೇವಿಯು ಎಲ್ಲಾ ಜೀವಿಗಳಲ್ಲಿ ತಾಯಿಯ ರೂಪದಲ್ಲಿ ನೆಲೆಸಿದ್ದಾಳೆಯೋ, ಅಂತಹ ದೇವಿಗೆ ನಮ್ಮ ಅನಂತ ನಮನಗಳು." ಅಮ್ಮನ ಪ್ರೀತಿಯಲ್ಲಿ ಆ ದೇವಿಯ ಕಾರುಣ್ಯ ಅಡಗಿದೆ ಎಂಬುದು ಇದರ ತಾತ್ಪರ್ಯ.

ಆದಿ ಶಂಕರಾಚಾರ್ಯರ 'ಮಾತೃ ಪಂಚಕ' ಸ್ತೋತ್ರದ ಐದೂ ಶ್ಲೋಕಗಳ ಅನ್ವಯ, ಅಕ್ಷರಶಃ ಅರ್ಥ ಮತ್ತು ಅವುಗಳ ಆಳವಾದ ಭಾವವನ್ನು ಇಲ್ಲಿ ಸಂಪೂರ್ಣವಾಗಿ ವಿವರಿಸಲಾಗಿದೆ. ಈ ವಿವರಣೆಯು ತಾಯಿಯ ತ್ಯಾಗವನ್ನು ಗರ್ಭಾವಸ್ಥೆಯಿಂದ ಅಂತ್ಯಕಾಲದವರೆಗೆ ಸಾರುತ್ತದೆ.

**1. ಮೊದಲನೆಯ ಶ್ಲೋಕ: ಗರ್ಭಾವಸ್ಥೆಯ ಕಷ್ಟಗಳು :**

**ಮುಕ್ತಾಮಣಿ ಸ್ತವನಮಸ್ತ ಸಮಸ್ತ ದೋಷಂ**
**ಧ್ಯಾಯನ್ನಿಶಂ ತವ ಪದಂ ಮೃದುಪಲ್ಲವಾಭಮ್ ।**
**ಗರ್ಭೇ ಯದಾರ್ಪಿತಮಭೂತ್ತವ ದೇಹಪೀಡಾ**
**ತತ್ಕ್ಷಂತುಮರ್ಹಸಿ ಶಿಶೋಃ ಪ್ರಣತಸ್ಯ ಮಾತಃ ॥**


ಈ ಶ್ಲೋಕದಲ್ಲಿ ಶಂಕರಾಚಾರ್ಯರು ಮಗು ತಾಯಿಯ ಗರ್ಭದಲ್ಲಿದ್ದಾಗ ಅವಳಿಗೆ ನೀಡುವ ದೈಹಿಕ ತೊಂದರೆಗಳನ್ನು ಸ್ಮರಿಸುತ್ತಾರೆ. ತಾಯಿಯ ಪಾದಗಳು ಚಿಗುರು ಎಲೆಯಂತೆ ಮೃದುವಾಗಿವೆ. ಆದರೆ ಮಗು ಒಂಬತ್ತು ತಿಂಗಳು ಗರ್ಭದಲ್ಲಿ ಬೆಳೆಯುತ್ತಿರುವಾಗ ಆಕೆಯ ದೇಹದ ಮೇಲೆ ಅತಿಯಾದ ಒತ್ತಡ ಬೀಳುತ್ತದೆ. ಆಕೆಗೆ ಸರಿಯಾಗಿ ಮಲಗಲು, ಕುಳಿತುಕೊಳ್ಳಲು ಅಥವಾ ನಡೆಯಲು ಸಾಧ್ಯವಾಗುವುದಿಲ್ಲ. ಪ್ರತಿ ಚಲನೆಯೂ ಅವಳಿಗೆ ಯಾತನೆಯನ್ನು ನೀಡುತ್ತದೆ. ಮಗು ಹೊಟ್ಟೆಯಲ್ಲಿದ್ದಾಗ ಒದೆಯುವುದು ಅಥವಾ ಚಲಿಸುವುದು ತಾಯಿಗೆ ಸಂತೋಷ ನೀಡಿದರೂ, ದೈಹಿಕವಾಗಿ ಅದು ನೋವಿನಿಂದ ಕೂಡಿದ ಪ್ರಕ್ರಿಯೆ. "ಅಮ್ಮಾ, ಅರಿಯದ ವಯಸ್ಸಿನಲ್ಲಿ ನಾನು ಗರ್ಭದಲ್ಲಿ ನಿನಗೆ ನೀಡಿದ ಆ ಎಲ್ಲಾ ದೈಹಿಕ ಪೀಡೆಗಳನ್ನು, ನಿನ್ನ ಪಾದಗಳಿಗೆ ಶರಣಾಗಿರುವ ಈ ಮಗನ ಮೇಲೆ ಕರುಣೆಯಿಟ್ಟು ಕ್ಷಮಿಸು" ಎಂದು ಶಂಕರರು ಪ್ರಾರ್ಥಿಸುತ್ತಾರೆ.

**2. ಎರಡನೆಯ ಶ್ಲೋಕ: ಪ್ರಸವ ವೇದನೆ ಮತ್ತು ಶಿಶುಪಾಲನೆ :**

**ಆಸ್ತಾಂ ತಾವದಿಯಂ ಪ್ರಸೂತಿ ಸಮಯೇ ದುರ್ವಾರಶೂಲವ್ಯಥಾ**
**ನೈರುಚ್ಯಂ ತನುಶೋಷಣಂ ಮಲಮಯೀ ಶಯ್ಯ ಚ ಸಾಂವಾತ್ಸರೀ ।**
**ಏಕಸ್ಯಾಪಿ ನ ಶಕ್ಯತೇ ಪ್ರತಿಫಲಂ ಕರ್ತುಂ ಮಯಾ ನಿಷ್ಕೃತಿಃ**
**ವಿಪ್ರೋऽಸೌ ಪ್ರಣತೋऽಧುನಾಪಿ ಭವತೀಂ ತತ್ಕ್ಷಂತುಮರ್ಹಸಿ ಮಾತಃ ॥**

**ವಿವರವಾದ ಅರ್ಥ:**

**ಈ ಶ್ಲೋಕವು ತಾಯಿಯ ತ್ಯಾಗದ ಪರಾಕಾಷ್ಠೆಯನ್ನು** ವರ್ಣಿಸುತ್ತದೆ. ಇಲ್ಲಿ ಮೂರು ಮುಖ್ಯ ಘಟ್ಟಗಳಿವೆ:



1. ದುರ್ವಾರಶೂಲವ್ಯಥಾ: ಪ್ರಸವದ ಸಮಯದಲ್ಲಿ ತಾಯಿ ಅನುಭವಿಸುವ ನೋವು ಹರಿತವಾದ ಆಯುಧದಿಂದ ಇರಿದಂತೆ ಇರುತ್ತದೆ. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ.
2. ನೈರುಚ್ಯಂ ತನುಶೋಷಣಂ: ಗರ್ಭಿಣಿಯಾಗಿದ್ದಾಗ ಮತ್ತು ಮಗುವಿಗೆ ಹಾಲುಣಿಸುವ ಸಮಯದಲ್ಲಿ ತಾಯಿ ತನಗೆ ಇಷ್ಟವಾದ ಆಹಾರವನ್ನು ತ್ಯಜಿಸಿ ಮಗುವಿನ ಆರೋಗ್ಯಕ್ಕೆ ಪೂರಕವಾದದ್ದನ್ನೇ ಸೇವಿಸುತ್ತಾಳೆ. ತನ್ನ ಶಕ್ತಿಯನ್ನು ಹಾಲಿನ ರೂಪದಲ್ಲಿ ಮಗುವಿಗೆ ನೀಡಿ ಆಕೆಯ ದೇಹ ಸವಕಳಿಯಾಗುತ್ತದೆ.
3. ಮಲಮಯೀ ಶಯ್ಯ: ಮಗು ಹಾಸಿಗೆಯನ್ನು ಮಲಮೂತ್ರಗಳಿಂದ ಅಶುಚಿ ಮಾಡಿದಾಗ, ಮಗು ಒದ್ದೆಯಾಗಬಾರದೆಂದು ಅದನ್ನು ಒಣ ಜಾಗಕ್ಕೆ ಸರಿಸಿ, ತಾಯಿ ಆ ಒದ್ದೆಯಾದ ಅಥವಾ ಅಶುಚಿಯಾದ ಜಾಗದಲ್ಲೇ ಮಲಗುತ್ತಾಳೆ. ಇದು ಒಂದು ದಿನದ ಕೆಲಸವಲ್ಲ, ವರ್ಷಗಟ್ಟಲೆ ನಡೆಯುವ ಪ್ರಕ್ರಿಯೆ. "ಅಮ್ಮಾ, ಈ ಯಾವ ತ್ಯಾಗಕ್ಕೂ ಮರುಪಾವತಿ ಮಾಡಲು ಈ ಜಗತ್ತಿನ ಯಾವುದೇ ವಸ್ತುವಿನಿಂದ ಸಾಧ್ಯವಿಲ್ಲ. ನಿನ್ನ ಋಣ ತೀರಿಸಲಾಗದ ಈ ಮಗನನ್ನು ಕ್ಷಮಿಸು" ಎನ್ನುತ್ತಾರೆ ಶಂಕರರು.

**3. ಮೂರನೆಯ ಶ್ಲೋಕ: ಹಸಿವು ಮತ್ತು ಪ್ರೀತಿಯ ಅಮೃತ :**

**ಗುರುಕುಲಮುಪಗಮ್ಯ ಶಿಕ್ಷಿತೋऽಹಂ**
**ವಿವಿಧಕಲಾಃ ಸಕಲಾಶ್ಚ ಗೋಪಿತಾಃ ಸ್ಯುಃ ।**
**ತವ ಸ್ತನದುಗ್ಧಪಾನಧನ್ಯಂ**
**ಸತತಮಿದಂ ಚ ಹಿತಂ ಸ್ಮರಾಮಿ ಮಾತಃ ॥**

**ವಿವರವಾದ ಅರ್ಥ:** ಮಗು ಬೆಳೆದು ದೊಡ್ಡವನಾದ ಮೇಲೆ ಗಳಿಸುವ ವಿದ್ಯಾಭ್ಯಾಸದ ಕುರಿತು ಇಲ್ಲಿ ಪ್ರಸ್ತಾಪವಿದೆ. ಶಂಕರಾಚಾರ್ಯರು ಹೇಳುತ್ತಾರೆ: "ನಾನು ವಿದ್ವಾಂಸನಾಗಿ ಗುರುಕುಲದಲ್ಲಿ ಸಕಲ ಕಲೆಗಳನ್ನು ಮತ್ತು ಶಾಸ್ತ್ರಗಳನ್ನು ಕಲಿತಿರಬಹುದು. ಜಗತ್ತು ನನ್ನನ್ನು ಮಹಾನ್ ಜ್ಞಾನಿ ಎಂದು ಕೊಂಡಾಡಬಹುದು. ಆದರೆ, ಅಮ್ಮಾ, ನಾನು ಬಾಲ್ಯದಲ್ಲಿ ಹಸಿದಾಗ ನೀನು ನನಗೆ ನೀಡಿದ ಆ ಎದೆಹಾಲು ಇದೆಯಲ್ಲವೇ, ಅದು ಜಗತ್ತಿನ ಸಕಲ ವಿದ್ಯೆಗಳಿಗಿಂತ ದೊಡ್ಡದು." ತಾಯಿ ನೀಡುವ ಹಾಲು ಕೇವಲ ಆಹಾರವಲ್ಲ, ಅದು ಮಗುವಿನ ದೇಹ ಮತ್ತು ಆತ್ಮಕ್ಕೆ ನೀಡುವ ಸಂಸ್ಕಾರ ಮತ್ತು ಪ್ರೀತಿ. ಜ್ಞಾನಕ್ಕಿಂತ ಮಮತೆ ದೊಡ್ಡದು ಎಂಬ ಸತ್ಯವನ್ನು ಈ ಶ್ಲೋಕ ಸಾರುತ್ತದೆ.

**4. ನಾಲ್ಕನೆಯ ಶ್ಲೋಕ: ಅಂತ್ಯಕಾಲದ ಅಸಹಾಯಕತೆ :**

**ನ ದತ್ತಂ ಮಾತಸ್ತೇ ಮರಣಸಮಯೇ ತೋಯಮಪಿ ವಾ ನ ದತ್ತಂ ತೇ ಶ್ರಾದ್ಧಂ ನ ಚ ಜನನಿ ದತ್ತಂ ತಿಲಜಲಮ್ ।**
**ನ ಜಪ್ತೋ ನೀತಸ್ತೇ ನ ಚ ಸಮುಚಿತೋ ಮಂತ್ರನಿಕರಃ**
**ಕ್ಷಂತವ್ಯೋ ಮೇ ದೋಷಃ ಸಕಲಮಪಿ ಮಾತಃ ಪ್ರಣಮತಃ ॥**

**ವಿವರವಾದ ಅರ್ಥ:** ಇದು ಅತ್ಯಂತ ಭಾವುಕವಾದ ಶ್ಲೋಕ. ಶಂಕರಾಚಾರ್ಯರು ಸನ್ಯಾಸಿಯಾಗಿದ್ದರಿಂದ ಸಾಂಪ್ರದಾಯಿಕವಾಗಿ ಮಗನಾಗಿ ಮಾಡಬೇಕಾದ ಕರ್ತವ್ಯಗಳನ್ನು ಮಾಡಲು ಅವರಿಗೆ ಸಾಧ್ಯವಾಗಲಿಲ್ಲ.

"ಹೇ ಜನನಿ, ನಿನ್ನ ಸಾವಿನ ಸಮಯದಲ್ಲಿ ಬಾಯಿಗೆ ಒಂದು ಹನಿ ನೀರು ಬಿಡಲು ನಾನು ನಿನ್ನ ಹತ್ತಿರ ಇರಲಿಲ್ಲ. ಶಾಸ್ತ್ರಗಳು ಹೇಳುವಂತೆ ಶ್ರಾದ್ಧ ಕರ್ಮಗಳನ್ನಾಗಲಿ ಅಥವಾ ತಿಲಜಲವನ್ನಾಗಲಿ ನೀಡಲು ಸನ್ಯಾಸ ಧರ್ಮ ನನಗೆ ಅಡ್ಡಿಯಾಗಬಹುದು. ನಿನ್ನ ಚಿತೆಯ ಮುಂದೆ ನಿಂತು ವೇದ ಮಂತ್ರಗಳನ್ನು ಪಠಿಸುವ ಸೌಭಾಗ್ಯ ನನಗಿಲ್ಲದಿರಬಹುದು." ಇಲ್ಲಿ ಶಂಕರರು ಕೇವಲ ತಮ್ಮ ವೈಯಕ್ತಿಕ ಸ್ಥಿತಿಯನ್ನಷ್ಟೇ ಅಲ್ಲ, ಜಗತ್ತಿನ ಎಲ್ಲಾ ಮಕ್ಕಳ ಪ್ರತಿನಿಧಿಯಾಗಿ ಮಾತನಾಡುತ್ತಿದ್ದಾರೆ. ಬದುಕಿನ ಧಾವಂತದಲ್ಲಿ ತಾಯಿಯ ಅಂತ್ಯಕಾಲದಲ್ಲಿ ಜೊತೆಗಿರಲಾಗದ ಮಕ್ಕಳ ನೋವು ಮತ್ತು ಆ ತಾಯಿಯ ಕ್ಷಮೆಯ ಮೇಲೆ ಇಟ್ಟಿರುವ ನಂಬಿಕೆ ಇಲ್ಲಿ ಎದ್ದು ಕಾಣುತ್ತದೆ.

**5. ಐದನೆಯ ಶ್ಲೋಕ: ತಾಯಿಯೇ ಪರಮ ಮಂತ್ರ:**

**ಅಮ್ಮೇತಿ ತಾತೇತಿ ವಿಪತ್ಕಾಲೇ ಹರಿರಿತಿ ಬ್ರುವನ್ ।**
**ಯಃ ಪ್ರಯಾತಿ ತಂ ಮಾತುಃ ಪಾದಕಮಲಂ ಸ್ಮರಾಮಿ ॥**

**ವಿವರವಾದ ಅರ್ಥ:** ಈ ಅಂತಿಮ ಶ್ಲೋಕವು ಮನುಷ್ಯನ ಅಂತಿಮ ಕ್ಷಣದ ಮನಸ್ಥಿತಿಯನ್ನು ವಿವರಿಸುತ್ತದೆ. ಮನುಷ್ಯನಿಗೆ ಯಾವುದಾದರೂ ತೀವ್ರವಾದ ಸಂಕಷ್ಟ ಬಂದಾಗ ಅಥವಾ ಮರಣದ ದವಡೆಯಲ್ಲಿದ್ದಾಗ, ಅರಿವಿಲ್ಲದೆಯೇ ಬಾಯಿಂದ ಬರುವ ಮೊದಲ ಶಬ್ದ "ಅಮ್ಮಾ". ನಂತರ ತಂದೆಯನ್ನೋ ಅಥವಾ ದೇವರನ್ನೋ ಸ್ಮರಿಸುತ್ತಾನೆ. ಅಂದರೆ, ದೇವರಿಗಿಂತಲೂ ಹತ್ತಿರದ ಶಕ್ತಿ ಎಂದರೆ ಅದು ತಾಯಿ. ಬದುಕಿನ ಕೊನೆಯ ಉಸಿರಿನಲ್ಲೂ ನೆನಪಾಗುವ ಆ "ಅಮ್ಮ" ಎಂಬ ಶಬ್ದವೇ ಒಂದು ಮೋಕ್ಷದಾಯಕ ಮಂತ್ರ. ಅಂತಹ ಪವಿತ್ರವಾದ ತಾಯಿಯ ಪಾದಕಮಲಗಳನ್ನು ನಾನು ಸದಾ ಧ್ಯಾನಿಸುತ್ತೇನೆ ಎಂದು ಶಂಕರಾಚಾರ್ಯರು ಸ್ತೋತ್ರವನ್ನು ಮುಕ್ತಾಯಗೊಳಿಸುತ್ತಾರೆ.

ಈ ಐದೂ ಶ್ಲೋಕಗಳು ನಮಗೆ ಕಲಿಸುವ ಪಾಠವೇನೆಂದರೆ, ತಾಯಿ ಕೇವಲ ಜನ್ಮದಾತೆ ಮಾತ್ರವಲ್ಲ; ಆಕೆ ನಮಗೆ ನೀಡಿದ ಪ್ರತಿಯೊಂದು ಸೌಲಭ್ಯದ ಹಿಂದೆ ದೊಡ್ಡ ಪ್ರಮಾಣದ ನೋವು ಮತ್ತು ತ್ಯಾಗವಿದೆ. ಈ ತಾಯಂದಿರ ದಿನದಂದು, ಕೇವಲ ಆಚರಣೆಯಂತೆ ಆಚರಿಸದೆ ಶಂಕರಾಚಾರ್ಯರ ಈ ಮಾತುಗಳನ್ನು ನೆನಪಿಸಿಕೊಂಡು ನಮ್ಮ ತಾಯಂದಿರನ್ನು ಗೌರವಿಸುವುದೇ ನಿಜವಾದ 'ಮಾತೃ ಪೂಜೆ'. ತಾಯಿಯ ಶಕ್ತಿಯನ್ನು ಕೇವಲ ಒಬ್ಬ ವ್ಯಕ್ತಿಯಾಗಿ ನೋಡಬಾರದು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಪ್ರಕೃತಿಯನ್ನು "ಜಗತ್ತಿನ ತಾಯಿ" ಎಂದು ಕರೆದಿದ್ದಾನೆ. ಕರ್ತವ್ಯ ಮತ್ತು ನಿಸ್ವಾರ್ಥ ಸೇವೆಯ ಕುರಿತು ಗೀತೆಯು ಹೇಳುವ ಸಂದೇಶಕ್ಕೆ ತಾಯಿಯೇ ಅತ್ಯುತ್ತಮ ಉದಾಹರಣೆ. 14ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಕೃಷ್ಣನು "ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಮ್..." ಎಂದು ಹೇಳುತ್ತಾ ತಾಯಿ ಸೃಷ್ಟಿಯ ಮೂಲ ಎನ್ನುತ್ತಾನೆ. ಆಕೆಯ ಸಹನೆ ಮತ್ತು ಪೋಷಿಸುವ ಗುಣವನ್ನು ದೈವೀ ಸಂಪತ್ತು (Divine Qualities) ಎಂದು ಪರಿಗಣಿಸುತ್ತಾನೆ.

ಕನ್ನಡದ ಭಗವದ್ಗೀತೆ ಎಂದೇ ಕರೆಯಲ್ಪಡುವ 'ಮಂಕುತಿಮ್ಮನ ಕಗ್ಗ'ದಲ್ಲಿ ಡಿ.ವಿ.ಗುಂಡಪ್ಪನವರು ತಾಯಿಯ ಸ್ಥಾನವನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ:

**ಬಗೆಯಬಲ್ಲವನೇನೊ ಜಗದಗಲದಂದವನು**
**ಪಗಡೆದಾಟದ ಪಾಳೆಯದ ಹೂಟದಂದವನು**
**ಮೊಗೆಮೊಗೆದು ಕುಡಿಯಮ್ಮ ಮಮತೆಯನು ಸುರಿಸುವಾ**
**ಜಗದಂಬೆ ತಾಯೆನಿತು – ಮಂಕುತಿಮ್ಮ**

ಈ ಜಗತ್ತಿನ ರಹಸ್ಯವನ್ನು ಅರಿಯಲು ಯಾರಿಗೂ ಸಾಧ್ಯವಿಲ್ಲ. ಆದರೆ ತಾಯಿಯ ರೂಪದಲ್ಲಿ ಹರಿಯುವ ಆ ಜಗದಂಬೆಯ ಮಮತೆಯ ಪ್ರವಾಹವನ್ನು ಎಷ್ಟು ಕುಡಿದರೂ ಸಾಲದು. ಭಗವಂತನು ತಾಯಿಯ ರೂಪದಲ್ಲಿ ಬಂದು ನಮ್ಮನ್ನು ಸಲಹುತ್ತಿದ್ದಾನೆ ಎಂಬುದು ಡಿವಿಜಿಯವರ ನಂಬಿಕೆ.

ನಮ್ಮ ಸಂಪ್ರದಾಯದಲ್ಲಿ ತಾಯಿಗೆ ಸಂಬಂಧಿಸಿದ ಕೆಲವು ವಿಶೇಷ ಸಂಗತಿಗಳನ್ನು ಈ ರೀತಿ ವಿವರಿಸಬಹುದು:


**ಗರ್ಭ-ಧಾರಣ:** ಇದು ಕೇವಲ ದೈಹಿಕ ಕ್ರಿಯೆಯಲ್ಲ, ಒಂದು ಆತ್ಮವನ್ನು ಈ ಭೂಮಿಗೆ ಬರಮಾಡಿಕೊಳ್ಳುವ ತಪಸ್ಸು. ಇದಕ್ಕಾಗಿ ತಾಯಿ ತನ್ನ ಪ್ರಾಣವನ್ನೇ ಪಣಕ್ಕಿಡುತ್ತಾಳೆ.

ಶಕ್ತಿ ಸ್ವರೂಪ: ಕುಟುಂಬದ ಯೋಗಕ್ಷೇಮವನ್ನು ಕಾಪಾಡುವಲ್ಲಿ ತಾಯಿ ಮನೆಯ 'ಶಕ್ತಿ'ಯಾಗಿರುತ್ತಾಳೆ. ಆಕೆಯ ಪ್ರಾರ್ಥನೆ ಮತ್ತು ಹಾರೈಕೆಗಳು ಮಗುವಿಗೆ ದೊಡ್ಡ ರಕ್ಷಣಾ ಕವಚಗಳಾಗಿವೆ.

ಪ್ರಥಮ ಗುರು: ಶಾಲೆಗೆ ಹೋಗುವ ಮೊದಲೇ ಮಗುವಿಗೆ ಸಂಸ್ಕಾರ, ಭಾಷೆ ಮತ್ತು ಪ್ರೀತಿಯನ್ನು ಕಲಿಸುವವಳು ತಾಯಿ. ಹಾಗಾಗಿ ಆಕೆಯನ್ನು ಪ್ರಥಮ ಗುರುವೆಂದು ಕರೆಯಲಾಗುತ್ತದೆ.

ಭಾರತೀಯ ಪರಂಪರೆಯಲ್ಲಿ ಮಾತೃತ್ವ ಎಂಬುದು ಕೇವಲ ಜನ್ಮ ನೀಡುವುದಕ್ಕೆ ಸೀಮಿತವಲ್ಲ; ಅದು 'ವಾತ್ಸಲ್ಯ' ಎಂಬ ನಿಸ್ವಾರ್ಥ ಪ್ರೇಮದ ಸಂಕೇತ. ನಾವು ಇಂದು ಎಷ್ಟೇ ದೊಡ್ಡ ಅಧಿಕಾರಿಗಳಾಗಿರಲಿ ಅಥವಾ ಸಾಧಕರಾಗಿರಲಿ, ನಮ್ಮ ಪ್ರತಿಯೊಂದು ಉಸಿರಿನ ಹಿಂದೆ ತಾಯಿಯ ಪ್ರಾರ್ಥನೆ ಇರುತ್ತದೆ. ಮಾರುಕಟ್ಟೆಯಲ್ಲಿ ಸಿಗುವ ಉಡುಗೊರೆಗಳಿಗಿಂತ ಆಕೆಗೆ ಬೇಕಾಗಿರುವುದು ನಮ್ಮ ಪ್ರೀತಿಯ ಒಂದೆರಡು ಮಾತುಗಳು ಮತ್ತು ಗೌರವ.

ಬದುಕಿನ ಕಷ್ಟದ ಸಮಯದಲ್ಲಿ ನಮಗೆ ಧೈರ್ಯ ತುಂಬುವ ಶಕ್ತಿ ಆಕೆ. ಸಮಾಜವು ಎಷ್ಟೇ ಮುಂದುವರೆದರೂ, ತಾಯಿಯ ಸ್ಥಾನಕ್ಕೆ ಪರ್ಯಾಯ ಮತ್ತೊಂದಿಲ್ಲ. ನಾಳೆ ತಾಯಂದಿರ ದಿನದಂದು ನಾವು ಕೇವಲ ಶುಭಾಶಯ ತಿಳಿಸುವುದಲ್ಲದೆ, ಆಕೆಯ ಆರೋಗ್ಯ ಮತ್ತು ಸಂತೋಷದ ಕಡೆಗೆ ಗಮನ ಹರಿಸೋಣ. "ಮಾತೃ ದೇವೋ ಭವ" ಎಂಬ ಮಾತಿನಂತೆ, ಮನೆಯಲ್ಲಿರುವ ತಾಯಿಯನ್ನು ಗೌರವಿಸುವುದೇ ನಿಜವಾದ ದೈವಭಕ್ತಿ. ಆಕೆಯ ಮುಖದಲ್ಲಿ ಮೂಡುವ ಒಂದು ಸಣ್ಣ ನಗು ನಮಗೆ ಕೋಟಿ ಜನ್ಮದ ಪುಣ್ಯ ತರಬಲ್ಲದು.




ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

ತಾಯಿಯ ಸೇವೆ ಎಂದರೆ ಕೇವಲ ಒಂದು ದಿನದ ಆಚರಣೆಯಲ್ಲ, ಅದು ಪ್ರತಿ ದಿನದ ಕೃತಜ್ಞತೆ. ವಿನಮ್ರರಾಗಿ ಆಕೆಯ ಪಾದಗಳಿಗೆ ಶಿರಬಾಗೋಣ.

**ಎಲ್ಲಾ ಅಮ್ಮಂದಿರಿಗೂ 'ತಾಯಂದಿರ ದಿನ'ದ ಹಾರ್ದಿಕ ಶುಭಾಶಯಗಳು.**

---

# "ಸ್ವರ ಸಂಜೀವಿನಿ: ಪಲ್ಲವಿ ಮುಚ್ಚಾಲ್"





ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುದ್ಧಿ - 16

ಸಂಗೀತಕ್ಕೆ ಸಾವು ಗೆಲ್ಲುವ ಶಕ್ತಿ ಇದೆ ಎಂಬ ಮಾತನ್ನು ಅಕ್ಷರಶಃ ನಿಜವಾಗಿಸಿದವರು ಗಾಯಕಿ ಪಲ್ಲವಿ ಮುಚ್ಚಾಲ್. ಕೇವಲ ಗಾಯಕಿಯಾಗಿ ಉಳಿಯದೆ ಸಾವಿರಾರು ಬಡ ಮಕ್ಕಳ ಬದುಕಿನ ಸಂಜೀವಿನಿಯಾಗಿ ಮಿಂಚುತ್ತಿರುವ ಇವರ ಜೀವನ ಪಯಣ ಇಂದಿನ ಯುವಜನತೆಗೆ ಒಂದು ದಿಕ್ಸೂಚಿ.

ಪಲ್ಲವಿ ಅವರ ಈ ಪವಿತ್ರ ಕಾರ್ಯ ಆರಂಭವಾಗಿದ್ದು ಬಾಲ್ಯದಲ್ಲೇ. ಕಾರ್ಗಿಲ್ ಯುದ್ಧದ ಸಮಯದಲ್ಲಿ ದೇಶಕ್ಕಾಗಿ ಧನಸಹಾಯ ಮಾಡಲು ಅವರು ಸಣ್ಣ ಪ್ರಾಯದಲ್ಲೇ ಹಾಡಲು ಶುರುಮಾಡಿದರು. ಮುಂದೆ ಒಮ್ಮೆ ಹೃದಯದ ಕಾಯಿಲೆಯಿಂದ ಬಳಲುತ್ತಿದ್ದ ಮಗುವಿನ ಚಿಕಿತ್ಸೆಗಾಗಿ ತಮ್ಮ ಗಾಯನದ ಮೂಲಕ ಹಣ ಸಂಗ್ರಹಿಸಿದರು. ಅಲ್ಲಿಂದ ಇಂದಿನವರೆಗೆ ಸುಮಾರು 3,000ಕ್ಕೂ ಹೆಚ್ಚು ಮಕ್ಕಳ ಯಶಸ್ವಿ ಶಸ್ತ್ರಚಿಕಿತ್ಸೆಗೆ ಇವರು ಕಾರಣರಾಗಿದ್ದಾರೆ.

ಯುವ ಪೀಳಿಗೆ ಕೇವಲ ವೈಯಕ್ತಿಕ ಲಾಭಕ್ಕಾಗಿ ತಮ್ಮ ಕೌಶಲಗಳನ್ನು ಬಳಸುವ ಕಾಲದಲ್ಲಿ, ಪಲ್ಲವಿ ತಮ್ಮ ಗಾಯನವನ್ನೇ ಸಾಮಾಜಿಕ ಸೇವೆಯನ್ನಾಗಿ ಪರಿವರ್ತಿಸಿದ್ದಾರೆ. ಅವರ ಪ್ರತಿ ಸಂಗೀತ ಕಚೇರಿಯ ಆದಾಯವು ಬಡ ಮಕ್ಕಳ ಶಸ್ತ್ರಚಿಕಿತ್ಸೆಗೆ ಮೀಸಲಿಡಲಾಗುತ್ತದೆ. ಇದು ಕಲೆ ಎನ್ನುವುದು ಕೇವಲ ಮನರಂಜನೆಯಲ್ಲ, ಅದು ಸಮಾಜದ ನೋವು ನೀಗಿಸುವ ಮದ್ದಾಗಬಲ್ಲದು ಎಂಬುದನ್ನು ಸಾಬೀತುಪಡಿಸಿದೆ.

ಅವರ ಈ ನಿಸ್ವಾರ್ಥ ಸೇವೆಗಾಗಿ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಮತ್ತು ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಸೇರಿದ್ದರೂ, ಪಲ್ಲವಿ ಅವರಲ್ಲಿ ಅಹಂಕಾರ ಸುಳಿದಿಲ್ಲ. ಸಾಧನೆ ಎಂದರೆ ಪ್ರಶಸ್ತಿಗಳಲ್ಲ, ಬದಲಾಗಿ ನಮ್ಮಿಂದ ಉಳಿದವರ ಜೀವ ಉಳಿಯುವುದು ಎಂಬ ತತ್ವವನ್ನು ಅವರು ಪಾಲಿಸುತ್ತಿದ್ದಾರೆ.

ಸಮಾಜಕ್ಕೆ ಸೇವೆ ಸಲ್ಲಿಸಲು ನಮಗೆ ಅಪಾರ ಸಂಪತ್ತು ಬೇಕಿಲ್ಲ, ಬದಲಾಗಿ ಇತರರ ನೋವಿಗೆ ಸ್ಪಂದಿಸುವ ಮನಸ್ಸಿದ್ದರೆ ಸಾಕು ಎಂಬುದೇ ಪಲ್ಲವಿ ಅವರ ಬದುಕು ನೀಡುವ ದೊಡ್ಡ ಸಂದೇಶ. ನಮ್ಮ ವೃತ್ತಿಯ ಜೊತೆಗೆ ಸಮಾಜದ ಜವಾಬ್ದಾರಿಯನ್ನು ಹೊತ್ತಾಗ ಮಾತ್ರ ಜೀವನಕ್ಕೆ ಪೂರ್ಣ ಅರ್ಥ ಸಿಗುತ್ತದೆ. ಸಂಗೀತದ ಮೂಲಕ ಬಡವರ ಕಣ್ಣೀರು ಒರೆಸುತ್ತಿರುವ ಪಲ್ಲವಿ ಮುಚ್ಚಾಲ್, ಇಂದಿನ ಯುವ ಸಮಾಜಕ್ಕೆ ನೈಜ ಮತ್ತು ಸ್ಫೂರ್ತಿದಾಯಕ ಮಾದರಿ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,